Sri C. J. MUCKANNAPPA.—You must protect the privileges, rights and dignity of this House. If you do not do it, to whom else we have to represent?

Mr. SPEAKER.—He is taking wrong premises and coming to wrong conclusions.

Sri V. M. DEO (Gubbi).—The Economy and Resources Committee say that what is said in the Assembly is also being repeated in the Upper House and from this point of view it is doubtful whether it is of any real value. The convention that has been followed everywhere is that a measure of this kind will always be discussed in the Assembly first and then it goes there. It only indicates one thing and that is that the Government agrees with that report and are thinking of scrapping the Upper House. For the present, they are there and let them discuss. The change in procedure has affected our rights. I, therefore, request you to uphold our rights.

Mr. SPEAKER.—I understand his feelings. I will view it from all aspects.

ADDITIONAL AND SUPPLEMENTARY DEMANDS FOR GRANTS FOR 1964-65 (1st Instalment).

Sri S. NIJALINGAPPA (Chief Minister).—Sir, on the recommendation the Governor of Mysore, I beg to move:

> "That a further sum not exceeding Rs. 1,500 be granted to the Government to defray the charges which will come in course of payment during the financial year for the period ending 31st day of March 1965, in respect of Demand No. 10—General Administration '."

Mr. SPEAKER.—Motion moved:

> "That a further sum not excedding Rs. 1,500 be granted to the Government to defray the charges which will come in course of payment during the financial year for the period ending 31st day of March 1965, in respect of Demand No. 10—'Genernl Administration '."

I inform the members that all the other demands are deemed to have been moved and that they are open for debate.

† ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಈಗ ತಾನೆ ಮಾನ್ಯ ಮುಖ್ಯ ಮಂತ್ರಿಗಳು ಅರ್ಥ ಸಚಿವರ ಜವಾಬ್ದಾರಿ ತೆಗೆದುಕೊಂಡು ಸಭೆಯ ಮುಂದೆ ಹೆಚ್ಚುವರಿ ಬೇಡಿಕೆಗಳನ್ನು ಮಂಡಿಸಿದ್ದಾರೆ. ಕೇಂದ್ರ ಸರಕಾರದಿಂದ 265 ಲಕ್ಷ ರೂಪಾಯಿ ಬಂದಿದೆ ಎಂದು ಹೇಳಿದ್ದಾರೆ. ಈ ಹಣವನ್ನು ಉಪಯೋಗಿಸಿ ಕೊಳ್ಳುವುದಕ್ಕೋಸ್ಕರ ಕೆಲವು ಹಣವನ್ನು ಮಂಜೂರು ಮಾಡತಕ್ಕಂಥ ಕ್ರಮ ಬೇಕಾಗಿರುವುದರಿಂದ ಈ ಹೆಚ್ಚುವರಿ ಬೇಡಿಕೆ ಸಭೆಯ ಮುಂದೆ ತರಬೇಕಾಯಿತು ಎಂದು ಹೇಳಿದ್ದಾರೆ. ಮೊದಲನೆಯದಾಗಿ ಜನರಲ್ ಅಡ್ಮಿನಿಸ್ಟ್ರೇಷನ್, ನೀರಾವರಿ ಆಹಾರ ಉತ್ಪಾದನೆ ಇವುಗಳಿಗೆ ಹೆಚ್ಚು ಗಮನ ಕೊಡಬೇಕಾಗಿದೆ ಎಂದು ಹೇಳಿದರು. ಪ್ರಾಮುಖ್ಯವಾದ ವಿಚಾರಗಳಿಗೆ ಹಣದ ಯೋಜನೆ ಮಾಡತಕ್ಕಂಥ ಶಕ್ತಿ ಮೊದಲು ವರ್ಷದ ಬಜೆಟ್ ಸಭೆಯ ಮುಂದೆ ಇಡತಕ್ಕಂಥಾ ಕಾಲದಲ್ಲಿ ಸರಕಾರಕ್ಕೆ ಇಲ್ಲಾ ಎಂಬುದು ಇದರಿಂದ ಗೊತ್ತಾಗುತ್ತದೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್

(ಶ್ರೀ ಎಸ್. ಶಿವಪ್ಪ)

ನಲ್ಲಿ ಅನಿರೀಕ್ಷಿತ ಬಾಬುಗಳಿಗೆ ಹಣ ಒದಗಿಸತಕ್ಕಂಥಾದ್ದು ಮುಖ್ಯ ಲಕ್ಷಣ. ಆದರೂ ಕೂಡ ಅಂಥ ಯಾವ ಬಾಬು ಇದರಲ್ಲಿ ಇಲ್ಲ. ಸಪ್ಲಿಮೆಂಟರಿ ಎಸ್ಟಿಮೇಟ್ಸ್ ನೆಪದಲ್ಲಿ ಬೇರೆ ಏನೇನೋ ಬಾಬುಗಳನ್ನು ಅಡಕ ಮಾಡಿರತಕ್ಕಂಥಾದ್ದು ನಿಜವಾಗಿಯೂ ನಮ್ಮ ಸರಕಾರಕ್ಕೆ ಹಣ ಕಾಸಿನ ಮುನ್ಸೂಚನೆ ಇರಲಿಲ್ಲ ಎಂಬುದು ಅರ್ಥವಾಗುತ್ತದೆ. ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ 485 ಸಾವಿರ ರೂಪಾಯಿ ಬೇಕು ಎಂದು ಕೇಳಿದ್ದೀರಿ. ಇವನ್ನು ಮೊದಲು ಮಂಡಿಸಿದ ಬಜೆಟ್ಟಿನಲ್ಲಿ ಯೋಚನೆ ಮಾಡಬಹುದಾಗಿತ್ತು. ರಾಜ್ಯಪಾಲರ ಬಗ್ಗೆ ಏನೇನು ಅವಶ್ಯಕತೆ ಇದೆ ಅಷ್ಟು ಖರ್ಚು ತೋರಿಸಬಹುದಾಗಿತ್ತು. ರಾಜ್ಯಪಾಲರಿಗೋಸ್ಕರ ಈಗ ಸುಮಾರು 4 ಲಕ್ಷ 85 ಸಾವಿರ ರೂಪಾಯಿ ಬೇಡುತ್ತೀರಿ. ಸಮಾಜವಾದದ ಪ್ರಜಾಪ್ರಭುತ್ವ ನಿರ್ಮಾಣ ಮಾಡುತ್ತೇವೆ ಎಂದು ದೇಶದಲ್ಲಿ ದೊಡ್ಡದಾಗಿ ಸಾರುತ್ತಿದ್ದೀರಿ. ಮಹಾರಾಜರ ಕಾಲ ಆಯಿತು, ಸಮಾಜ ವಾದ ಬಂದಿದೆ ಎಂದು ಹೇಳುತ್ತೀರಿ. ಮಹಾರಾಜರ ಕಾಲ ಹೋದರೂ ಕೂಡ ರಾಜ ಠೀವಿ ಇನ್ನೂ ಹೆಚ್ಚಿಗೆ ಬೆಳಗುತ್ತಾ ಇದೆ. ಒಬ್ಬ ರಾಜ್ಯಪಾಲರ ಸೌಕರ್ಯಕ್ಕೋಸ್ಕರ ಅವರ ಭೋಗಕ್ಕೋಸ್ಕರ ಅವಶ್ಯಕ ವಸ್ತುಗಳಿಗೋಸ್ಕರ 4 ಲಕ್ಷ 85 ಸಾವಿರ ರೂಪಾಯಿ ಹೆಚ್ಚುವರಿ ಬೇಡಿಕೆಯಲ್ಲಿ ಯಾವ ಮನಸ್ಸಿನಿಂದ ಮಾಡಿದ್ದೀರಿ ಎಂಬುದು ನಮಗೆ ಬಹಳ ವ್ಯಸನವಾಗುತ್ತದೆ. ಹೇಳತಕ್ಕಂಥ ಮಾತಿನಲ್ಲಿ ಅರ್ಥವಿರಬೇಕು. ಇವತ್ತು ಒಂದು ಬಾಯಿಯಲ್ಲಿ ಮಹಾರಾಜರು ಹೋಗಬೇಕು ಎಂದು ಹೇಳುವ ಜನ, ಸಮಾಜವಾದ ತತ್ವದ ಮೇಲೆ ಸಮಾಜವನ್ನು ಕಟ್ಟುತ್ತೇವೆ ಎಂದು ಹೇಳುವ ಜನ, ಭಾಷಣ ಮಾಡುವ ಜನ, ಮಹಾರಾಜರಿಗಿಂತ ಹೆಚ್ಚಿನ ರೀತಿಯಲ್ಲಿರುವ ವ್ಯಕ್ತಿಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ರಾಜಠೀವಿಯನ್ನು ಇನ್ನೊಂದು ರೂಪದಲ್ಲಿ ಅನುಭವಿಸಲು ಪ್ರಯತ್ನ ಪಡುತ್ತಿದ್ದಾರೆ. ಏನು ಸ್ವಾಮಿ, ಇವರು ಮಹಾರಾಜರಿಗಿಂತ ದೊಡ್ಡವರಾದರೆ? ನಿಜವಾದ ಮಹಾರಾಜರನ್ನು ಸಹಿಸಿಕೊಳ್ಳಬಹುದು, ಆದರೆ ರಾಜರಾಗಿ ಕನ್‌ವರ್ಟ್ ಮಾಡತಕ್ಕ ಈ ಅಭ್ಯಾಸ ಬಹಳ ಡೇಂಜರಸ್. ನಮ್ಮ ದೇಶದಲ್ಲಿ ಬಹಳ ಒಳ್ಳೆಯ ಅತಿಥಿ ಗೃಹಗಳಿವೆ. ರೆಸಿಡೆನ್ಸಿ, ಕುಮಾರ ಕೃಪದಂತೆ ಬಹಳ ಅತ್ಯುನ್ನತವಾಗಿ ಸಜ್ಜಿತವಾಗಿರುವ ಗೃಹಗಳು ರಾಜ್ಯದಲ್ಲಿ ಬಹಳವಿವೆ. ರಾಜ್ಯಪಾಲರ ಗೃಹವನ್ನು ಇಂಪ್ರೂವ್ ಮಾಡುವುದಕ್ಕೆ, ಆ ಭವನದ ತೋಟಗಳನ್ನು ಶೃಂಗಾರ ಮಾಡುವುದಕ್ಕೆ, ಆ ಬಂಗಲೆಯನ್ನು ರಿಪೇರಿ ಮಾಡುವುದಕ್ಕೋಸ್ಕರ ಸುಮಾರು ಎರಡುವರೆ ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ. ತೋಟಗಾರಿಕೆಗೆ, ನೀರಿಗೆ ಈ ಹಣವೇಕೆ? ರೆಸಿಡೆನ್ಸಿ ಹಾಗೂ ಕುಮಾರ ಕೃಪದ ತೋಟಗಳನ್ನು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನವರು ನೋಡಿಕೊಳ್ಳುತ್ತಾರೆ. ಅತಿಥಿ ಗೃಹಗಳನ್ನು ಪಿ. ಡಬ್ಲ್ಯು. ಡಿ. ಯವರು ಮೇಂಟೇನ್ ಮಾಡುತ್ತಾರೆ. ವರ್ಷಂಪ್ರತಿ, ಅವುಗಳ ಜೊತೆಗೆ, ಇವಕ್ಕೂ ಬಜೆಟ್ಟಿನಲ್ಲಿ ಹಣವನ್ನು ಸೇರಿಸಿಕೊಟ್ಟಿದ್ದೇವೆ. ಹಾಗೆ ಹಿಂದೆಯೆ ಒದಗಿಸಿದ ಮೇಲೆ, ಪುನಃ ಇವತ್ತು ಎರಡುವರೆ ಲಕ್ಷ ರೂಪಾಯಿ ಏತಕ್ಕೋಸ್ಕರ? ಇದಕ್ಕೆ ಸರಕಾರದಿಂದ ಉತ್ತರ ನಿರೀಕ್ಷಣೆ ಮಾಡುತ್ತೇವೆ. ಈ ಹೂ ತೋಟಕ್ಕೆ ಏತಕ್ಕೋಸ್ಕರ ಖರ್ಚು ಮಾಡುತ್ತೀರ? ಅಲ್ಲಿ ಹೂ ತೋಟ ಹೊಸದಾಗಿ ನಿರ್ಮಾಣ ಮಾಡುತ್ತೀರ? ಯಾವ ಬಂಗಲೆಯನ್ನು ರಿಪೇರಿ ಮಾಡುತ್ತೀರ, ಎಲ್ಲಿಗೆ ನೀರು ಕೊಡುತ್ತೀರ! ಗವರ್ನರ್ ಎಲ್ಲರಿಗಿಂತಲೂ ಮುಖ್ಯವಾದವರು. ಅವರಿಗೆ ಹೊಸದಾಗಿ ಬಂಗಲೆ ನಿರ್ಮಾಣ ಮಾಡಿ, ಆ ಹೊಸ ಭವನಕ್ಕೆ ಹೂ ತೋಟ ಮಾಡುವುದಕ್ಕೋಸ್ಕರ, ಆಸನಗಳನ್ನು ಮಾಡಿಸುವುದಕ್ಕೋಸ್ಕರ ಹಣ ಕೊಡೋಣ. ಗವರ್ನರಿಗೆ ಒಳ್ಳೆಯ ಮನೆ ಕೊಡಬೇಕು. ಎರಡುವರೆ ಲಕ್ಷ ರೂಪಾಯಿನಲ್ಲಿ ಒಂದು ದೊಡ್ಡ ಅರಮನೆಯನ್ನೆ ಕಟ್ಟಬಹುದು. ಆದರೆ ಇಲ್ಲಿ ಅರಮನೆಗೆ ಸೌಲಭ್ಯಗಳನ್ನು ಒದಗಿಸುವುದಕ್ಕೆ, ಹೂದೋಟಕ್ಕೆ, ಸುಖಾಸನಗಳಿಗೆ, ಅದರ ಅಲಂಕಾರಕ್ಕೇ ಎರಡುವರೆ ಲಕ್ಷ ರೂಪಾಯಿನ್ನು ಒದಗಿಸಿದ್ದಾರೆ. ಇಂಪ್ರೂವ್‌ಮೆಂಟಿಗೆ 50,000 ಹೂದೋಟಕ್ಕೆ 50 ಸಾವಿರ, ನೀರಿಗೆ 50 ಸಾವಿರ, ರಿಪೇರಿಗೆ 50 ಸಾವಿರ ಹೀಗೆ ಎರಡುವರೆ ಲಕ್ಷ ರೂಪಾಯಿಗಳನ್ನು ಒದಗಿಸಿರುವುದನ್ನು ಸರಕಾರ ಯಾವ ರೀತಿಯಿಂದ ಸಮರ್ಥನೆ ಮಾಡಿಕೊಳ್ಳುತ್ತಾರೆ? ಇವತ್ತಿನ ದಿವಸ ನಮ್ಮ ಹಣದಲ್ಲಿ ಮಿತವ್ಯಯ ಮಾಡಬೇಕು ಎಂದು ಹೇಳುವರು, ರಾಜ್ಯದ ಒಬ್ಬ ರಾಜ್ಯಪಾಲರಿಗೆ, ಕೇವಲ ಒಬ್ಬರ ಸೌಕರ್ಯಕ್ಕಾಗಿ, ಈಗಿರತಕ್ಕಂಥ ಗೆಸ್ಟ್‌ಹೌಸ್ ಮತ್ತು ಸರಕಾರಿ ಕಾರುಗಳ ಜೊತೆಗೆ, ಇನ್ನೂ ಕಾರುಗಳನ್ನೂ, ವಾಹನಗಳನ್ನೂ ಕೊಳ್ಳಬೇಕಂತೆ, ಇದಕ್ಕೂ ಹಣ ಬೇಡಿದೆ. ಇದಲ್ಲದೆ ಗವರ್ನರ ಸಿಬ್ಬಂದಿಗೂ ಹಣ ಬೇಡಿದೆ. ಈ ಎರಡುವರೆ ಲಕ್ಷ ರೂಪಾಯಿಯನ್ನು ಎಂತಹ ಕಾಲದಲ್ಲಿ ಕೇಳುತ್ತಿದ್ದಾರೆ? ಆಹಾರದ ಅಭಾವ ಇರುವಾಗ, ಜನರು ಕ್ಷಾಮದ ದವಡೆಯಲ್ಲಿ ಸಿಕ್ಕಿ ನರಳುತ್ತಿರುವಾಗ, ಸಂಕಟದಲ್ಲಿರುವಾಗ, ಗೆಡ್ಡೆಗೆಣಸುಗಳನ್ನು ತಿಂದು ಜೀವಿಸುತ್ತಿರುವಾಗ, ಇಂಥ ದುಷ್ಕಾಲದಲ್ಲಿ ಒಬ್ಬ ರಾಜ್ಯಪಾಲರ ಭೋಗಕ್ಕಾಗಿ ಸರಕಾರ ಖರ್ಚು ಮಾಡುವ ರೀತಿಯನ್ನು ನಾವು ಎಷ್ಟರ ಮಟ್ಟಿಗೆ ಒಪ್ಪಬಹುದು? ಈ ಬೇಡಿಕೆಗಳ ಬಗ್ಗೆ ನಮ್ಮ ಒಂದು ನಿಲುವನ್ನು ಹೇಳುತ್ತೇನೆ. ಸರಕಾರ ಈ ಸಭೆಯ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಈ ಒಂದು

ಬೇಡಿಕೆಯನ್ನು ವಾಪಸ್ಸು ತೆಗೆದುಕೊಂಡರೆ ಸರಿ. ಈ ರಾಜ್ಯಪಾಲರಿಗೆ ಸಂಬಂಧಿಸಿದ ಬೇಡಿಕೆಯನ್ನು ಈ ಸಭೆಯ ಮುಂದೆ ಬಿಗಿ ಮುಷ್ಟಿಯಿಂದ, ಆಡಳಿತ ದರ್ಪದಿಂದ ಇಡುವುದಾದರೆ, ಅದು ವೋಟಿಗೆ ಬಂದಾಗ ಏನು ಮಾಡುತ್ತೇವೆನ್ನುವುದನ್ನು ಈವಾಗಲೇ ಹೇಳುತ್ತೇನೆ. ವಾಪಸ್ಸು ತೆಗೆದುಕೊಂಡರೆ ಬಹಳ ಸಂತೋಷ; ಅದನ್ನು ಬಿಗಿ ಮುಷ್ಟಿಯಿಂದ ವೋಟಿಗೆ ಹಾಕುವುದಾದರೆ ವೋಟು ತೆಗೆದುಕೊಳ್ಳುವ ಕಾಲದಲ್ಲಿ ಈ ಸಭೆಯಲ್ಲಿ ನಾವುಗಳು ಹಾಜರಿಲ್ಲದೆ, ಇದಕ್ಕೆ ನಮ್ಮ ಒಂದು ಪ್ರತಿಭಟನೆಯನ್ನು ತೋರಿಸುತ್ತೇವೆ.

Sri S. R. KANTHI (Minister for Education).—It is a charged item. It is not a voted item.

ಶ್ರೀ ಎಸ್. ಶಿವಪ್ಪ.—ಕಾನೂನಿನ ಒಂದು ಅವಕಾಶವನ್ನು ಮುಂದಿಟ್ಟುಕೊಂಡು ಸರ್ಕಾರದ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಬಹುದು. ಸರ್ಕಾರದ ಮೇಲೆ ಒಂದು ದೊಡ್ಡ ಜವಾಬ್ದಾರಿಯಿದೆ; ದೇಶದ ಹಣವನ್ನು ಖರ್ಚು ಮಾಡುವಾಗ ಈ ಸಭೆಯ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾದ್ದು ಅವರ ಕರ್ತವ್ಯ.

ಇನ್ನು ಡಿಮ್ಯಾಂಡು 20 ನೋಡಿ. ಅದರಲ್ಲಿ ಸುಮಾರು ಮೂವತ್ತೆರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದಾರೆ. ಇದರಲ್ಲಿ ಹೆಚ್ಚಿಗೆ ಹಣದನ್ನು ಜೂ ಗಾರ್ಡನ್ನಿಗೆ ಭೂಮಿಗಳಿಸುವುದಕ್ಕೋಸ್ಕರ ಕೇಳಿದ್ದಾರೆ, ಇದಕ್ಕೆ ಎರಡೂವರೆ ಲಕ್ಷ ರೂಪಾಯಿ ತೆಗೆದಿಟ್ಟಿದ್ದಾರೆ. ಸಾಯಿಲ್ ಕನ್‌ಸರ್ವೇಶನ್, ಇತ್ಯಾದಿ, ಇತ್ಯಾದಿಗೆ, ಭೂಮಿ ಉತ್ತಮಗೊಳಿಸುವುದಕ್ಕೋಸ್ಕರ 10 ಲಕ್ಷ ರೂಪಾಯಿಗಳನ್ನು ಈ ಮಸೂದೆಯಲ್ಲಿ ತೆಗೆದಿಟ್ಟಿದ್ದಾರೆ. ಸಾಯಿಲ್ ಕನ್ಸರ್ವೇಶನ್ ಹಣವನ್ನು ಎರಡು-ಮೂರು ಬಾಬುಗಳಲ್ಲಿ ತೆಗೆದಿಟ್ಟಿದ್ದಾರೆ. ಐಟಂ 38ರಲ್ಲಿ ಅದೇರೀತಿಯಲ್ಲಿ ಸಾಯಿಲ್ ಕನ್ಸರ್ವೇಶನ್ನಿಗೆ 10 ಲಕ್ಷ ರೂಪಾಯಿ ತೆಗೆದಿಟ್ಟಿದ್ದಾರೆ. ಅಂದರೆ ಅದೇ ಬಾಬಿಗೆ 20 ಲಕ್ಷ ರೂಪಾಯಿಯನ್ನು ಕೇಳುತ್ತಿದ್ದಾರೆ. ಹೀಗೆ ಒಂದೇ ಬಾಬಿಗೆ 2-3 ಕಡೆ ಹಣವನ್ನು ತೋರಿಸಿರತಕ್ಕಂಥ ಆರ್ಥಿಕ ನೀತಿ ಏನು ಅನ್ನುವುದನ್ನು ತಿಳಿಯಬಯಸುತ್ತೇನೆ. ಈ ರೀತಿ ಒಂದೇ ಬಾಬಿಗೆ ಬೇರೆಬೇರೆ ಡಿಮ್ಯಾಂಡುಗಳಲ್ಲಿ ಅನುಮೋದನೆ ನೀಡಿದರೆ ಬಹುಶಃ ಕನ್‌ಫ್ಯೂಶನ್ನಿಗೆ ಎಡೆಕೊಡುತ್ತದೆ. ಈ ಕನ್‌ಫ್ಯೂಶನ್ನಿನಿಂದ, ಒಂದು ಬಾಬಿನ ಹಣ ಏಕೆ ಖರ್ಚುಮಾಡಲಿಲ್ಲವೆಂದು ಕೇಳಿದರೆ, ಇನ್ನೊಂದು ಡಿಮ್ಯಾಂಡು ಕೆಳಗೆ ಖರ್ಚಾಗಿರುವುದನ್ನು ತೋರಿಸಬಹುದು. ಎರಡು ಮೂರು ಕಡೆ ಒಂದೇ ಬಾಬಿಗೆ ಒಂದೇ ಹಣಕಾಸಿನ ಮಸೂದೆಯಲ್ಲಿ ತೋರಿಸುವುದು ಒಂದು ಒಳ್ಳೆಯ ಆರ್ಥಿಕ ನೀತಿಯಲ್ಲ. ಇವತ್ತಿನ ದಿವಸ ಸಾಯಿಲ್ ಕನ್ಸರ್ವೇಶನ್ನಿಗೆ ಎಷ್ಟು ಲಕ್ಷ ಎಕರೆಗಳಿಗೆ ಖರ್ಚು ಮಾಡುತ್ತೀರ ಅನ್ನತಕ್ಕಂಥದ್ದನ್ನು ಹೇಳಬೇಕು. ಈ ಪ್ರೋಗ್ರಾಂನ್ನು ಆಹಾರೋತ್ಪತ್ತಿ ಮತ್ತು ಭೂಮಿಗೆ ಜೀವಕಳೆ ಕೊಡುವುದಕ್ಕೋಸ್ಕರ ಸರಕಾರ ಎಳ್ಳಷ್ಟೂ ಕಾರ್ಯಗತ ಮಾಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ನಿಮ್ಮ ಅಂಕಿ ಅಂಶಗಳ ಪ್ರಕಾರ 2 ಕೋಟಿ ಎಕರೆ ಭೂಮಿ ಇದೆ. ಅದರಿಂದ ಉತ್ಪತ್ತಿಯನ್ನು ಜಾಸ್ತಿ ಮಾಡುವುದಕ್ಕೆ ಕಾರ್ಯಕ್ರಮ ಯಾವರೀತಿ ಹಾಕಿಕೊಂಡಿದ್ದೀರ ಅನ್ನುವುದು ಈ ದಿವಸ ನಮಗೆ ಬೇಕು. ನಾವು ಬರಗಾಲದ ದವಡೆಯಿಂದ ಬಿಡಿಸಿಕೊಳ್ಳಬೇಕು, ಅನ್ನದ ಉತ್ಪತ್ತಿಯನ್ನು ಜಾಸ್ತಿ ಮಾಡಬೇಕು, ಕ್ಷಾಮ ನಿವಾರಣೆಯಾಗಬೇಕು. ಇದಾಗಬೇಕಾದರೆ, ಸಾಯಿಲ್ ಕನ್ಸರ್ವೇಶನ್ನಿಗೆ ಸರಕಾರ ಕೇವಲ 10 ಲಕ್ಷ ರೂಪಾಯಿ ಪ್ರೊವೈಡ್ ಮಾಡಿರುವುದು ಯಾವ ಮೂರೆಗೆ? ಒಂದೊಂದು ಎಕರೆಗೆ ಎಷ್ಟು ಖರ್ಚು ಮಾಡಬೇಕು, ಎಷ್ಟು ಖರ್ಚುಮಾಡಿದೆ ಎಂದು ಅಂಕಿ ಅಂಶ ಇಟ್ಟಿದ್ದೀರ? ಭೂಮಿಯನ್ನು ಅಬಾದು ಮಾಡುವ ರೈತ ಬಡವ, ಅವನ ಹತ್ತಿರ ಹಣವಿಲ್ಲ; ಅವನಿಗೆ ನೀರು, ಗೊಬ್ಬರ, ಬೀಜ, ಹೋರಿಗಳು ಬೇಕು. ಅವನ್ನೆಲ್ಲಾ ಸರಕಾರ ಕೊಟ್ಟರೆ, ಆಹಾರೋತ್ಪತ್ತಿ ಜಾಸ್ತಿಯಾಗುತ್ತದೆ. ನೀವು ಕೇವಲ ನಾಮಾಂಕಿತವಾಗಿ, 10 ಲಕ್ಷ ರೂಪಾಯಿ ಇಡೀ ದೇಶಕ್ಕೆ ಹಂಚಿದರೆ, ಅದು ಯಾವ ಮೂರೆಗೆ ಆಗುತ್ತದೆ ಎಂಬುದನ್ನು ವಿಚಾರ ಮಾಡಬೇಕು.

ಈ ಆಹಾರೋತ್ಪತ್ತಿಯನ್ನು ಮೇಲ್ವಿಚಾರಣೆ ಮಾಡುವ ವ್ಯವಸಾಯ ಇಲಾಖೆ ನಮ್ಮ ದೇಶದಲ್ಲಿ ಏನೊಂದು ರಿಸರ್ಚು ಮಾಡಿ, ಅದರ ಪ್ರತಿಫಲವನ್ನು ರೈತನಿಗೆ ಕೊಟ್ಟಿದೆ? ಬರಗಾಲ ದೇಶದ ಎಲ್ಲ ಕಡೆಗಳಲ್ಲಿಯೂ ಬಂದಿದೆ. ಅವರು ಹೆಸ್ಟ್ ರೆಸಿಸ್ಟ್ ಮಾಡುವ ಬೀಜಗಳನ್ನು ತಯಾರು ಮಾಡಿದ್ದಾರೆಯೆ? ನಮ್ಮ ದೇಶದಲ್ಲಿರತಕ್ಕಂಥ ಬರಗಾಲಕ್ಕೆ ಅನುಗುಣವಾಗಿ, ಅದನ್ನು ಎದುರಿಸುವ ಗೊಬ್ಬರ, ಬೀಜ, ಹೋರಿಗಳನ್ನು ತಯಾರುಮಾಡಲು ಏನು ಮಾಡಿದ್ದಾರೆ? ಈ ವ್ಯವಸಾಯದ ಇಲಾಖೆಯಿಂದ ಏನು ನಿರೀಕ್ಷಣೆ ಮಾಡಿದ್ದೆವೋ ಅದು ಆಗಿಲ್ಲ. ವ್ಯವಸಾಯದ ಇಲಾಖೆ ರಿಸರ್ಚ್ ವಿಭಾಗದಲ್ಲಿ ಏನೂ ಸಹಾಯಕಾರಿಯಾಗಿಲ್ಲ. ರಶ್ಯ ದೇಶದಲ್ಲಿ ಕೇಳಿದ್ದೇವೆ, ಒಂದು ತರಹ ಗೋಧಿ ಬೀಜವನ್ನು ತಯಾರು ಮಾಡಿದ್ದಾರಂತೆ, ಆ ಬೀಜ ಎರಡೂವರೆ ತಿಂಗಳಲ್ಲಿಯೇ ಫಲ ಕೊಡುತ್ತದೆ; ಸಾಮಾನ್ಯ ಗೋಧಿ ಬೀಜ 5 ತಿಂಗಳು ತೆಗೆದುಕೊಳ್ಳುತ್ತಿತ್ತು. ಡ್ರಾಪ್ಟ್ ರೆಸಿಸ್ಟ್ ಮಾಡುವ ಬೀಜಗಳನ್ನು ಆ ದೇಶದಲ್ಲಿ ತಯಾರು ಮಾಡಿದ್ದಾರೆ. ಅದು ರಿಸರ್ಚು; ನಮ್ಮ ದೇಶದಲ್ಲಿ ಏನು ರಿಸರ್ಚು ನಡೆದಿದೆ? ನಮ್,

(ಶ್ರೀ ಎಸ್. ಶಿವಪ್ಪ)

ದೇಶದಲ್ಲಿರತಕ್ಕಂಥ ವ್ಯವಸಾಯ ಇಲಾಖೆ ಕೇವಲ ಅಲಂಕಾರಕ್ಕೆ ಇದೆಯೋ ಎಂಬ ಅನುಮಾನ ಬರದಿದೆ.

1-30 P.M.

ಶ್ರೀ ಎಸ್. ಆರ್. ಕಂಠಿ.—ರಸ್ಟ್ ರೆಸಿಸ್ಟಿಂಗ್ ಬೀಜಗಳನ್ನು ಮಾಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ವಿದ್ಯಾ ಸಚಿವರು ಆಹಾರದ ಸಚಿವರ ಪರವಾಗಿ ರಸ್ಟ್ ರೆಸಿಸ್ಟಿಂಗ್ ಬೀಜಗಳನ್ನು ಮಾಡಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ಅಂತಹ ಬೀಜಗಳನ್ನು ಕಾರ್ಯ ರೂಪಕೆ ತಂದು ಅವುಗಳನ್ನು ಭೂಮಿಯಲ್ಲಿ ಹಾಕಿ ಉತ್ಪನ್ನವನ್ನು ಮಾಡಿ ತೋರಿಸಿದರೆ ನಿಜವಾಗಿಯೂ ಕೂಡ ಒಪ್ಪುತ್ತೇನೆ. ಇವತ್ತು ನಿಮ್ಮ ವ್ಯವಸಾಯದ ಇಲಾಖೆಯವರು ನಿರೀಕ್ಷೆ ಮಾಡಿ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೋ ಆ ಕಾರ್ಯಕ್ರಮದಂತೆ ಕೆಲಸಗಳನ್ನು ಮಾಡಿಲ್ಲ ಎಂಬುದನ್ನು ನಾವೂ ನೀವೂ ಒಪ್ಪಬೇಕು. ಆದ್ದರಿಂದ ಆಹಾರದ ಉತ್ಪನ್ನ ಎಷ್ಟು ಜಾಸ್ತಿಯಾಗಬೇಕೋ ಅಷ್ಟು ಜಾಸ್ತಿಯಾಗಿಲ್ಲ. ಈ ಆಹಾರದ ಇಲಾಖೆ ಮತ್ತು ವ್ಯವಸಾಯದ ಇಲಾಖೆಯವರು ಸಾಕಷ್ಟು ಉತ್ತೇಜನದಿಂದ ಕೆಲಸ ಮಾಡಿಲ್ಲ.

ಮೈನರ್ ಟ್ಯಾಂಕ್ ಇರಿಗೇಷನ್‌ಗೆ ಸುಮಾರು 90 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ, ಮೈನರ್ ಇರಿಗೇಷನ್ ಮತ್ತು ಇತರ ಇರಿಗೇಷನ್ ಯಾವುದೇ ಆಗಲಿ ಅವನ್ನು ಮಾಡತಕ್ಕ ಇಲಾಖೆ ಪಿ ಡಬ್ಲ್ಯೂ. ಡಿ. ಈ ಇಲಾಖೆಯ ಮೇಲೆ ನಾನು ನಿರ್ದಿಷ್ಟವಾಗಿ ಈ ಸರ್ಕಾರಕ್ಕೆ ಹೇಳಬೇಕಾಗಿದೆ. ಈ ಇಲಾಖೆಯ ಮೇಲೆ ಬಹಳ ಆಕ್ಷೇಪಣೆಗಳು ಇವೆ. ಯಾರದೋ ಹಿತ ಇರುವುದರಿಂದ ಈ ಇಲಾಖೆಯ ಮೇಲೆ ನಮ್ಮ ದೇಶದಲ್ಲಿ ಎದ್ದಿರತಕ್ಕ ಸಂದೇಹ ಗೊಂದಲವನ್ನು ನಿವಾರಣೆ ಮಾಡಿಕೊಳ್ಳಬೇಕಾಗಿದೆ. ಕೇವಲ ಒಂದು ಜಿಲ್ಲೆಯ ಅಧಿಕಾರಗಳು ಈ ಇಲಾಖೆಯನ್ನು ಮನಾಪಲಿ ಮಾಡಿಕೊಂಡಿದ್ದಾರೆ ಎಂಬ ಸಂಶಯ ಜನಜನಿತವಾಗಿದೆ. ಮಾನ್ಯ ಮಂತ್ರಿಗಳು, ಆ ಇಲಾಖೆಯ ಕಾರ್ಯದರ್ಶಿಗಳು, ಮತ್ತು ಚೀಫ್ ಇಂಜನಿಯರು ಎಲ್ಲರೂ ಒಂದೇ ಜಿಲ್ಲೆಗೆ ಸೇರಿದ ವ್ಯಕ್ತಿಗಳು ಆಗಿದ್ದಾರೆ. ಇಂತಹ ಒಂದು ಕೋಟೆಯನ್ನು ಪಿ ಡಬ್ಲ್ಯೂ ಡಿ ಇಲಾಖೆಯಲ್ಲಿ ಕಟ್ಟಿಕೊಂಡಿದ್ದಾರೆ ಎಂಬ ಮಾತುಗಳನ್ನು ಆಡುತ್ತಾ ಇದ್ದಾರೆ ಎಂಬುದನ್ನು ಸರ್ಕಾರದವರಿಗೆ ತಿಳಿಸುತ್ತಾ ಇದ್ದೇನೆ. ಈ ಸಂಶಯದಿಂದ ದೂರವಾದ ಹೊರತು ವರ್ಷಕ್ಕೆ 60–70 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕ ಈ ಇಲಾಖೆಗೆ ಒಳ್ಳೆಯ ಹೆಸರು ಬರುವುದಿಲ್ಲ. ಎಷ್ಟು ನೀರಾವರಿ ಕಾಮಗಾರಿಗಳನ್ನು ಮಾಡಿದ್ದೀರಿ ಎಂದು ನಾನು ಕೇಳಿದ ಪ್ರಶ್ನೆಗೆ ಒಂದೂ ಇಲ್ಲ ಎಂದು ನಿನ್ನೆ ಉತ್ತರ ಬಂತು. ಹೀಗೆ ನಮಗೆ ಅನುಮಾನವಾಗುತ್ತಾ ಇದೆ. ನಮ್ಮ ಪ್ರದೇಶದಲ್ಲಿ ಬಹುಮಟ್ಟಿಗೆ ಯಾವ ಕೆಲಸವೂ ಆಗುತ್ತಿಲ್ಲ ಎಂದು ಅನುಮಾನ ಬರುತ್ತಾ ಇದೆ, ಇದೇರೀತಿ ಅನುಮಾನಗಳು ಬೇರೆ ಕಡೆಯೂ ಕೇಳಿ ಬರುತ್ತಾ ಇದೆ. ಈ ಅನುಮಾನವನ್ನು ನಿವಾರಣೆ ಮಾಡಲೇಬೇಕಾಗಿದೆ. 'ಸೀಸರ್ಸ್ ವೈಫ್ ಮಸ್ಟ್ ಬಿ ಎಬೌ ಸಸ್‌ಪಿಷನ್'' ಎಂದು ಹೇಳುವಂತೆ ಜವಾಬ್ದಾರಿಯನ್ನು ವಹಿಸಿರತಕ್ಕ ತಮ್ಮ ಸರ್ಕಾರದಲ್ಲಿ ಈ ರೀತಿ ತಮ್ಮ ಇಲಾಖೆ ಇರುವುದು ಸರಿಯಲ್ಲ. ಆದ್ದರಿಂದ ಈಗ ಯಾವ ಒಂದು ದೊಡ್ಡ ಗೊಂದಲ ಎದ್ದಿದೆ ಅದಕ್ಕೆ ಸಾಕಾದಷ್ಟು ವಿವರಣೆ ಕೊಡಬೇಕು. ಚೀಫ್ ಇಂಜನಿಯರ ನೇಮಕದ ವಿಷಯದಲ್ಲಿ ಯಾವ ಒಂದು ಗೊಂದಲ ಇದೆ, ಯಾವ ನೀತಿಯನ್ನು ಅನುಸರಿಸಿ ಆ ಹುದ್ದೆಗೆ ನೇಮಕ ಮಾಡುತ್ತೀರಿ ಎಂಬುದನ್ನು ಈ ಸಭೆಗೆ ತಿಳಿಸಲೇಬೇಕು, ವಿವರಣೆ ಕೊಡದಿದ್ದರೆ ನಮ್ಮ ಸಂಶಯವಂತೂ ನಿವಾರಣೆಯಾಗುವುದಿಲ್ಲ. ಸರ್ಕಾರದವರೇ ಇಂತಹ ಸಂಶಯಕ್ಕೆ ಜವಾಬ್ದಾರರಾಗಿದ್ದಾರೆ. ಅದನ್ನು ತಪ್ಪಿಸಬೇಕಾಗಿದ್ದರೆ ಆ ಸಂಶಯವನ್ನು ನಿವಾರಣೆ ಮಾಡಬೇಕೆಂದು ಕಳಕಳಿಯಿಂದ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

3 ಕೋಟಿ 65 ಲಕ್ಷ ರೂಪಾಯಿಗಳ ಸಪ್ಲಿಮೆಂಟರಿ ಗ್ರಾಂಟನ್ನು ಕೇಳುವಾಗ ಇನ್ನೂ ಅನೇಕ ಸಣ್ಣಪುಟ್ಟ ಕೆಲಸಗಳಿಗೆ ಹಣವನ್ನು ಕೇಳಿದ್ದೀರಿ ನಾನು ಮೊದಲೇ ಹೇಳಿದ ಹಾಗೆ ನ್ಯಾಷನಲ್ ಲೋನ್ ಸ್ಕಾಲರ್‌ಷಿಪ್ ಅಂತ ಹೇಳಿ ಈ ಸಾರಿ 12 ಲಕ್ಷ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ ಇದನ್ನು ಯಾವ ರೀತಿ ವಿತರಣೆ ಮಾಡುತ್ತಾ ಇದ್ದೀರಿ ? ಇದಕ್ಕೆ ಒಂದು ಕಮಿಟಿ ಇದೆಯೇ ? ಇದನ್ನು ಹೊಂದತಕ್ಕ ವಿದ್ಯಾರ್ಥಿಗಳಿಗೆ ಸಾಕಾದಷ್ಟು ತಿಳಿವಳಿಕೆಯನ್ನು ಕೊಟ್ಟು ಇದನ್ನು ಅರ್ಹತೆಯ ಮೇಲೆ ಹಂಚುತ್ತಾ ಇದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ಒಂದು ಸ್ಟೇಟ್ ಲೆವಲ್ ಕಮಿಟಿ ಇದೆ ಮತ್ತು ಇದಕೆ ಗವರ್ನ್‌ಮೆಂಟ್ ಆಫ್ ಇಂಡಿಯಾದವರು ನಿಯಮಾವಳಿಯನ್ನು ಕೊಡುತ್ತಾ ಇದ್ದಾರೆ.

ಶ್ರೀ ಎಸ್. ಶಿವಪ್ಪ.—ಡಿಮ್ಯಾಂಡ್ ನಂಬರ್ 23ರಲ್ಲಿ ನ್ಯಾಷನಲ್ ಕೋ ಆಪರೇಟೀವ್ ಡೆವಲಪ್ ಮೆಂಟ್ ಕಾರ್ಪೋರೇಷನ್‌ಗೆ 1 ಲಕ್ಷ 87 ಸಾವಿರದ 500 ರೂಪಾಯಿ ಮಾರ್ಕೆಟಿಂಗ್ ಸೊಸೈಟಿಗಳಿಗೆ ಕೊಡುವುದಕ್ಕೆ 31ನೆ ಮಾರ್ಚಿ 64ರಲ್ಲಿ ಕೊಟ್ಟಿದ್ದೀರಿ. ಈ ರೀತಿ ಹಣ ವರ್ಷದ ಕೊನೆಯಲ್ಲಿ ಕೊಡುವುದರಿಂದ ಕೇಂದ್ರ ಸರ್ಕಾರದವರು ಯಾವ ಉದ್ದೇಶಕ್ಕಾಗಿ ಹಣವನ್ನು ಕೊಡುತ್ತಾರೋ ಆ ಉದ್ದೇಶ ನೆರವೇರುವುದಿಲ್ಲ. ಆದರೆ ಅವರು ಕೊಟ್ಟಿರುವ ಹಣವನ್ನು ಕೊಡಲೇಬೇಕು ಇಲ್ಲದೇ ಇದ್ದರೆ ಅವರಿಂದ ಬರಬೇಕಾದ ಹಣ ತಪ್ಪಿಹೋಗುತ್ತದೆ ಎಂದು ಈ ರೀತಿ ಮಾಡುವುದು ಸರಿಯಲ್ಲ. ಇದರಿಂದ ಅನರ್ಥಗಳು ಆಗುತ್ತದೆ, ಈ ಹಣವನ್ನು ಖರ್ಚು ಮಾಡುವುದಕ್ಕೆ ಕೇವಲ ಎರಡು ಮೂರು ದಿವಸ ಇರುವಾಗ ಯಾವ ಸೊಸೈಟಿ ತಾನೆ ಮುಂದೆ ಬರುತ್ತದೆ ಯಾರು ಪ್ರಭಾವವನ್ನು ಬೀರಿ ಅರ್ಜಿ ಹಾಕಿಕೊಳ್ಳುತ್ತಾರೆಯೋ ಅಂಥವರು ಮಾತ್ರ ಈ ಸಹಾಯವನ್ನು ಹೊಂದಬಹುದೇ ಹೊರತು ನಿಜವಾಗಿಯೂ ಸಹಕಾರ ಕ್ಷೇತ್ರದಲ್ಲಿ ಶ್ರದ್ಧೆಹೊಂದಿ ಯಾರು ಕೆಲಸ ಮಾಡುತ್ತಾ ಇದ್ದಾರೆಯೋ ಅವರಿಗೆ ಈ ಹಣ ಸಿಕ್ಕುವುದಿಲ್ಲ. ಆದ್ದರಿಂದ ಆತುರ ಆತುರವಾಗಿ ವರ್ಷದ ಕೊನೆಯಲ್ಲಿ ಕೊನೆಯ ವಾರದಲ್ಲಿ ಹಣವನ್ನು ತೆಗೆದು ಕೊಂಡು ಹಂಚತಕ್ಕ ನೀತಿಯಿಂದ ಅದು ಪ್ರಭಾವಶಾಲಿಗಳಿಗೆ ಹೋಗಿ ಯಾವ ಉದ್ದೇಶಕ್ಕೆ ಖರ್ಚಾಗಬೇಕೋ ಅದು ಆಗುತ್ತಿಲ್ಲ. ಇದೇ ರೀತಿ ಅನೇಕ ಬಾಬುಗಳಲ್ಲೂ ಸಹ ಮಾಡುತ್ತಾ ಇದ್ದೀರಿ. ಇದರಿಂದ ನಮ್ಮ ದೇಶದ ಒಳ್ಳೆಯ ಕೆಲಸಗಳಿಗೆ ಹೋಗುವುದಕ್ಕೆ ಬದಲಾಗಿ ಅದು ಹಾಳಾಗುವುದಕ್ಕೆ ಅವಕಾಶವಾಗಿದೆ. ಮೊದಲಿನಿಂದಲೂ ಕೂಡ ಇದನ್ನು ಹೇಳುತ್ತಾ ಬಂದರೂ ಕೂಡ ಸರ್ಕಾರದವರು ಇದೇ ಪರಿಸ್ಥಿತಿಯನ್ನು ಮುಂದುವರಿಸಿಕೊಂಡು ಬಂದಿರುವುದರಿವುದರಿಂದ ನಮ್ಮ ಹಣಕಾಸಿನ ಮುನ್ ಸೂಚನಾ ಪತ್ರ ಶಾಸ್ತ್ರೀಯವಾಗಿ ತಯಾರಾಗಿಲ್ಲ ಎಂಬುದಕ್ಕೆ ಇದೂ ಕೂಡ ಒಂದು ಸಾಕ್ಷಿಯಾಗಿದೆ.

2 ಕೋಟಿ 65 ಲಕ್ಷ ರೂಪಾಯಿ ಕೇಂದ್ರ ಸರ್ಕಾರದಿಂದ ನಮಗೆ ಬಂದಿದೆ ಅದನ್ನು ಆಹಾರ ಉತ್ಪಾದನೆಗಾಗಿ ಮತ್ತು ಸಣ್ಣ ಸಣ್ಣ ನೀರಾವರಿ ಯೋಜನೆಗೆ ಖರ್ಚು ಮಾಡಬೇಕೆಂಬ ಮೂಲ ಉದ್ದೇಶವನ್ನಿಟ್ಟುಕೊಂಡು ಈ ಸಭೆಯ ಮುಂದೆ ತಂದಿದ್ದೀರಿ. ಇದೂ ಕೂಡ ಸಾರ್ಥಕವಾಗಬೇಕಾಗಿದ್ದರೆ ಈ ಹಣವನ್ನು ಸಣ್ಣ ನೀರಾವರಿಯ ಅವಶ್ಯಕತೆ ಎಲ್ಲಿ ಇದೆ ಅಲ್ಲಿಗೆ ಕೊಡಲೇಬೇಕಾಗಿದೆ. ತಮ್ಮಲ್ಲಿ ಪಕ್ಷಾತೀತ ಭಾವನೆ ಉಂಟಾಗಬೇಕು. ಪಕ್ಷಪಾತ ಭಾವನೆ ಬೆಳೆದುಬಂದಿರುವುದು ಹೋಗಬೇಕು. ಇದು ಹೋಗಬೇಕಾದರೆ ಸಣ್ಣ ನೀರಾವರಿ ಕಾಮಗಾರಿಗಳಿಗೆ ಎಲ್ಲಾ ತಾಲ್ಲೂಕುಗಳಿಗೂ ಕೂಡ ಸಮವಾಗಿ ಹಂಚತಕ್ಕ ನೀತಿಯನ್ನು ಅನುಸರಿಸಿದರೆ ಮಾತ್ರ ಸರ್ಕಾರದ ಹಣದ ಪಾವಿತ್ರತೆಯನ್ನು ಕಾಪಾಡಿಕೊಂಡು ಬಂದಿದ್ದೀರಿ ಎಂಬ ನಂಬಿಕೆ ನಮಗೆ ಬರುತ್ತದೆ. ಆರ್ಥಿಕ ಸಚಿವರು ಈಗತಾನೆ ಬಂದಿದ್ದಾರೆ ಅವರು ಈ ವಿಚಾರದಲ್ಲಿ ಕಟ್ಟುನಿಟ್ಟಾಗಿ ತಮ್ಮ ಜವಾಬ್ದಾರಿಯನ್ನು ವಹಿಸಬೇಕಾದ ಕಾಲ ಬಂದಿದೆ. ಯಾವ ದಾಕ್ಷಿಣ್ಯಗಳಿಗೂ ಕೂಡ ಒಳಗಾಗದೇ ನೀರಾವರಿ ಬಾಬಿಗೆ ಒದಗಿಸಿರತಕ್ಕ ಹಣವನ್ನು ಎಲ್ಲಾ ಕ್ಷೇತ್ರಗಳಿಗೂ ಕೂಡ ಸಮಾನವಾಗಿ ಹಂಚಬೇಕೆಂದು ಹೇಳುತ್ತೇನೆ. ಅವರು ಬಡ್ಜೆಟ್ಟನ್ನು ಮಂಜೂರು ಮಾಡುವಾಗ ಸಣ್ಣಸಣ್ಣ ನೀರಾವರಿ ಕಾಮಗಾರಿಗಳು ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಮಂಜೂರ ಮಾಡಬಹುದು ಎಂಬ ಒಂದು ಪಟ್ಟಿಯನ್ನು ತರಿಸುತ್ತೇನೆ ಎಂದು ನೀಡಿದ್ದ ಭರವಸೆ ಇದುವರೆಗೂ ಬಂದಿಲ್ಲ ಆ ಭರವಸೆಯನ್ನು ಈಗಲಾದರೂ ಈಡೇರಿಸಬೇಕು ಎಂದು ಹೇಳುತ್ತೇನೆ.

ಪಿ ಡಬ್ಲ್ಯೂ ಡಿ ಇಲಾಖೆಯಲ್ಲಿ ಯಾವ ಯಾವ ಲೋಪದೋಷಗಳಿವೆ ಅವನ್ನು ಸರಿಪಡಿಸಬೇಕು. ಇಂಜನಿಯರುಗಳು ಮತ್ತು ಅದಕ್ಕೆ ಸಂಬಂಧಪಟ್ಟವರು ಕೆಲವರು ಅಲೆಯುತ್ತಾ ಇದ್ದಾರೆ. ಏಕೆಂದರೆ ಅವರಿಗೆ ವರ್ಗವಾಗಿರುತ್ತದೆ, ಬೇರೆ ಕಡೆ ಜಾಗ ಇರುವುದಿಲ್ಲ, ಎಲ್ಲಿಗೆ ಹೋಗಬೇಕು ಎಂಬುದು ಒಂದು ಗೊಂದಲವಾಗಿ 50-60 ಜನ ಜೂನಿಯರ್ ಇಂಜನಿಯರುಗಳು 10-20 ಜನ ಅಸಿಸ್ಟೆಂಟ್ ಇಂಜಿನಿಯರುಗಳು ಕೆಲಸವಿಲ್ಲದೇ ಅಲೆಯುತ್ತ ಇದ್ದಾರೆ. ಈ ರೀತಿಯ ಗೊಂದಲ ಪರಿಸ್ಥಿತಿ ಇದೆ ಇದನ್ನು ವಿಚಾರ ಮಾಡಬೇಕು. ನಾನು ಮೊದಲೇ ಹೇಳಿದಹಾಗೆ ಪಿ ಡಬ್ಲ್ಯೂ ಡಿ ಇಲಾಖೆಯ ಹಸ್ತಕ್ಷೇಪದ ಮೇಲೆ ಅವರ ಕೆಲಸದ ನಿರ್ವಹಣೆಯ ಬಗ್ಗೆ ಅಲ್ಲದೇ ಇದ್ದರೂಕೂಡ ಒಂದೇ ಭಾಗದ ಜನರು, ಒಂದೇ ಜಿಲ್ಲೆಯ ಜನರು ಇದ್ದಾರೆ ಎಂಬ ಒಂದು ದೊಡ್ಡ ಅಪವಾದ ಏನ ಬಂದಿದೆ ಅದನ್ನು ನಿವಾರಣೆ ಮಾಡದಿದ್ದರೆ ನಿಜವಾಗಿಯೂ ಕೂಡಿ ನೀವು ಇವತ್ತು ಒಂದು ದೊಡ್ಡ ಅಪವಾದಕ್ಕೆ ಗುರಿಯಾಗುತ್ತೀರಿ ಆದ್ದರಿಂದ ಅದನ್ನು ನಿವಾರಣೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಅಧ್ಯಕ್ಷರೆ, ಬಡ್ಜೆಟ್ ಅಧಿವೇಶನವಾದನಂತರ ಕೇವಲ 3 ತಿಂಗಳಲ್ಲಿ ಸುಮಾರು 3 ಕೋಟಿ 62 ಲಕ್ಷ ರೂಪಾಯಿಗಳ ಹೆಚ್ಚುವರಿ ಬೇಡಿಕೆಯನ್ನು ನಮ್ಮ ಮುಂದಿಟ್ಟಿರುವುದನ್ನು ನೋಡಿ ಆಶ್ಚರ್ಯವಾಗುತ್ತಿದೆ. ಅಷ್ಟೇ ಅಲ್ಲ, ಈಗ ತುರ್ತು ಪರಿಸ್ಥಿತಿ ಬೇರೆ. ಅಭಾವ ಪರಿಸ್ಥಿತಿ ರಾಜ್ಯದಲ್ಲಿರುವಾಗ ಈಗ ಇರುವ ಬೇಡಿಕೆ ಅನಾವಶ್ಯಕವೆಂದು ತೋರುತ್ತದೆ. ಏಕೆಂದರೆ ಈಗಾಗಲೆ ನೋಡುವ ಹಾಗೆ ರಾಜ್ಯಪಾಲರ ಬಗ್ಗೆ ಹೇಳುವುದು ಅನುಚಿತವಾದರೂ ಕೂಡ ಅವರಿಗಾಗಿ ಹಣ ಕೇಳಿರುವುದು ಅನಾವಶ್ಯಕ ಎಂದು ಕಾಣುತ್ತದೆ. ಏಕೆಂದರೆ ಈಗ ಅವರಿಗೆ ಇರು

(ಶ್ರೀ ಸಿದ್ದಯ್ಯ ಕಾಶೀಮಠ)

ವುದಕ್ಕೆ ನಿವಾಸವಿದೆ, ಕಾರಿದೆ, ಸಿಬ್ಬಂದಿಗೆ ಬೇಕಾದರೆ ಅವಕಾಶಮಾಡಬಹುದು. 10ನೆಯ ಡಿಮ್ಯಾಂಡಿನಲ್ಲಿ ರಾಜ್ಯಪಾಲರಿಗೆ ಸಂಬಂಧಪಟ್ಟಹಾಗೆ ನಾಲ್ಕು ಕಡೆ 50 ಸಾವಿರ ರೂಪಾಯಿಗಳ ಬೇಡಿಕೆಯಿದೆ, ಇದು ಅನಾವಶ್ಯಕವಾದ ಖರ್ಚು, ಸಾಧ್ಯವಾದಮಟ್ಟಿಗೆ ಈ ಹಣ ಉಳಿಸಿ ಬೇಕಾದರೆ ಅಭಾವ ಪರಿಸ್ಥಿತಿಗೊಳಗಾಗಿರುವ ಪ್ರದೇಶಗಳ ಜನರಿಗೆ ಒದಗಿಸಬೇಕೆಂದು ಹೇಳಬಯಸುತ್ತೇನೆ. ಉಳಿದ ಬಾಬುಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಕಡಮೆಮಾಡಿ. ರಾಜ್ಯಪಾಲರಿಗೆ ನಿವಾಸ ಬೇಕು, ನಿಜ. ಆದರೆ ತುರ್ತು ಪರಿಸ್ಥಿತಿ, ಅಭಾವ ಪರಿಸ್ಥಿತಿ ಇರುವುದರಿಂದ 5 ವರ್ಷಗಳವರೆಗಾದರೂ ಈ ಖರ್ಚನ್ನು ನಿಲ್ಲಿಸಿ ಆರ್ಥಿಕ ಪರಿಸ್ಥಿತಿ ಸುಧಾರಿಸಿದಮೇಲೆ ಇದನ್ನು ಮಾಡಿ. ಈಗ ನಿವಾಸಕ್ಕೆ ಅವರಿಗೆ ಸರಿಯಾದ ಕಟ್ಟಡವಿದೆ, ಬೇಕಾದ ವಾಹನ ಸೌಕರ್ಯವಿದೆ. ಆದುದರಿಂದ ಅದಕ್ಕಾಗಿ ಎರಡು ಲಕ್ಷ ರೂಪಾಯಿಗಳ ವೆಚ್ಚಮಾಡುವುದು ಈಗ ಅನಾವಶ್ಯಕವೆಂದು ಹೇಳಲಚ್ಛಿಸುತ್ತೇನೆ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ತಮ್ಮ ಇಂಪ್ರೆಷನ್ ಸರಿಯಾಗಿಲ್ಲ, ಇದೇ ರೀತಿ ಇತರರು ವಿಷಯ ಸರಿಯಾಗಿ ತಿಳಿಯದಿದ್ದರೆ ತಪ್ಪು ದಾರಿ ಹಿಡಿಯುತ್ತಾರೆ. ಆದುದರಿಂದ ಮುಂದೆ ಮಾತನಾಡುವವರು ಸರಿಯಾಗಿ ತಿಳಿದುಕೊಂಡು ಮಾತನಾಡಲೆಂದು ಕೆಲವು ವಿಚಾರ ಸ್ಪಷ್ಟಪಡಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈ ಬೇಡಿಕೆ ಮಂಡಿಸಿದಾಗ ಮಾನ್ಯ ಆರ್ಥಿಕ ಸಚಿವರು ಹಾಜರಿದ್ದು ತಪಶೀಲಾಗಿ ವಿಷಯ ತಿಳಿಸಿದರೆ ಕರ್ತವ್ಯ ಲೋಪಮಾಡಿದ್ದಾರೆಂದು ಭಾವಿಸಬಹುದೆ?

ಶ್ರೀ ಬಿ. ಡಿ. ಜತ್ತಿ.—ನಾನು ಮೇಲ್ಮನೆಯಲ್ಲಿ ಉತ್ತರ ಕೊಡಬೇಕಾಗಿದ್ದುದರಿಂದ ಬರುವುದು ಸ್ವಲ್ಪ ತಡವಾಯಿತು.

From 1-11-1956 till the appointment of the new Governor here, there was His Highness the Maharaja of Mysore originally, then he became the Rajapramukh and then he became the Governor. Whatever might have been his position, he did not make use of Government cars, he did not make use of Government buildings and he did not make use of so many other things and so it was not necessary for us to provide them. As the House knows he has now gone to Madras as Gevernor and a new Governor has come here. All these things are not there for the new Governor and so we have to make provision for them. So it is not proper for us to compare the previous position with the position of the present Governor.

ಶ್ರೀ ಸಿದ್ದಯ್ಯ ಕಾಶಿಮಠ.—ಈಗ ಮಂತ್ರಿಗಳು ಹೇಳಿದಹಾಗೆ ಅವರಿಗೆ ಬೇಕಾದ ಸಲಕರಣೆಗಳನ್ನು ಕೊಡಬಹುದು, ಬೇಡವೆಂದು ಹೇಳುವುದಿಲ್ಲ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಇಷ್ಟು ಹಣ ಖರ್ಚುಮಾಡಬೇಕಾಗಿರಲಿಲ್ಲ, ಕಟ್ಟಡವಿದೆ, ಕಾರಿಗೆ ಬೇಕಾದರೆ 50 ಸಾವಿರ ತೆಗೆದುಕೊಳ್ಳಬಹುದಾಗಿತ್ತು. ದೊಡ್ಡ ಮೊತ್ತ ಈಗಲೇ ಖರ್ಚು ಮಾಡುವುದಕ್ಕೆ ಬದಲಾಗಿ ಅದನ್ನು 2-3 ವರ್ಷಗಳವರೆಗಾದರೂ ಮುಂದುವರಿಸಬೇಕು. ಕೊಡಬಾರದೆಂದು ನಾನು ಹೇಳುತ್ತಿಲ್ಲ.

11ನೆಯ ಐಟಂನಲ್ಲಿ ಸರ್ಕಾರಿ ನೌಕರರಿಗಾಗಿ ಕೊಡಬೇಕಾದ ಹಣ ತೋರಿಸಿದೆ. ಅವರಿಗೆ ಅನ್ಯಾಯವಾಗಿದ್ದರೆ ಅದನ್ನು ಇಲ್ಲೇ ಸರ್ಕಾರ ತೀರ್ಮಾನಮಾಡಬಹುದಾಗಿತ್ತು. ಸುಪ್ರೀಂ ಕೋರ್ಟಿಗೆ ಹೋಗಲು ಬಿಡಬಾರದಾಗಿತ್ತು, ಹೀಗೆ ಕೋರ್ಟಿಗೆ ಹೋಗಲು ಬಿಡುವುದು ಸರ್ಕಾರಕ್ಕೆ ಕೀರ್ತಿ ತರುವಂತಿಲ್ಲ, ಸರ್ಕಾರಿ ನೌಕರರಿಗೆ ಆದಷ್ಟುಮಟ್ಟಿಗೆ ಪ್ರೋತ್ಸಾಹ ನೀಡಬೇಕೇ ವಿನಾ ಹೈಕೋರ್ಟು, ಸುಪ್ರೀಂ ಕೋರ್ಟುಗಳಿಗೆ ಹೋಗಲು ಅವಕಾಶಮಾಡಬಾರದು.

ಇನ್ನೊಂದು; ಗೋಲ್ಡ್ ಕಂಟ್ರೋಲ್ ಬಗ್ಗೆ ಹೇಳಬೇಕಾಗಿದೆ. ಗೋಲ್ಡ್ ಕಂಟ್ರೋಲ್ ಆರ್ಡರನ್ನು ಜಾರಿಗೆ ತರಲು ಒಬ್ಬ ಡೆಪ್ಯುಟಿ ಸೆಕ್ರೆಟರಿ ಮತ್ತು ಇತರ ಸಿಬ್ಬಂದಿಯನ್ನು ನೇಮಕ ಮಾಡಲು 25 ಸಾವಿರ ರೂಪಾಯಿಗಳ ಡಿಮ್ಯಾಂಡ್ ಬಂದಿದೆ. ಆದರೆ ಅಕ್ಕಸಾಲಿಗರಿಗೆ ಯಾವ ರೀತಿ ಸಹಾಯ ಮಾಡಿದ್ದೀರಿ? ನೌಕರರನ್ನು ನೇಮಿಸುವಾಗ ಅಥವ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರು ಮಾಡಿಕೊಳ್ಳುವಾಗ ಅಕ್ಕಸಾಲಿಗರಿಗೆ ಸೌಲತ್ತು ಪ್ರತ್ಯೇಕವಾಗಿ ಗಮನ ಕೊಡಲು ಸಾಧ್ಯವಿಲ್ಲವೆಂದು ಉತ್ತರ ಕೊಡುವಾಗ ಒಂದು ಸಲ ಹೇಳಿದ್ದರು. ಆದರೆ ಇಲ್ಲಿ ಅಕ್ಕಸಾಲಿಗರಿಗೆ ಸೌಲತ್ತು ಕೊಡಲು ಸಿಬ್ಬಂದಿ ನೇಮಕಮಾಡಿದೆ ಎಂದು ಹೇಳಿದೆ. ಈ ಬಾಬನ್ನು ಅಳವಡಿಸುವುದು ಬೇಡವೆಂದು

ಹೇಳುವುದಿಲ್ಲ. ಆದರೆ ಅಕ್ಕಸಾಲಿಗರಿಗೆ ಬೇಕಾದ ಸೌಲಭ್ಯಕ್ಕಾಗಿ ಬೇರೆ ರೂಲ್ಸ್ ಮಾಡಿ ಅನುಕೂಲ ಕಲ್ಪಿಸುವಂತೆ ಆದೇಶ ಕೊಡಬೇಕು

19ನೆಯ ಡಿಮ್ಯಾಂಡಿನಲ್ಲಿ 18 ಬೆಡ್ಸ್ ಇರುವ ಒಂದು ಆಸ್ಪತ್ರೆಯನ್ನು ಅಕ್ಕಿ ಆಲೂರಿನಲ್ಲಿ ತೆರೆಯಲು ಹಣ ಒದಗಿಸಲಾಗಿದೆ. ಹಾಗೆ ಒದಗಿಸುವಾಗ ಅಲ್ಲಿಗೆ ಕಳುಹಿಸಲು ಡಾಕ್ಟರಾಗಲಿ ಬೇಕಾದ ಸಿಬ್ಬಂದಿಯಾಗಲಿ ನಿಮ್ಮಲ್ಲಿದೆಯೆ ? ಇಲ್ಲದಿದ್ದರೆ 48 ಸಾವಿರ ರೂಪಾಯಿಗಳನ್ನೇಕೆ ಕೇಳುವುದು ? ಅಲ್ಲದೆ ತಾಲ್ಲೂಕು ಬೋರ್ಡಿನವರು ಇದರಲ್ಲಿ ಅರ್ಧಭಾಗ ಹಣ ಕೊಡಬೇಕೆಂದು ಹೇಳಲಾಗಿದೆ ಆದರೆ ತಾಲ್ಲೂಕು ಬೋರ್ಡು ಕೊಡಲು ಸಾಧ್ಯವಿದೆಯೆ ಎಂದು ವಿಚಾರಮಾಡಿದ್ದೀರಾ ? ಆಗಸ್ಟಿನಲ್ಲಿ ಮಂಜೂರಾದ ಈ ಆಸ್ಪತ್ರೆ ಕೆಲಸ ಮಾಡುತ್ತಿದೆಯೆ ಎಂದು ನೋಡಿದ್ದೀರಾ ? ಯಾವುದೇ ಆಗಲಿ ಆಸ್ಪತ್ರೆ ತೆರೆಯುವುದಾಗಲಿ ಅಥವಾ ಬೇಕಾದ ಸೌಲತ್ತು ಕೊಡುವುದಾಗಲಿ ಕಾರ್ಯಗತ ಮಾಡುವಾಗ ಸರಿಯಾದ ಸಿಬ್ಬಂದಿ ಇದೆಯೋ ಎಂದು ಪರಿಶೀಲಿಸಬೇಕು.

ಇನ್ನು 20ನೆಯ ಡಿಮ್ಯಾಂಡು ವ್ಯವಸಾಯ ಇಲಾಖೆ ಬಗ್ಗೆ ಇದೆ. ಇರಿಗೇಷನ್ನಿಗೆ ಜಪಾನ್ ಮೆಥಡ್ ಅನುಸರಿಸಿರುವುದಾಗಿ ಹೇಳಿದರು. ಆದರೆ ಎಲ್ಲೂ ಕಟ್ಟುನಿಟ್ಟಾಗಿ ಅದನ್ನನುಸರಿಸಿರುವುದಿಲ್ಲ. ಇದಕ್ಕೆ 4-5 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಹಾಗೆ ಕೊಡುವಾಗ ಕೊಟ್ಟಿರುವುದು ಸರಿಯಾಗಿ ವ್ಯಯವಾಗುತ್ತಿದೆಯೆ ಎಂಬುದನ್ನು ನೋಡಬೇಕು. 5, 6, 7 ನೆಯ ಐಟಂಗಳಲ್ಲಿ ಪ್ಲಾಂಟ್ ಪ್ರೊಟೆಕ್ಷನ್, ಸೀಡ್ ಫಾರಂ ಮುಂತಾದ್ದಕ್ಕೆ ಪ್ರತಿಯೊಂದಕ್ಕೂ 5 ಲಕ್ಷ ರೂಪಾಯಿಗಳನ್ನು ಒದಗಿಸಿರುವುದೇಕೆ ಎಂಬುದು ಸರಿಯಾಗಿ ಅರ್ಥವಾಗಲಿಲ್ಲ. ಇಂಟೆನ್ಸಿವ್ ಪ್ರೋಗ್ರಾಂ ಏನು ಮಾಡುವುದು ?

ಈ ಡಿಮ್ಯಾಂಡು 20 ರಲ್ಲಿ ಇಂಟೆನ್‌ಸೀವ್ ರೈಸ್ ಕಲ್ಟಿವೇಷನ್ ಎಂದು ಹೇಳುತ್ತ ಇದರಲ್ಲಿ ಜೋಳ, ಬಾಜ್ರ ಇತ್ಯಾದಿಗಳ ಕೆಲಸಗಳನ್ನು ಮಾಡಬೇಕೆಂದು ಇದರಲ್ಲಿ ಹಣವನ್ನು ಕೇಳುತ್ತಿದ್ದೀರಿ. ಈಗ ತಾವು ಸೀಡು ಫಾರಂಗಳೆಂದು ಮಾಡಿ ಅವುಗಳಿಂದ ಕೊಟ್ಟ ಬೀಜಗಳು ಹುಟ್ಟದೇ ಇರುವಂತಹ ಪರಿಸ್ಥಿತಿಗಳು ಸಾಕಷ್ಟು ನಮ್ಮಲ್ಲಿವೆ, ಇದರ ಬಗ್ಗೆ ತಕರಾರುಗಳನ್ನು ವ್ಯವಸಾಯ ಇಲಾಖೆಗೆ ಬರೆದರೂ ಅವರುಗಳು ಸಾಕಷ್ಟು ಸಹಾಯ ಮಾಡುತ್ತಿಲ್ಲ. ಆದ್ದರಿಂದ ಸರಕಾರ ಇದರ ಬಗ್ಗೆ ಕಟ್ಟುನಿಟ್ಟಾದ ಆದೇಶವನ್ನು ಸರಿಯಾದ ರೀತಿಯಲ್ಲಿ ಕೊಡಬೇಕೆಂದು ಇಲ್ಲಿ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಡಿಮ್ಯಾಂಡು 23 ರಲ್ಲಿ ಮಾರ್ಕೆಟಿಂಗು ಸೊಸೈಟಿಗಳಿಗಾಗಿ ಸಬ್‌ಸಿಡಿಗಳನ್ನು ಕೊಡುವುದಕ್ಕಾಗಿ ಹಣವನ್ನು ಕೇಳಿದ್ದಾರೆ. ಸಬ್‌ಸಿಡಿ ಕೊಡತಕ್ಕದ್ದು ಯೋಗ್ಯವಾಗಿದೆ. ಆದರೆ ಹೊಸದಾಗಿ ರಿಜಿಸ್ಟರು ಮಾಡಿರತಕ್ಕ ಕನ್‌ಸ್ಯೂಮರು ಸೊಸೈಟಿಗಳಿಗೆ ಇದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಆದೇಶ ಹೊರಡಿಸಿದ್ದಾರೆಂದು ಕೇಳುತ್ತೇನೆ. ಸಬ್‌ಸಿಡಿ ಕೊಡದೇ ಹೋದರೆ ಅವು ಉಳಿಯುವ ಸ್ಥಿತಿಯೇ ಇಲ್ಲ. ಆದುದರಿಂದ ಇದರ ಉದ್ದೇಶಸಾಧನೆಯಾಗುವುದಿಲ್ಲ. ಹೊಸದಾಗಿ ಬೆಳೆಯುವ ಸಹಕಾರ ಸಂಘಗಳು ಉಳಿಯಬೇಕಾದರೆ ಮತ್ತು ಅಲ್ಲಿನ ನೌಕರರುಗಳು ಕೆಲಸ ಮಾಡುವುದರ ಸಲುವಾಗಿ ಸಬ್‌ಸಿಡಿಯನ್ನು ಕೊಡಬೇಕೆಂದು ಕೇಳುತ್ತೇನೆ. ಮತ್ತು ಅದೇ ರೀತಿಯಾಗಿ ಸರಕಾರ ತನ್ನ ಆದೇಶವನ್ನು ಎಲ್ಲ ಕಡೆಗೂ ಲಾಗೂ ಆಗುವ ಹಾಗೆ ಮಾಡಬೇಕು.

ಡಿಮ್ಯಾಂಡು 27 ರಲ್ಲಿ ಮಿಸ್ಸಲೇನಿಯಸ್ ಸ್ಕೀಮುಗಳಿಗಾಗಿ ಸುಮಾರು 30 ಸಾವಿರ ರೂಪಾಯಿಗಳಷ್ಟು ಬೇಕೆಂದು ಕೇಳಿದ್ದಾರೆ. ಇದರಲ್ಲಿ ಷೆಡ್ಯೂಲು ಜನಾಂಗದವರನ್ನು ಐ.ಎ.ಎಸ್. ಹಾಗೂ ಐ.ಪಿ.ಎಸ್ ಟ್ರೇನಿಂಗಿಗಾಗಿ ಎಂದು ಇದೆ. ಆದರೆ ಹೋದ ವರ್ಷ ಇಲ್ಲಿಂದ ಯಾರೂ ಪಾಸಾಗಲಿಲ್ಲ ವೆಂದು ನಾನು ಕೇಳುತ್ತೇನೆ. ಇದರ ಬಗ್ಗೆ ಸರಿಯಾದ ತಜ್ಞರಾದವರನ್ನು ಪ್ರೊಫೆಸರುಗಳಾಗಿ ನೇಮಕಮಾಡಿ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡು 31 ರಲ್ಲಿ ದಾಂಡೇಲಿ, ಕೆ.ಜಿ.ಎಫ್. ಮತ್ತು ಮೈಸೂರು ಇಲ್ಲಿಗೆ ಒಂದು ಮಾಸ್ಟರು ಪ್ಲಾನು ತಯಾರು ಮಾಡುವುದಕ್ಕಾಗಿ ನಾಲ್ಕು ಲಕ್ಷದಷ್ಟು ಹಣ ಕೇಳಿದ್ದಾರೆ ಸರಕಾರದ ದೃಷ್ಟಿಯಲ್ಲಿ ಇವು ಮೂರೇ ಪಟ್ಟಣಗಳು ಏಕೆ ಬಂದಿದೆ ಗೊತ್ತಾಗುತ್ತಿಲ್ಲ. ಇದರಂತೆ ಹುಬ್ಬಳ್ಳಿ ಇದೆ, ದಾವಣಗೆರೆ ಇದೆ, ಗದಗ್ ಇದೆ ಇನ್ನೆಲ್ಲಾ ಒಂದು ಮಾಸ್ಟರು ಪ್ಲಾನು ತಯಾರಿಸಿ ಅಲ್ಲಿಗೆ ಒಂದು ಖಾಯಂ ಆದ ಸಿಬ್ಬಂದಿಯನ್ನು ಇಟ್ಟುಕೊಳ್ಳಲು ಅವಕಾಶ ಮಾಡಬೇಕು. ಈಗ ಇರುವಂತೆ ಒಂದು ವರ್ಷವಾದ ಮೇಲೆ ಅವರನ್ನೆಲ್ಲಾ ತೆಗೆದುಹಾಕಬಾರದು.

ಡಿಮ್ಯಾಂಡು 44 ರಲ್ಲಿ ಇನ್‌ವೆಸ್ಟ್‌ಮೆಂಟುಗಳನ್ನು ಮಾಡಿರುವುದರ ಬಗ್ಗೆ ವಿವರಗಳನ್ನು ಹೇಳಿದ್ದಾರೆ. ಇದರಲ್ಲಿ ಇಂಡಸ್ಟ್ರಿಯಲ್ ಡೆವಲೆಪ್‌ಮೆಂಟಿಗಾಗಿ ಮೈಸೂರು ಹ್ಯಾಂಡಿಕ್ರಾಫ್ಟ್ಸ್ ಬೋರ್ಡಿಗೆ ಷೇರಿಗಾಗಿ 5 ಲಕ್ಷ ಮತ್ತು ಸೌತ್ ಇಂಡಿಯಾ ಬನಾನಾ ಫ್ರೂಟ್ ಡೆವಲಪ್‌ಮೆಂಟು ಕಾರ್ಪೋರೇಷನ್ನಿಗಾಗಿ 1,27,500 ಎಂದು ಕೊಡಲಾಗಿದೆ. ಇದನ್ನು ಏಕೆ ನಮ್ಮ ಸರ್ಕಾರ ಕೊಡಬೇಕು ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ. ಡಿ. ಜತ್ತಿ.—ತಾವು ಇಲ್ಲಿ ತಪ್ಪು ಅಭಿಪ್ರಾಯದಿಂದ ಹೇಳುತ್ತಿದ್ದೀರಿ. ಈಗ ಸೌತ್ ಜೋನು ಎಂದು ಮಾಡಲಾಗಿದೆ. ಅದರಲ್ಲಿ ದಕ್ಷಿಣದಲ್ಲಿರುವ ಎಲ್ಲ ರಾಜ್ಯಗಳೂ ಪಾಲನ್ನು ತೆಗೆದುಕೊಂಡಿವೆ. ಅದರಂತೆ ನಮ್ಮ ದೇಶವನ್ನೂ ಪಾಲುಗಾರರಾಗಿ ಸೇರಿಸಲಾಗಿದೆ. ಇದರಿಂದ ನಮಗೆ ಅನುಕೂಲವಾಗುತ್ತದೆ. ಇದು ಮದ್ರಾಸು, ಆಂಧ್ರ, ಕೇರಳ ರಾಜ್ಯಗಳಿಗೆ ಅನುಕೂಲವಾಗುವುದೂ ಅಲ್ಲದೆ ನಮ್ಮ ರಾಜ್ಯಕ್ಕೂ ಅನುಕೂಲವಾಗುತ್ತದೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಇನ್ನು ಇದರಲ್ಲಿ ದೀಪಕ್ ಕಾರ್ಪೋರೇಷನ್ನಿಗಾಗಿ 75 ಸಾವಿರದಷ್ಟು ಹಣ ಕೊಡಲಾಗಿದೆ. ಇದರಿಂದೇನು ಉಪಯೋಗವಾಗುತ್ತದೆ ಅದನ್ನು ತಿಳಿಸಬೇಕು. ಅಲ್ಲದೆ ನಮ್ಮಲ್ಲಿರುವ ಷೋರೂಂಗಳನ್ನು ಇನ್ನು ಚೆನ್ನಾಗಿ ಜನಗಳಿಗೆ ತಿಳಿಯುವಂತೆ ಪ್ರಚಾರ ಮಾಡಿದರೆ ಅದರಿಂದ ಇನ್ನೂ ಹೆಚ್ಚಿನ ಅನುಕೂಲಗಳು ಸಿಕ್ಕುತ್ತವೆ. ಇದರ ಬಗ್ಗೆ ಸರ್ಕಾರ ಇನ್ನೂ ಹೆಚ್ಚು ಹಣ ಬೇಕಾದರೂ ಖರ್ಚು ಮಾಡಬಹುದು.

ಡಿಮ್ಯಾಂಡು 54 ರಲ್ಲಿ ಸುಮಾರು ಎರಡು ಕೋಟಿಯಷ್ಟು ಹಣವನ್ನು ವಿವಿಧ ಬಾಬುಗಳಿಗಾಗಿ ಕೇಳಿದ್ದಾರೆ. ಇದರಲ್ಲಿ ಪಂಪುಸೆಟ್ಟುಗಳ ಬಗ್ಗೇನೂ ಹೇಳಿದ್ದಾರೆ. ಈಗಾಗಲೇ ಇಲ್ಲಿ ಪಂಪುಸೆಟ್ಟುಗಳ ಬಗ್ಗೆ ಸರಿಯಾಗಿ ಎಷ್ಟೋ ಕಡೆಗಳಲ್ಲಿ ಕೆಲಸ ಮಾಡುತ್ತಿಲ್ಲ ಮತ್ತು ಸೆಟ್ಟುಗಳು ಸರಿಯಾಗಿ ಹಂಚಿಕೆಯಾಗುತ್ತಿಲ್ಲ ಎಂದು ಹೇಳಿದ್ದಾರೆ. ಅಲ್ಲದೆ ಎಲೆಕ್ಟ್ರಿಸಿಟಿ ಎಲ್ಲಿ ಇಲ್ಲವೋ ಅಲ್ಲಿ ಡೀಸಲ್ ಆಯಿಲ್ ಪಂಪು ಸೆಟ್ಟುಗಳನ್ನುಪಯೋಗಿಸಬೇಕೆಂದು ಕೇಳಿದರೂ ಎಲೆಕ್ಟ್ರಿಸಿಟಿ ಬರುವವರೆಗೆ ಕಾಯಬೇಕೆಂದು ಇಲ್ಲಿ ಹೇಳಿದರು.

ಒಟ್ಟಿನಲ್ಲಿ ಇಲ್ಲಿ ಕೇಳಿರುವಂತೆ ತೆಗೆದುಕೊಂಡ ಹಣವನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum City).—Every year in two or three instalments the supplementary estimates are placed before this House, and last instalment comes even in the month of February or March. So, if these demands are placed before the House now in the month of July, I think this forebodes the coming of three or four more instalments hereafter amounting to crores of rupees. About the supplementary grants it has been the experience during the last so many years that in large number of cases the supplementary demands have proved wholly unnecessary or largely excessive. That means, the supplementary demands which are voted by this House are either not utilized at all or not fully utilised. The Government does not take necessary precaution to see that amounts are utilised and schemes are implemented. The Government does not take proper precaution to see to this. I would refer to Audit Report 1964. This relates to the year 1962-63.

"During the year, supplementary provision totalling Rs 75.85 crores was obtained under 39 grants/appropriations. The details given in Appendix I bring out the following points.—

(i) The supplementary provision of Rs. 202.04 lakhs proved entirely unnecessary in 11 cases as the expenditure did not even come up to the original grants; in 8 of these cases only token grants need have been taken if the savings had been assessed and taken into account. In 5 of these 11 cases the supplementary provision totalling Rs. 53.91 lakhs had been obtained as late as February 1963 when the department should have been in a position to frame a reasonably close estimate of their requirements.

(ii) The supplementary provision proved inadequate in six cases. In these cases while the additional provision made

totalled Rs. 4.33 crores the actual expenditure exceeded the total grant including the supplementary provision by Rs. 3.48 crores."

That is how the supplmentary grants are treated. That shows clearly that there is no proper control over the expenditure. This has been pointed out by the audit every year. These defects are being pointed out every year and the P.A.C. also are pointing out the lapses on the part of the Government every year.

But unfortunately there has been no improvement in the affairs. There should be as close an approximation as possible between budget provision and actual expenditure. Our experience is that this approximation is lacking. I hope the Hon'ble Minister would see that whatever amounts are voted are fully utilised by the various Departments and that the various schemes included in the Budget grants will be implemented to the full.

2-00 P.M.

Some of the items in these Supplementry Demands could have been easily anticipated and included in the original budget. There is lack of proper control over expenditure, similarly there is lack of proper scrutiny are the budget. As the A.G.R. committee has pointed out, while preparing the budget or the Supplementary Demands, proper pre-budget scrutiny should be made before formulating the demands. But that is not being done and that is why we are asked to vote for the lapses and for the omissions and commissions of the Government.

With these preliminary remarks I will come the various Demands.

About Demand No. 10, Governor's expenses, this is a charged item. So, we cannot vote on it but we can express our views on it. The Hen'ble Members who spoke before me have dealt with it and so I will not take the time of the House in dealing with it. The Governor's present residence, the Residency, is one of the most beautiful buildings in the city and it is also a well-furnished bungalow. So, I do not understand what is the necessity of spending Rs. 50,000 on gardens; Rs. 50,000 on water and Rs. 50,000 on repairs. This is extravagance. All these itms seem to be too much and they can be easily minimised, particularly Rs. 50,000 on improvement of gardens, Rs. 50,000 for water and Rs.50,000 for repairs. I do not understand why Rs. 50,000 are required for providing water facilities when at present they are full facilities there in this behalf. Regarding the garden also, there is an existing well maintained garden. So, what is the necessity of this additional Rs. 50,000. It is too much This expenditure could have been easily anticiapted and included in the original budget, because the appointment of the Governor was announced much earlier.

Sri B. D. JATTI.—Should Government depend upon reports which are floating in the air or depend upon the order which has to be issued by the President ?

Sri B. R. SUNTHANKAR.—The actual Government Order might have been issued later but it was a settled fact that the new Governor was to come to Mysore.

Coming to Demand No. 19, about the hospital at Akkialur, Dharwar District, my Hon'ble friend sri Siddiah Kashimath has already spoken. This is clearly a lapse according to me. The reason that is given does not seem to be correct because the sanction was accorded on 2nd August 1963 and again on 20th September 1963. i. e. much earlier than the preparation of the budget. I would like to know from the Hon'ble Finance Minister on what date this hospital was really started. I think this amount could have been easily anticipated and included in the original budget. This seems to be a clear lapse on the part of the Department.

Regarding Demand No. 20, all these are schemes in the Third Five-Year Plan. Every year these schemes are included but what about the achievement and performance? The targets are not fulfilled. There are large savings in various items. That is the case every year particularly with regard to the Agricultural Department. In this Department so many schemes have simply lapsed. Provision was made in the budgeo but it was not fully utilised. Whenever schemes are undertaken or tried to be implemented, the targets are not at all achieved. Implementation is faulty. Either Schemes are not sanctioned or schemes are sanctioned very late so that they cannot be implemented during that year. Some schemes are not at all sanctioned; due to non-availability of sanction they have lapsed. Even in regard to Centrally-sponsored schemes where we get cent percent Central assistance, they lapse and when they are undertaken, very slow progress is shown. One of the main reasons is that a large number of posts both gazetted and non-gazetted, in the Agricultural Department are lying vacant for months and even years together and the patent reason given is that the seniority lists is not ready. The District Agrisultural Officers are not holding permanent post, they are simply in charge in so many districts. Some subordinate officers is appointed and he is kept in charge for years together. With this state of affairs, how will they be able to impelement the agricultural schemes and achieve the targets?

Sir, the reclamation of alkaline lands scheme is included every year and even in the budget or 62-63 this was included and the Appropriation Accounts of that year show that a sum of 2.7 lakhs was not utilised at all. So, where is the guarantee that this scheme will be implemented properly even during this current year? Similarly, about setting up of seed, farms and distribution of improved seeds. I have a lot to say about this. Firstly, there are complaints from the cultivators that improved seeds provided to them are not of good quality. I am speaking of paddy seeds supplied in my area of Belgaum district. For the last 2 or 3 years cultivators are complaining that they are not getting good quality of seeds. The Audit Report of 1964. throws light on the working of seed farms, from 1956-57 to 1962-63 65 seed farms have been set up. The expenditure is 30.52 lakhs. The Table given in the report indicates that the output was less than

half of the cost of cultivation. Cost of cultivation during all these years was 19.06 lakhs and value of out put was only 8.90 lakhs. The return was not even 50 per cent. The high cost of production of seeds was attributed to uneconomic cultivation, selection of nonfertile land etc. Sir, these are grave things. When seed farms are selected, fertile lands are not selected for these farms. So, the loss reflects badly on the working of the department. Wherever seed farms are selected, proper care should be taken to see that they become economical and that good and fertile land is selected. Sites are select d due to political pulls and pressure and to fill the pockets of certain white cap gentlemen. That is very bad.

Similarly about intensive cultivation of jowar, bajra and ragi. Sir, these programmes regarding jowar,bajra and ragi are included every year. For jowar, bajra and pulses very negligi le work is done by the Department very little area is covered by improved seeds in respect of jawar. Jowar is grown on an extensive scale in the State. Perhaps Mysore may stand first in area under Jowar. I hope that Government will take steps to supply improved seeds to cover the whole area under jowar as it is an important crop of the State.

Sir, about multiplication of seeds, I have again to refer to the Audit report during the year from 1958 to 1960, the registered growers were paid a sum of 4.08 lakhs as cultivation bonus for producing 5.40 lakhs maunds of seeds. Out of this only 1.31 maunds were distributed to agriculturists. The remaining balance was utilised by growers for other purposes. They were not ulilised for the purpose for which they were intended. They might have been sold in the market at higher rates. The cultivation bonus on the quantity of seeds not utilised for the intended purpose works out to 2.92 lakhs. So, this is a loss. Nearly Rs. 3 lakhs of bonus are wasted. The reason given is that there were no arrangements for storing the seeds. When bonus is paid and distribution takes place, Government should see that storage arrangements are provided for these cultivators or Government should purchase and store them for the use of the next season.

The intensive agriculture programme was also there in 62-63 and there was a saving to the extent of 4.90 lakhs. This was due to unfilled vacancies, non-receipt of equipment, etc. All these schemes lag behind, the grants lapse and what is the result ? The scarcity conditions, rising prices, food problem getting acute and more acute day by day. This happens even in cases where the schemes are wholly or partly financed by the Central Government. I think, all these schemes included here are 100 per cent centrally sponsored in which 100 per cent central assistance is going to be obtained. This much about the Agriculture Department.

Demand No. 20—Parks and Gardens and other charges—The Hon'ble Minister was asking me whether I could point to him some lapses or such amounts as could have been anticipated and included in the Budget. Here is one such case out of 2.50 lakhs, a sum of Rupees One lakh was paid during last year and 1.50 lakhs are to be paid during the current

SRI B. R. SUNTHANKAR)

year. This expenditure could have been easily anticipated in the Budget.

Regarding the Town Planning Department, I fully agree with my Hon'ble friend Sri Siddiah Kasimath when he said that this Town Planning scheme should be made applicable to all big towns and cities, Here, it will be made applicable to only three towns, Dandeli, K.G.F. and Mysore. This Town Planning and Master Plan scheme should be made applicable to all the towns. There has been an irregular growth of buildings without proper roads, streets, sanitation and all that. That will hamper the proper development of towns and cities. I may point out here the example of my own place, Belgaum City. As the Town Planning Act is not made applicable and there is no Master Plan, there has been an irregular and haphazard growth of the town on all sides. Houses are being constructed anywhere as the owners or the proprietors or the people like, and that will create difficulties when the Town Planning Act will be made applicable. In order to stop this irregular growth of these towns, it is necessary that this Planning Scheme and Master Plan should be made applicable to all big towns in the State.

Demand No. 38 at page 13 relates to Agricultural Production and Soil Conservation Programme for 1964-65. Sir, in this Soil Conservation Programme the progress is very slow ; it is negligible. Every year this item, i.e., schemes regarding Soil Conservation are included, but they are not properly implemented, and there are large savings. If I am to quote 1962-63 Appropriation Accounts and Audit Report, there was a savings of Rs. 2.39 lakhs and even in centrally sponsored scheme regarding the Tungabhadra Project, there was Rs. 6.06 lakhs savings, and the savings, as has been pointed out in the Appropriation Account, amounts to 71 per cent of the original grant. That is how all these schemes are being implemented either by the Agriculture Department or the Forest Department.

Coming to the Demand No. 46-Capital Outlay on Irrigation, Navigation, etc., here, there are two points. In some cases, in respect of Minor Irrigation, the amounts allotted are not utilised. There are some such cases but in a large number of cases excess amount has been spent. I will again refer to page 124 of the Appropriation Accounts. The supplementary grant of Rs. 5.85 lakhs obtained in December 1962 with a view to providing funds mainly for 8 works under Minor Irrigation Programme, financed by the Government of India, was not utilised. So, an amount of nearly Rs 6 lakhs concerning 8 Minor Irrigation works was not at all utilised. Similarly, for the third year in succession, excess occurred under this grant, the excess of Rs. 12,80,857 requires to be regularised. The excess in the preceding two year is also indicated. I do not want to go into the figures in detail. Year after years there are excesses and this is most irregular. According to the Constitution Article 204 (3) the Government cannot spend in excess over the original grants. So, it is highly irregular. That also shows, as has already been pointed out,

lack of control over expenditure. Let us hope at least this year that all these provisions are adequate and the irregularity of spending in excess will not occur again in any Department.

Demand No. 48—Capital Outlay on Public Works—It is a small sum. This could have been easily anticipated and included in the Budget because sanction was accorded in 1963 November. Similarly, the same may be said with regard to Demand No. 54—Item No. 4

With these remarks, I close.

2-30 P.M.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರುವ ಸಪ್ಲಿಮೆಂಟರಿ ಎಸ್ಟಿಮೇಟುಗಳನ್ನು ನಾನು ವಿರೋಧ ಮಾಡುತ್ತ ಇದು ನಮ್ಮ ರಾಜ್ಯದ ದುರ್ದೈವ ಎಂದು ಹೇಳದೆ ವಿಧಿ ಇಲ್ಲ. ಮೂರು ತಿಂಗಳ ಒಳಗಾಗಿ ಇವರು ಮತ್ತೆ ನಮಗೆ ಹಣಬೇಕು ಎಂದು ಬಂದಿದ್ದಾರೆ. ಇವರಿಗೆ ಮಾರ್ಚಿ 31ನೇ ತಾರೀಖು ಕೊಟ್ಟಂಥ ಹಣ ಇಲಾಖಾ ಮುಖ್ಯಾಧಿಕಾರಿಗಳಿಗೆ ಅಲ್ಲಲ್ಲಿ ಕೆಲವು ಕಡೆ ಮುಟ್ಟಿಲ್ಲ. ಅದಕ್ಕೆ ಮುಂಚೆಯೇ ಮತ್ತಷ್ಟು ಹಣ ಬೇಕು ಎಂದು ಕೇಳುವುದರಲ್ಲಿ ಇವರ ಔಚಿತ್ಯವನ್ನು ನಾವೆಲ್ಲ ಅರಿತುಕೊಳ್ಳಬಹುದು. ಯಾವ ಸರ್ಕಾರ ಬೇಕಾದರೂ ದೇಶದ ಕಲ್ಯಾಣಕ್ಕೋಸ್ಕರ ಕೆಲಸ ಮಾಡುವಾಗ, ಹಣವನ್ನು ಖರ್ಚು ಮಾಡುವಾಗ ಬಜೆಟ್ಟಿನಲ್ಲಿ ಕೊಟ್ಟಿರುವ ಹಣ ಕಡಮೆ ಬಿದ್ದರೆ, ಬಜೆಟ್ಟಿನಲ್ಲಿ ಹಣವಿಲ್ಲದೆ ಇದರೆ ಅಡಿಷನಲ್ ಗ್ರಾಂಟ್ಸ್ ಮೂಲಕ ಹಣವನ್ನು ಪಡೆದು ಖರ್ಚು ಮಾಡುವುದು ನ್ಯಾಯ. ಮಾನ್ಯ ಹಣಕಾಸಿನ ಸಚಿವರು ಆಯವ್ಯಯ ಪಟ್ಟಿಯನ್ನು ನಮ್ಮ ಮುಂದೆ ಇಟ್ಟಾಗ ನಮ್ಮ ಹಣಕಾಸಿನ ಪರಿಸ್ಥಿತಿ ಏನಾಗಿದೆ ಎಂದು ಕೇಳಿದರೆ ಅವರು ಅದನ್ನು ಹೇಳುವ ಗೋಜಿಗೇ ಹೋಗಲಿಲ್ಲ. ರಿಸರ್ವ್ ಬ್ಯಾಂಕಿನಲ್ಲಿ ನಿಮ್ಮ ಲೆಕ್ಕದಲ್ಲಿ ಎಷ್ಟು ಹಣವಿದೆ ಎಂದರೆ ಅದಕ್ಕೆ ಉತ್ತರ ಕೊಡಲಿಲ್ಲ, ಎಷ್ಟು ದುಡ್ಡನ್ನು ಓವರ್‌ಡ್ರಾ ಮಾಡಿದ್ದೀರಿ ಎಂದು ಕೇಳಿದರೆ ಅದನ್ನೂ ಹೇಳಲಿಲ್ಲ, ಎಷ್ಟು ದುಡ್ಡನ್ನು ಬಡ್ಡಿಗೋಸ್ಕರ ಕೊಟ್ಟಿದ್ದೀರಿ ಎಂದರೆ ಅದಕ್ಕೂ ಉತ್ತರ ಕೊಡಲಿಲ್ಲ, ಎಷ್ಟೊಂದು ಸಾಲ ಮಾಡಿದ್ದೀರಿ, ಎಷ್ಟನ್ನು ಅವಕ್ಕೆ ಅಡ್ಜಸ್ಟ್ ಮಾಡಿದ್ದೀರಿ ಎಂದರೆ ಅದನ್ನೂ ಹೇಳಲಿಲ್ಲ. ಎಲ್ಲ ಪುಸ್ತಕದಲ್ಲಿ ಕೊಟ್ಟಿದ್ದೇವೆ, ಪ್ರಿಂಟ್ ಮಾಡಿ ಒದಗಿಸಿದ್ದೇವೆ ಎಂದು ಹೇಳಿದರು. ನಾನು ಕೇಳಿದ್ದನ್ನೆಲ್ಲ ಹೇಳಿದರೆ ಅದೆಲ್ಲ ಪ್ರೊಸೀಡಿಂಗ್ಸ್‌ನಲ್ಲಿ ಹೋಗುತ್ತದೆ, ದೇಶದ ಜನಕ್ಕೆ ಗೊತ್ತಾಗುತ್ತದೆ ಎಂದು ಮೊಗಂ ಆಗಿ ಎಲ್ಲವನ್ನೂ ಪ್ರಿಂಟ್ ಮಾಡಿಕೊಟ್ಟಿದ್ದೇವೆ, ಅದನ್ನೆಲ್ಲ ಹೇಳಬೇಕಾಗಿಲ್ಲ ಎಂದು ಮಕಮಲ್ ಟೋಪಿ ಮುಚ್ಚಿದರು. ಎಲ್ಲಿಯವರೆಗೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಭದ್ರವಾಗಿರುವುದಿಲ್ಲವೋ ಅಲ್ಲಿಯವರೆಗೂ ಈ ದೇಶದ ಜನ ಮತ್ತು ಕೇಂದ್ರ ಸರ್ಕಾರದವರು ನಿಮ್ಮನ್ನು ಬಹಳ ನಿಕೃಷ್ಟ ಭಾವನೆಯಿಂದ ನೋಡುತ್ತಾರೆ. ಕೇಂದ್ರ ಸರ್ಕಾರದವರು ತಮಗೆ ಪ್ಲಾನ್‌ನಲ್ಲಿ 40 ಕೋಟಿ ರೂಪಾಯಿ ಕೊಡಬೇಕು ಎಂದು ಇದ್ದರೂ ಪೂರ್ತಿ ಹಣ ಖರ್ಚಾಗದೆ ಇರುವ ಸಂಭವವಿದೆ ಎಂದು ಅದರಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಖೋತಾ ಮಾಡಿ 30 ಕೋಟಿ ರೂಪಾಯಿ ಖರ್ಚು ಮಾಡಿ ಎಂದು ಹೇಳಿದಾರೆ. ಮ್ಯಾಚಿಂಗ್ ಗ್ರಾಂಟ್ಸ್ ಒದಗಿಸುವುದಕ್ಕೆ ಆಗುವುದಿಲ್ಲ, ಹಣವನ್ನು ಒದಗಿಸುವದಕ್ಕೆ ಶಕ್ತಿ ಇಲ್ಲ ಎಂದು ಹಾಗೆ ಮಾಡಿದ್ದಾರೆ. ಅದೇ ಆಂಧ್ರ ಸರ್ಕಾರಕ್ಕೆ 70 ಕೋಟಿ ರೂಪಾಯಿಗಳನ್ನು ಮೂರನೆಯ ಯೋಜನೆಯಲ್ಲಿ ಕೊಟ್ಟಿದ್ದರು. ಆ ಹಣವೆಲ್ಲ ಖರ್ಚಾಗಿರುವುದೇ ಅಲ್ಲದೆ ಪ್ಲಾನ್‌ಗೆ ಸೇರದ ಹಣವನ್ನು 15 ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ಇದರ ಅರ್ಥವೇನು ? ನಿಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ, ನಿಮ್ಮ ಹತ್ತಿರ ಹಣವಿಲ್ಲ, ನಿಮ್ಮ ಹತ್ತಿರ ಇರುವಷ್ಟು ಕೊಡುತ್ತೇವೆ, ನಿಮ್ಮ ಹತ್ತಿರ ನಾಲ್ಕು ರೂಪಾಯಿ ಇದ್ದರೆ ನಾವೂ ನಾಲ್ಕು ರೂಪಾಯಿ ಕೊಡುತ್ತೇವೆ, ಎಂಟಾಣೆ ಇದ್ದರೆ ಎಂಟಾಣೆ ಕೊಡುತ್ತೇವೆ, ಎಂದು ಹೇಳಿದ್ದಾರೆ. ನಾನು ಇದನ್ನೆಲ್ಲ ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಹಣಕಾಸಿನ ಬರೀ ಚೀಲವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಡಿ, ಹಣದ ಚೀಲವನ್ನು ಭದ್ರವಾಗಿ ಹಿಡಿಯಿರಿ ಎಂದು ಹಣಕಾಸಿನ ಸಚಿವರಿಗೆ ಹೇಳುತ್ತಿದ್ದೇನೆ. ಒಂದು ಸಾರಿ ಮುಖ್ಯ ಮಂತ್ರಿಗಳು ಇವರನ್ನು ಟೀಕೆ ಮಾಡುತ್ತ ಏನು ಹೇಳಿದ್ದಾರೆಂದರೆ ನನ್ನ ಮಂತ್ರಿ ಮಂಡಲದಲ್ಲಿರುವ ಹಣಕಾಸಿನ ಸಚಿವರು ಬಹಳ ಜಿಗುಟು, ಬಹಳ ಕಪಿಮುಷ್ಟಿ ಎಂದು ಹೇಳಿದ್ದಾರೆ. ನೀವು ಕಪಿಮುಷ್ಟಿಯವರಾದರೆ ನೀವು ನಮ್ಮ ಮುಂದೆ ಇಟ್ಟಿರುವ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ಗೆ ಅದು ವಿರೋಧವಾಗುತ್ತದೆ.

ಶ್ರೀ ಸುಂತಣಕರ್ ಅವರು ಮಾತನಾಡುತ್ತ ಹೇಳಿದರು : ವ್ಯವಸಾಯ ಇಲಾಖೆಯಲ್ಲಿ ಎಷ್ಟು ಹಣ ಖರ್ಚಾಗಬೇಕಾಗಿತ್ತೋ ಅಷ್ಟು ಖರ್ಚಾಗದೆ, ಎಷ್ಟು ಆ ಇಲಾಖೆಯಿಂದ ಅಭಿವೃದ್ಧಿಯಾಗ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಬೇಕಾಗಿತ್ತೋ ಅಷ್ಟು, ಆಗದೆ ಇದೆ ಎಂದು ಹೇಳಿದರು. ಹೀಗಾದರೆ ಆಹಾರದ ಕೊರತೆ ಹೇಗೆ ನೀಗುತ್ತದೆ? ವ್ಯವಸಾಯದ ಅಭಿವೃದ್ಧಿಯನ್ನು ಮಾಡಿ ಆಹಾರದ ಕೊರತೆಯನ್ನು ನೀಗುವ ಪ್ರಯತ್ನಗಳನ್ನು ಮಾಡದೆ ಇನ್ನಷ್ಟು ದುಡ್ಡು ಕೊಡಿ ಎಂದು ಈಗ ಬಂದಿದ್ದಾರೆ. ಇವತ್ತು ರಾಜ್ಯದಲ್ಲಿ ವ್ಯವಸಾಯ ಖಾತೆ ಇದೆ. ವ್ಯವಸಾಯ ಖಾತೆಯ ಡೈರೆಕ್ಟರಿದ್ದಾರೆ, ಸೆಕ್ರೆಟರಿ ಇದ್ದಾರೆ, ಮಂತ್ರಿಗಳೂ ಇದ್ದಾರೆ. ಅವರು ಹಣಕಾಸು ಹೇಗೆ ಖರ್ಚಾಗುತ್ತದೆ, ಎಷ್ಟರ ಮಟ್ಟಿಗೆ ಕಾರ್ಯ ನಡೆಯುತ್ತದೆ ಎಂದು ಏನಾದರೂ ನೋಡಿದ್ದಾರೆಯೇ? ವ್ಯವಸಾಯದ ಸಂಬಂಧದಲ್ಲಿ ಪ್ಲಾನಿಂಗ್ ಕಮಿಷನ್‌ನವರು ಒಂದು ಮಾತನ್ನು ಹೇಳಿದ್ದಾರೆ. ಆಯಾ ರಾಜ್ಯದ ಮುಖ್ಯ ಮಂತ್ರಿಗಳು ವ್ಯವಸಾಯ ಖಾತೆಯನ್ನು ವಹಿಸಿಕೊಳ್ಳಬೇಕು ಎಂದು. ಆಹಾರೋತ್ಪಾದನೆ ಮಾಡುವ ಈ ಖಾತೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಇಟ್ಟುಕೊಳ್ಳಬೇಕೆಂದು ಅವರು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಮುಖ್ಯ ಮಂತ್ರಿಗಳಿಗೆ ಅವರು ಮುಖ್ಯ ಮಂತ್ರಿಗಳಾದಾಗಿನಿಂದ ಹೇಳುತ್ತಿದ್ದೇವೆ ಈ ವ್ಯವಸಾಯ ಖಾತೆಯನ್ನು ತಮ್ಮ ಹತ್ತಿರ ಇಟ್ಟುಕೊಳ್ಳಿ ಎಂದು. ಇವತ್ತಿನ ದಿವಸ ಆಹಾರ ಪದಾರ್ಥಗಳ ಬೆಲೆ ಹೆಚ್ಚಿ, ಆಹಾರಾಭಾವದ ಕೂಗು, ಅನ್ನವಿಲ್ಲ ಎನ್ನತಕ್ಕ ಆರ್ಭಟ ಇವೆಲ್ಲ ಏನಾಗಿದೆ ಎಂದರೆ ಈ ರಾಜ್ಯದಲ್ಲಿ ಅನ್ನಕ್ಕೆ ಕೊರತೆ ಇರುವಾಗ, ಆಹಾರವನ್ನು ಬೆಳೆಯುವುದರಲ್ಲಿ ಕುಂಠಿತವಾಗಿರುವುದರಿಂದ ಅನ್ನ ಬೇಕು, ಗೋದಿ ಬೇಕು ಎಂದು ಕೇಳುತ್ತಿದ್ದೇವೆ. ನಿನ್ನೆ ಕೇಂದ್ರದ ಆಹಾರ ಸಚಿವರು ರಾಜ್ಯದಲ್ಲಿರುವ ಆಹಾರದ ಕೊರತೆಯನ್ನು ನಾನು ಮನಗಂಡಿದ್ದೇನೆಂದು ಹೇಳಿದರು. ದಿನೇ ದಿನೇ ಕೆರೆ ಅಂಗಳ, ಕಾಡು, ಗುಡ್ಡ ಎಲ್ಲವನ್ನೂ ವ್ಯವಸಾಯಕ್ಕೆ ಕೊಟ್ಟು ದೇಶಕ್ಕೆ ಬೇಕಾದಷ್ಟು ಆಹಾರ ಬೆಳೆಯುವುದಕ್ಕೆ ಯೋಗ್ಯತೆ ಇಲ್ಲದೆ ಹೋದರೆ ಆ ಇಲಾಖೆಯನ್ನು ಓರಿಯೆಂಟ್ ಮಾಡದೆ ಹೋದರೆ, ರೀ—ಆರ್ಗನೈಜ್ ಮಾಡದೆ ಹೋದರೆ, ವಿಪ್ ಮಾಡದೆ ಹೋದರೆ ಇದು ಒಂದು ಸರ್ಕಾರ ಎಂದು ಕರೆಯುವುದಕ್ಕೇ ನಾಚಿಕೆಯಾಗುತ್ತದೆ. ಒಬ್ಬರು ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಇದ್ದರೂ ಕೂಡ ದತ್ತೂರಿ ಗಿಡ ಕಣಗಲ್ ಗಿಡ ಹೂವಿನ ತೋಟ ಬೆಳೆಸುವುದಕ್ಕೆ ಒಬ್ಬ ಡೈರೆಕ್ಟರನ್ನು ನೇಮಿಸಿದ್ದೀರಿ. ಇದು ನಾಚಿಕೆಗೇಡು. ಹೆಚ್ಚಿಗೆ ಆಹಾರವಿಲ್ಲ, ಎಷ್ಟು ಆಹಾರವನ್ನು ಬೆಳೆದಿದ್ದೀರಿ ಎಂದರೆ ಎಷ್ಟು ಬೀಜವನ್ನು ಹಂಚಿದ್ದೀರಿ ಎಂದರೆ ಸರ್ಕಾರ ಮೂಕ ಪ್ರಾಣಿಯ ಹಾಗೆ ಕುಳಿತುಕೊಂಡರೆ ತಾವಾದರೂ ಯೋಚನೆ ಮಾಡಬೇಕು, ಸರ್ಕಾರದ ಕೈಯಲ್ಲಿ ಇಷ್ಟೆಲ್ಲ ಹಣ ಕೊಟ್ಟರೆ ಅವರು ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡುತ್ತಾರೆಯೇ ಎಂದು.

ಕೂಳು ಕುತ್ತವೆ ಕುತ್ತ । ಕೂಳು ಮೇಳವೆ ಮೇಳ ।
ಕೂಳೊಂದು ಗಳಿಗೆ ತಡೆದಿಹರೆ ಪಾತರದ ।
ಮೇಳ ಮುರಿದಂತೆ ಸರ್ವಜ್ಞ

ಎಂದು ಸರ್ವಜ್ಞ ಕವಿ ಹೇಳಿದ್ದಾನೆ. ಇವತ್ತು ಅನ್ನ, ಅನ್ನ ಎಂದು ದೇಶದಲ್ಲಿ ಎಲ್ಲ ಕಡೆಯೂ ಅನ್ನ ಕ್ಷಾಮ, ಅನ್ನದ ಮಾರಿ ತಾಂಡವವಾಡುತ್ತಿದೆ; ಸರ್ಕಾರದವರು ನಾಲ್ಕೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡದೆ, ಕೆಲವು ಅಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಐದಾರು ವರ್ಷ ತಳ್ಳಿರುವ ಇವರ ಕೈಯಲ್ಲಿ ಏನು ಮಾಡುವುದಕ್ಕೆ ಸಾಧ್ಯವೆಂದು ಕೇಳುತ್ತೇನೆ.

ಶ್ರೀ ಗಾಂಜಿ ವೀರಪ್ಪನವರು ಹೇಳಿದರು ದಾವಣಗೆರೆಯಲ್ಲಿ ಜೋಳ ಇಲ್ಲ, ನವಣೆ ಇಲ್ಲ, ಬಾಜ್ರ ಇಲ್ಲ ಎಂದು. ಅವರು ಸರ್ಕಾರದಲ್ಲಿ ಹೋಗಿ ಕಿವಿ ಮಾತಿನಲ್ಲಿ ಏಕೆ ಹೇಳಬಾರದು ಜನ ಏನು ಹೇಳುತ್ತಾರೆ ಗೊತ್ತಿದೆಯೇ ಎಂದು.

ಸ್ವಾಮಿ, ನಾವು ಈ ಸಭೆಯಲ್ಲಿ ಹೇಳುವುದನ್ನು ಸರ್ಕಾರ ಎಷ್ಟು ಲಘುವಾಗಿ ಕಂಡುಕೊಂಡಿದೆ, ಎಷ್ಟು ಮಟ್ಟಿಗೆ ಕಂಡುಕೊಂಡಿದೆ ಎಂಬುದನ್ನು ನೋಡಬಹುದು. ದೇಶದಲ್ಲಿ ಬಂದಿರತಕ್ಕ ದುರ್ಗತಿಯನ್ನು ನಾವು ನೋಡುತ್ತಿದ್ದೇವೆ. ಮೊನ್ನೆ ತಾನೆ ಮುಖ್ಯ ಮಂತ್ರಿಗಳೂ ಮತ್ತು ರೆವಿನ್ಯೂ ಮಂತ್ರಿಗಳೂ ಮುಳಬಾಗಿಲಿಗೆ ಹೋಗಿದ್ದು ಕಲ್ಲಿನ ಏಟು ತಿಂದು ಬಂದಿದ್ದಾರೆ. ಅಲ್ಲಿ ಗುಂಡು ಹಾರಿಸಿದರು, ಲಾಠಿ ಚಾರ್ಜ್ ಮಾಡಿಸಿದರು. ಇವರೆಲ್ಲ ಟೋಪಿಗಳನ್ನು ತೆಗೆದು ಶ್ರೀ ರಾಮಕೃಷ್ಣ ಹೆಗ್ಗಡೆಯವರು ಇಟ್ಟುಕೊಂಡು ಬಂದಿದ್ದರಲ್ಲ ಬಕ್ಷಿ ಗುಲಾಂ ಮಹಮ್ಮದ್ ಟೋಪಿ ಅಂಥ ಟೋಪಿಯನ್ನು ಇಟ್ಟುಕೊಂಡು ತಿರುಗಾಡಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನೀವು ಅರ್ಥ ಮಾಡಿಕೊಳ್ಳಬೇಕು. ಇಂಗ್ಲೀಷಿನವರು ನಮ್ಮ ದೇಶವನ್ನು ಆಳುತ್ತಿದ್ದ ಕಾಲದಲ್ಲಿ ಜನರು ಕ್ಷಾಮ ಡಾಮರ ಬಂದಾಗ ಹೆದರಲಿಲ್ಲ, ಅವರ ಬಂದೂಕಿಗೆ ಹೆದರಲಿಲ್ಲ ಲಾಠಿ ಚಾರ್ಜಿಗೆ ಹೆದರಲಿಲ್ಲ ಅಂಥವರು ಇವತ್ತಿನ ದಿವಸ ನಿಮಗೆ ಹೆದರುತ್ತಾರೆಂದು ತಿಳಿದುಕೊಂಡಿದ್ದೀರಾ? ಸುಮ್ಮನೆ ಲಘುವಾಗಿ ಕಾಣುತ್ತೀರಿ. ಏಕೆ ಹೇಳುತ್ತಿದ್ದೇನೆಂದರೆ ಇಷ್ಟು ಎಕರೆ ಭೂಮಿ 1-11-1956 ರಿಂದ ಸಾಗುವಳಿಗೆ ಬಂದಿದೆ, ಇಷ್ಟು

ಲಕ್ಷ ಟನ್ ಆಹಾರಧಾನ್ಯವನ್ನು ಬೆಳೆದಿದ್ದಾರೆ ಎಂದು ಸುಳ್ಳು ಅಂಕಿ ಅಂಶಗಳನ್ನು ಕೊಟ್ಟು ಲಗಾಡ ಶೆಟ್ಟಿ ಲೆಕ್ಕವನ್ನು ಇಟ್ಟುಕೊಂಡಿದ್ದೀರಿ. ಇದು ನ್ಯಾಯವಲ್ಲ.

ಸ್ವಾಮಿ ಕೊಡಗಿನಿಂದ ನನಗೆ ಒಂದು ಕಾಗದ ಬಂದಿದೆ, ಕೂರ್ಗ್ ವೋಟರ್ಸ್ ಅಸೋಸಿಯೇಷನ್, ಮರ್ಕೆರದಿಂದ ಕಾಗದ ಬಂದಿದೆ. ಒಂದು 'ಶಕ್ತಿ' ಎನ್ನುವ ಪತ್ರಿಕೆ, ಮುಕ್ಕಣ್ಣಪ್ಪ ಒಬ್ಬರು ಈ ರಾಜ್ಯ ಎರಡಾಗಬೇಕೆಂದು ಹೇಳುತ್ತಾರೆ. ಮುಕ್ಕಣ್ಣಪ್ಪನದು ಒಂದೇ ಕೂಗು ಇದೆ ಎಂದು ಹೇಳಿದರು. ಕೊಡಗಿನಿಂದ ನನಗೆ ಬಂದಿರುವ ಕಾಗದದಲ್ಲಿ ಏನು ಹೇಳಿದ್ದಾರೆಂದರೆ ಮೈಸೂರಿನಿಂದ ಬೇರ್ಪಡದೆ ಕೊಡಗಿಗೆ ಭವಿಷ್ಯ ಇಲ್ಲ. ಕೊಡಗಿನ ಜನ ನೀವು ಮಾಡತಕ್ಕ ದುರಾಡಳಿತದಿಂದ ಬೇಸತ್ತಿದ್ದಾರೆ, ನೀವು ಮಾಡತಕ್ಕ ಆಡಳಿತದಿಂದ ಬೇಸತ್ತಿದ್ದಾರೆ, ನಿಮ್ಮ ಹಣಕಾಸಿನ ಪರಿಸ್ಥಿತಿಯಿಂದ ಬೇಸತ್ತಿದ್ದಾರೆ ನಿಮ್ಮ ನಡವಳಿಕೆಯನ್ನು ಕಂಡು ಬೇಸತ್ತಿದ್ದಾರೆ- ಅವರು ಇನ್ನೂ ಮುಂದೆ ಹೋಗಿ ಹೇಳುತ್ತಾರೆ ಅವರ ಸೊಪ್ಪು ತಿಂದು ಮರಣ ಎಂದು. ಈ ರಾಜ್ಯದಲ್ಲಿ ಸಾಕಷ್ಟು ಅನ್ನವಿಲ್ಲ, ದನಕರುಗಳಿಗೆ ಹುಲ್ಲು, ಕುಡಿಯುವುದಕ್ಕೆ ನೀರು ಇಲ್ಲ. ವಾಸಕ್ಕೆ ಮನೆ ಇಲ್ಲ. ಇವಿಷ್ಟನ್ನೂ ಮಾಡದೆ ಇರತಕ್ಕ ಸರ್ಕಾರ ಕೋಟಿಗಟ್ಟಲೆ ಹಣಕ್ಕೆ, ಲಗಾಡಿ ಶೆಟ್ಟಿ ಲೆಕ್ಕವನ್ನು ಇಟ್ಟಿದೆ. ಆದರೆ ಖಜಾನೆಯಲ್ಲಿ ಏನೂ ಇಲ್ಲ. ಇದು "Gentleman in the rank but nothing in the Bank" ಎಂದು ಹೇಳುವಂತಾಗಿದೆ. ದೇಶದಲ್ಲಿ ಜನರಿಗೆ ಆಹಾರವಿಲ್ಲ, ದನಗಳಿಗೆ ತಿನ್ನಲು ಹುಲ್ಲಿಲ್ಲ, ಆದರೂಕೂಡ ಆಗ್ರಿಕಲ್ಚರ್ ಬ್ಯಾಂಕಿಗೆ ಇಷ್ಟು ಕೊಡಬೇಕೆಂದರೆ ಹೇಗೆ ? ಮಹಾರಾಜರು ಇಲ್ಲಿರುವಾಗ ಅವರು ಇಲ್ಲೇ ಇದ್ದರೆ ಆಕಾಶ ಕಳಚಿ ಕೆಳಗೆ ಬೀಳುತ್ತದೆ ಎಂದು ಹೇಳಿದರು. ಹೊಸ ಗವರ್ನರ್ ಬಂದರು. ನಮ್ಮ ರಾಜ್ಯಾಂಗದಲ್ಲಿ ಒಂದು ರಾಜ್ಯಕ್ಕೆ ಒಬ್ಬ ಗವರ್ನರ್ ಇರಬೇಕು, ರಾಷ್ಟ್ರಕ್ಕೆ ಒಬ್ಬರು ರಾಷ್ಟ್ರಪತಿ ಇರಬೇಕೆಂದಿದೆ. ಕೇಂದ್ರ ಸರ್ಕಾರ ಇರಬೇಕು, ರಾಜ್ಯ ಸರಕಾರಗಳಿರಬೇಕು ಎಂದು ಹೇಳಿದೆ. ಒಂದು ವಿಧಾನಸಭೆ ಇರಬೇಕು, ಇದ್ದರೆ ಒಂದು ವಿಧಾನ ಪರಿಷತ್ತಿರಬೇಕು ; ವಿಧಾನ ಪರಿಷತ್ತು ಬೇಡವೆಂದು ತೀರ್ಮಾನ ವಾದರೆ ಅದನ್ನು ವಜಾ ಮಾಡಬೇಕೆಂದಿದೆ. ಸಂವಿಧಾನದ ಪ್ರಕಾರ ನಮ್ಮ ರಾಜ್ಯಕ್ಕೆ ಒಬ್ಬರು ಗವರ್ನರ್ ಬೇಕು, ಬಂದರು. ಎಲ್ಲರೂ ಸರಳ ಜೀವನವನ್ನು ನಡೆಸಬೇಕೆಂದು ಹೇಳುವಾಗ ರಾಜ್ಯ ಪಾಲರಿಗಾಗಿ 60 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ದೇಶದಲ್ಲಿ ಜನರಿಗೆ ತಿನ್ನಲು ಅನ್ನವಿಲ್ಲ ವೆಂದು ಹೇಳುತ್ತಿರುವಾಗ ನಮ್ಮ ಜತ್ತಿ ಸಾಹೇಬರು ರಾಜ್ಯಪಾಲರಿಗೆ 50 ಸಾವಿರ ರೂಪಾಯಿ ವೆಚ್ಚ ದಲ್ಲಿ ನೀರು ಕುಡಿಸಲಿಕ್ಕೆ ಹೊರಟಿದ್ದಾರೆ. ಎಷ್ಟು ಜನಗಳು ನೀರನ್ನು ಕುಡಿಯುತ್ತಾರೆ ? ಎಷ್ಟು ಜನರು ಸ್ನಾನಮಾಡುತ್ತಾರೆ ? ನೋಡುವುದಕ್ಕೆ ಇವರು ಸಾಧು ಸನ್ಯಾಸಿಗಳ ಹಾಗೆ ಹರಕಲು ಬಟ್ಟೆ ಯನ್ನು ಹಾಕಿಕೊಂಡು ಬರುತ್ತಾರೆ. ಇಷ್ಟು ನೀರೇಕೆ ? ಭಗೀರಥ ಪ್ರಯತ್ನದಿಂದ ಬೆಂಗಳೂರಿಗೆ ನೀರನ್ನು ತಂದಿದ್ದೇವೆಂದು ಹೇಳಿದರು. ಹಾಗೆಯೇ ಭಗೀರಥ ಪ್ರಯತ್ನ ಮಾಡಿ ರಾಜ್ಯಪಾಲರಿಗೆ ಈ ನೀರನ್ನು ಕುಡಿಸುತ್ತಿದ್ದೀರಾ ? 50 ಸಾವಿರ ರೂಪಾಯಿ ಖರ್ಚಿನಿಂದ ಈ ನೀರನ್ನು ಗಂಗೆಯಿಂದ ತರು ತ್ತಾರೆಯೇ, ಗೋದಾವರಿಯಿಂದ ತರುತ್ತಾರೆಯೇ, ಯಮುನಾನದಿಯಿಂದ ತರುತ್ತಾರೆಯೇ, ಎಲ್ಲಿಂದ ತರುತ್ತಾರೆ ? ಅವರು ಕುಡಿಯುವ ನೀರಿಗೆ ಒಂದು ಲೀಟರ್‌ಗೆ ಬೆಲೆ ಎಷ್ಟು? ಅಲ್ಲಿ ಒಟ್ಟು ಎಷ್ಟು ಜನ ರಿದ್ದಾರೆ, ಎಷ್ಟು ಹೆಣ್ಣು ಮಕ್ಕಳಿದ್ದಾರೆ, ಎಷ್ಟು ಜನ ಸೇವಕರಿದ್ದಾರೆ. ಬಟ್ಟೆ ಬರೆಗಳನ್ನು ಒಗೆಯು ವುದಕ್ಕೆಷ್ಟು ಬೇಕು ದೇವರ ತಲೆಯಮೇಲೆ ಎಷ್ಟು ನೀರನ್ನು ಹುಯ್ಯುತ್ತಾರೆ, ಇದನ್ನೆಲ್ಲಾ ಅಂದಾಜು ಮಾಡುವವರು ಯಾರು, 50 ಸಾವಿರ ರೂಪಾಯಿ ಹೇಗೆ ಖರ್ಚಾಗುತ್ತದೆ ಎನ್ನುವ ಬಗ್ಗೆ ವಿವರಗಳನ್ನು ಮಂತ್ರಿಗಳು ಕೊಡಬಲ್ಲರೆ ?

ಶ್ರೀ ಬಿ. ಡಿ. ಜತ್ತಿ.—ಎಲ್ಲ ವಿವರಗಳನ್ನು ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.-ಇಂಪ್ರೂವ್‌ಮೆಂಟ್‌ಗೆ 50 ಸಾವಿರ ರೂಪಾಯಿ ಕೇಳಿದ್ದಾರೆ, ಏನನ್ನು ಅಭಿವೃದ್ಧಿ ಮಾಡುತ್ತಾರೆ ? ಅವರ ಆರೋಗ್ಯವನ್ನು ಅಭಿವೃದ್ಧಿ ಮಾಡುತ್ತಾರೆಯೇ, ಅವರು ವಾಸ ಮಾಡುವ ಮನೆಯನ್ನು ಅಭಿವೃದ್ಧಿ ಮಾಡುತ್ತಾರೆಯೇ, ಈ 50 ಸಾವಿರ ರೂಪಾಯಿ ಅಭಿವೃದ್ಧಿಗಾಗಿ ಎಂದರೆ ಯಾವ ಅಭಿವೃದ್ಧಿಗಾಗಿ ? ರಾಜಭವನವನ್ನು ಕಟ್ಟುವುದು ಹೋಗಿ, ಅಭಿವೃದ್ಧಿಗೆ 50 ಸಾವಿರ, ತೋಟಕ್ಕೆ 50 ಸಾವಿರ, ನೀರಿಗೆ 50 ಸಾವಿರ, ರಿಪೇರಿಗೆ 50 ಸಾವಿರ ಹೀಗೆ ಖರ್ಚು ಮಾಡುತ್ತಿದ್ದಾರೆ. ದೇಶದಲ್ಲಿ ವಾಸಮಾಡಲು ಜನರಿಗೆ ಮನೆಗಳಿಲ್ಲ, ರಾಜ್ಯಪಾಲರು ವಾಸಮಾಡುವ ಬಂಗಲೇಗೆ ಒಂದೂ ವರೆ ಎರಡು ಲಕ್ಷ ರೂಪಾಯಿ ಖರ್ಚು ಮಾಡಿ ಹೂವಿನ ತೋಟ, ಅದರಲ್ಲಿ ಡೇಕ್ವೀನ್, ನೈಟ್‌ಕ್ವೀನ್ ಗುಲಾಬಿ ಇವುಗಳನ್ನೆಲ್ಲಾ ಬೆಳೆಸುವುದೆ ? ಪ್ರೈಮ್ ಮಿನಿಸ್ಟರವರ ಮನೆಗೆ ರೈತರನ್ನು ಕರೆದುಕೊಂಡು ಹೋಗಿದ್ದೆ, ಅವರ ಒಳಗೃಹವನ್ನು ಅಡಿಗೆ ಮನೆ ಮುಂತಾದ ಎಲ್ಲವನ್ನು ನೋಡಿ ಕೊಂಡು ಬಂದೆವು ಎಂದು ನನ್ನ ಸ್ನೇಹಿತರಾದ ಶ್ರೀ ಕಾಶೀಮಠ ಅವರು ಹೇಳಿದರು. ಈ ಹೊತ್ತು ಅಧಿಕಾರದಲ್ಲಿರುವವರು ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ತಾವು ಈ ಪದವಿಯನ್ನು ಬಿಟ್ಟು ಹೋದ ಮೇಲೆ ಹೇಗಿರುತ್ತೇವೆ ಎನ್ನುವುದನ್ನು ಯೋಚಿಸಬೇಕು. ಒಂದು ದೇಶದ ರಾಜ್ಯಪಾಲರಿಗೆ ಒಂದು ಸ್ನಾನ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾನ ಮತ್ತು ಗೌರವ ಇರಬೇಕು ಎನ್ನುವುದನ್ನು ಒಪ್ಪುತ್ತೇವೆ. ಸರಳ ಜೀವನವನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಉಪದೇಶ ಮಾಡುತ್ತಾರೆ. ಇದರ ಹೇಳುವುದೊಂದು, ಮಾಡುವುದೊಂದು. ಮಾಡುವುದೆಲ್ಲ ಅನಾಚಾರ ಮನೆ ಮುಂದೆ ವೃಂದಾವನ ಎನ್ನುವಹಾಗೆ ಮಾಡುತ್ತಾರೆ. ಇಂಪ್ರೂವ್‌ಮೆಂಟ್ ಎಂದರೇನು, ರಿಪೇರ್ಸ್ ಎಂದರೇನು? ಗಾಜು ಒಡೆದು ಹೋಗಿವೆಯೆ, ಗೋಡೆಗಳು ಬಿದ್ದು ಹೋಗಿವೆಯೆ, ಲೆಟ್ರೀನುಗಳಿಲ್ಲವೆ? ಏನು ರಿಪೇರಿ ಎಲ್ಲಿ ರಿಪೇರಿ ಎಂಬುದೇನೂ ಗೊತ್ತಾಗುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿ ಮೀಟಿಂಗುಗಳಿಗೆ ಹೋಗಿ ಅಲ್ಲೆಲ್ಲ ಗಬ್ಬೆಬ್ಬಿಸಿವರು, ಅದೆಲ್ಲವನ್ನೂ ಸರಿಮಾಡುವುದಕ್ಕೆ ಒಂದು ಲಕ್ಷ ರೂಪಾಯಿ ಬೇಕೆಂದು ಕಾಣುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮುಖ್ಯ ಮಂತ್ರಿಗಳು ಬಾಲಬ್ರೂಯಿಗೆ ಬರುತ್ತಾರೆಂದು ವರ್ತಮಾನವಿದೆ. ಕುಮಾರಕೃಪಾದಲ್ಲಿ ಸರ್ ಶೇಷಾದ್ರಿ ಐಯ್ಯರ್, ರವೀಂದ್ರನಾಥಠಾಗೂರರು, ಟಂಡನ್, ಮಹಾತ್ಮಗಾಂಧಿ ಮುಂತಾದ ದೊಡ್ಡ ದೊಡ್ಡ ದೇಶ ಭಕ್ತರು ವಾಸ ಮಾಡುತ್ತಿದ್ದರು. ಕುಮಾರಕೃಪಾಕ್ಕಿಂತ ಸುಂದರವಾದ ಮತ್ತು ಗೌರವ ತರತಕ್ಕ ಕಟ್ಟಡ ಈ ಊರಿನಲ್ಲಿ ಮತ್ತಾವುದೂ ಇಲ್ಲ. ಹೀಗಿರುವಾಗ ಇದನ್ನು ರಿಪೇರಿ ಮಾಡುವುದೇನು, ಅಭಿವೃದ್ಧಿ ಮಾಡುವುದೇನು? ಅಲ್ಲಿರುವ ತೋಟಕ್ಕೆ 50 ಸಾವಿರ ರೂಪಾಯಿ ಖರ್ಚು ಮಾಡುತ್ತಾರೆಯೋ? ಹಾಗಿದ್ದರೆ ತೋಟಗಳ ಇಲಾಖೆಗೆ ಕೊಟ್ಟಿರುವ ಹಣವನ್ನೇನು ಮಾಡುತ್ತಾರೆ? ಈ ಹಣವೂ ಅದರ ಜೊತೆಗೆ ಸೇರುತ್ತದೆಯೋ? ಇಷ್ಟು ಹಣ ಏಕೆ ಖರ್ಚು? ರಾಜ್ಯಪಾಲರ ಕಾರುಗಳಿಗೆ ಒಂದು ಲಕ್ಷ ರೂಪಾಯಿ ಕೇಳಿದ್ದಾರೆ, ರಾಜ್ಯದಲ್ಲಿ ಗೂಟ ಹಾಕಿರುವ ಕಾರುಗಳು ಇಷ್ಟೊಂದೇಕೆ ಎಂದು ಕೇಳಿದ್ದುದಕ್ಕೆ ಸಣ್ಣ ಸಣ್ಣ ಕಾರುಗಳನ್ನು ಉಪಯೋಗ ಮಾಡುತ್ತಿದ್ದೇವೆಂದು ಹೇಳಿದರು. ಹೀಗಿರುವಾಗ ಹೊಸ ಕಾರನ್ನೇಕೆ ಕೊಳ್ಳಬೇಕು? ಇರುವ ಕಾರುಗಳಿಗೆ ಮುಕಮಲ್ ಟೋಪಿಗಳನ್ನು ಹಾಕಿದರೆ ಸಾಲದೆ? ರಾಜ್ಯಪಾಲರಿಗೆ ಸ್ಟೇಷನ್ ವ್ಯಾಗನ್ ಏಕೆ? ಒಂದು ಕಾಸು ಕೂಡ ನನಗೆ ಬೇಡಿ, ಹಾಗೆಯೇ ಕೆಲಸ ಮಾಡುತ್ತೇನೆ ಎಂದು ಹೇಳಿದವರನ್ನು ರಾಜ್ಯದಿಂದ ಕಳುಹಿಸಿಬಿಟ್ಟರು. ಅವರ ಜಾಗದಲ್ಲಿ ಇನ್ನೊಬ್ಬರನ್ನು ಕರೆದುಕೊಂಡು ಬಂದು ಅದಕ್ಕೆ ಒಂದು ಲಕ್ಷ, ಇದಕ್ಕೆ ಒಂದು ಲಕ್ಷ ಎಂದು ನಿರ್ಲಕ್ಷ್ಯವಾಗಿ ಖರ್ಚು ಮಾಡುತ್ತಿದ್ದಾರೆ. ಹೀಗಾದರೆ ಬಡಬೋರೆ ಗೌಡ ಹೊಟ್ಟೆಗಿಲ್ಲದೆ ಚಳುವಳಿ ಹೂಡುವುದಿಲ್ಲವೆ? ಧಾಂದಲೇ ಮಾಡುವುದಿಲ್ಲವೆ? ಇದನ್ನು ಸರ್ಕಾರ ಯೋಚನೆ ಮಾಡಿದ್ದಾರೆಯೋ? ರಾಜ್ಯಪಾಲರ ಮಿಲಿಟರಿ ಕಾರ್ಯದರ್ಶಿ ಮತ್ತು ಸಿಬ್ಬಂದಿಗೆ ಸಂಬಳ ಭತ್ಯ ಇತ್ಯಾದಿಗಳಿಗಾಗಿ 33,000 ರೂಪಾಯಿ ಕೇಳಿದ್ದಾರೆ. ಹಿಂದೆ ಮಹಾರಾಜರು ಗವರ್ನರ್ ಆಗಿದ್ದಾಗ ಅವರಿಗೆ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ದರ್ಜೆಯವರೊಬ್ಬರನ್ನು ಕೊಡುತ್ತಿದ್ದರು ಆದರೆ ಇವರು ಹೈದರಬಾದಿನಿಂದ ಬಂದಿದ್ದಾರಂತೆ. ಇವರಿಗೆ ಧೋಬಿಯೂ ಹೈದರಾಬಾದಿನಿಂದ ಬರಬೇಕು, ಮಾಲಿಷ್‌ವಾಲನೂ ಅಲ್ಲಿಂದ ಬರಬೇಕು. ಹಾಗಾದರೆ ಅಂಧ್ರದಲ್ಲಿರುವ ನಾಗರೀಕತೆ ಮೈಸೂರಿನಲ್ಲಿಲ್ಲವೆ? ಈ ಕೆಲಸ ಮಾಡುವವರು ಮೈಸೂರು ರಾಜ್ಯದಲ್ಲಿ ಯಾರೂ ಇರಲಿಲ್ಲವೆ? ಗವರ್ನರ್ ಅವರಿಗೆ ಅಲಂಕಾರ ಮಾಡುವವರು ಮೈಸೂರಿನಲ್ಲಿರಲಿಲ್ಲವೆ, ಅಲ್ಲಿಂದ ಏಕೆ ಕರೆದುಕೊಂಡು ಬರಬೇಕಾಗಿತ್ತು? ದೇಶದ ಮೇಲೆ ಮಮತೆ ಇಂತಹಂಥ ಜನ ಇಷ್ಟು ನಿರ್ಲಕ್ಷತನದಿಂದ ಹಣ ಖರ್ಚು ಮಾಡುವುದು ಮನಸ್ಸಿಗೆ ಬಂದಂತೆ ಖರ್ಚು ಮಾಡುವುದು ಸರಿಯಲ್ಲ. ಈ ಹೊಸ ಕಾರು ಎಲ್ಲಿ ಕೊಂಡಿರಿ? ಎಷ್ಟು ಕಾರು ಕೊಂಡಿದ್ದೀರಿ. ಕಾರುಗಳ ನಂಬರು ಏನು? 70 ಜನ ಕೆಲಸಕ್ಕೆ ಬೇಕು 9 ಕಾರು ಬೇಕು ಎಂದು ಕೇಳಿದ್ದೀರಿ ಎಂಬ ವರ್ತಮಾನ ನಮಗೆ ಬಂದಿದೆ. ಇವರ ಔಷಧಕ್ಕಾಗಿ 31 ಸಾವಿರ ರೂಪಾಯಿ ಖರ್ಚಾಗುತ್ತದೆ. ಇವರ ಸಲುವಾಗಿ ನೇಮಕವಾದ ಡಾಕ್ಟರರು ಯಾರು? ಕೇವಲ ಕಾರು ಗಾರ್ಡನ್ ಕನ್ನಡಿ ಇದರ ಸಲುವಾಗಿ ಇಷ್ಟು ಹಣ ಖರ್ಚು ಮಾಡುವುದಾದರೆ ಇದು ಆಸ್ಟಿರಿಟಿ ಮೆಜರ್ ಆಗುವುದೆ? ಬೇರೆ ರಾಜ್ಯದಲ್ಲಿ ರಾಜ ಭವನ ಇದೆ ಇಲ್ಲಿಯೂ ಬೇಕು ಎಂದು ಹೇಳುತ್ತಾರೆ. ಬೇರೆ ರಾಜ್ಯದಲ್ಲಿ ಹಿಂದಕ್ಕೆ ಬ್ರಿಟೀಷರ ಕಾಲದಲ್ಲಿ ಗವರ್ನರರ ಸಲುವಾಗಿ ಅರಮನೆಯಂಥ ರಾಜಭವನವನ್ನು ಕಟ್ಟಿಸಿಬಿಟ್ಟಿದ್ದಾರೆ. ನಮ್ಮ ರಾಜ್ಯಪಾಲರ ಸಲುವಾಗಿ ಮೈಸೂರಿನಲ್ಲಿ ಲಲಿತ ಮಹಾಲ ಇದೆ. ಅಲ್ಲಿ ಅವರು ವಾಸ ಮಾಡಬಹುದು. ಹತ್ತಿರ ಚಾಮುಂಡಿ ದೇವಿ ಇದ್ದಾಳೆ ಅವಳು ಇವರ ಮೇಲೆ ಕೃಪೆ ಮಾಡುತ್ತಾಳೆ ಆದುದರಿಂದ ರಾಜ್ಯಪಾಲರ ವಸತಿ ಸೌಕರ್ಯಕ್ಕಾಗಿ ಇನ್ನು ಹಣ ಖರ್ಚು ಮಾಡುವುದು ಸರಿಯಲ್ಲ.

ನನ್ನ ಸ್ನೇಹಿತರಾದ ಶ್ರೀ ಸುಂತಣಕರ ಅವರು ವ್ಯವಸಾಯ ಇಲಾಖೆಯ ಬೇಡಿಕೆಯ ಬಗ್ಗೆ ಸುದೀರ್ಘವಾಗಿ ಹೇಳಿದ್ದಾರೆ. ಡಿಮ್ಯಾಂಡ 23ರ ಬಗ್ಗೆ ನಾನು ಹೇಳುತ್ತೇನೆ. ಈ ಹಣ ಏತಕ್ಕಾಗಿ ಖರ್ಚು ಮಾಡುತ್ತೀರಿ? ಈ ಇಲಾಖೆಯಲ್ಲಿ ಬಹಳ ಅವ್ಯವಸ್ಥೆ ಇದೆ. ಇದನ್ನು ನಾವು ಅನೇಕ ಸಲ ಸಂಬಂಧಪಟ್ಟ ಮಂತ್ರಿಗಳಿಗೂ ಮಾನ್ಯ ಮುಖ್ಯಮಂತ್ರಿಗಳಿಗೂ ತಿಳಿಸಿದ್ದೇವೆ. ಈ ಅವ್ಯವಸ್ಥೆಯನ್ನು ಸರಿ

ಪಡಿಸುವುದಕ್ಕೆ ಯಾವ ಕ್ರಮ ಕೈಗೊಂಡಿಲ್ಲ; ಈ ಡಿಮ್ಯಾಂಡ್ ಈಗ ಪಾಸಾಗುತ್ತದೆ ಯಾಕೆಂದರೆ ನಿಮಗೆ ಬಹುಮತ ಇದೆ. ಕೈ ಎತ್ತು ಅಂದರೆ ಎತ್ತುವ ಜನ ನಿಮ್ಮ ಪಕ್ಷದಲ್ಲಿ ಇದ್ದಾರೆ. ನಾವೆಲ್ಲರೂ ಒಂದು ದೋಣಿಯಲ್ಲಿ ಕುಳಿತು ಹೋಗುತ್ತಿದ್ದೇವೆ. ದೋಣಿ ಮಾತ್ರ ಮುಳುಗಿಸಬೇಡಿ ಎಂದು ಹೇಳು ತ್ತೇನೆ. ಲಕ್ಷಾಂತರ ರೂಪಾಯಿ ಹಾಳಾಗುವುದನ್ನು ಕೂಡಲೇ ತಡಗಟ್ಟುವುದಕ್ಕೆ ಸೂಕ್ತ ಕ್ರಮ ಜಾಗ್ರತೆ ತೆಗೆದುಕೊಳ್ಳಬೇಕಾದುದು ಬಹಳ ಅಗತ್ಯವಾಗಿದೆ. ಇಲ್ಲದಿದ್ದರೆ ದೇಶದ ಹಣ ಪೋಲು ಆಗು ತ್ತದೆ. ಉಣ್ಣೆಯ ಕೋ-ಆಪರೇಟಿವ್ ಸೊಸೈಟಿಯಲ್ಲಿ ಲಕ್ಷಾಂತರ ರೂಪಾಯಿ ನಷ್ಟವಾಗುತ್ತದೆ. ಇದನ್ನು ಮಂತ್ರಿಗಳ ಗಮನಕ್ಕೆ ತಂದರೆ ಅದು ನನಗೆ ಗೊತ್ತಿಲ್ಲ ಎಂದು ಅವರು ಉತ್ತರ ಹೇಳುತ್ತಾರೆ. ಸರಕಾರದ ಈ ನೀತಿ ಸರಿಯಾಗಿಲ್ಲ. ನಾನು ಬಹು ವಿನಯದಿಂದ ಸರಕಾರಕ್ಕೆ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಕೋಆಪರೇಟಿವ್ ಸೊಸೈಟಿಗಳಿಗೆ ಸಂಬಂಧಪಟ್ಟ ಮಂತ್ರಿಗಳ ಖಾತೆ ಬದಲಿಸಿ ಸಂಬಂಧಪಟ್ಟ ಜನರ ಒಂದು ತಂಡ ನಡೆಸಬೇಕು. ಈ ರೀತಿ ನಾವು ಹೇಳುವುದನ್ನು ಕಾರ್ಯಗತ ಮಾಡದಿದ್ದರೆ ನಾವು ಹೇಳುವುದು ಬರೀ ಅರಣ್ಯ ರೋದನ ಮಾತ್ರ ಆಗುತ್ತದೆ. ಕೋಆಪರೇಟಿವ್ ಮೂವ್‌ಮೆಂಟನಲ್ಲಿ ಸುಧಾರಣೆಯಾಗಬೇಕಾದುದು ಅತಿ ಅವಶ್ಯಕವಾಗಿದೆ.

MR. SPEAKER.—The House will rise for tea and meet again after half an hour.

The House adjourned for recess at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair.]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ನಾನು ಡಿಮ್ಯಾಂಡು 23ರ ವಿಷಯದಲ್ಲಿ ಮಾತ ನಾಡುತ್ತಾ ಇದ್ದೆ. ಸಹಕಾರ ಸಂಘ ರೂ. 1,87,500 ಹಣ ಕೇಳುತ್ತಾ ಇದ್ದಾರೆ. ನಾನು ಈ ಇಲಾಖೆಯ ಮೇಲೆ ಏಕೆ ಇಷ್ಟು ಸ್ಟ್ರೆಸ್ ಮಾಡುತ್ತಾ ಇದ್ದೇನೆಂದರೆ ಈ ಸಹಕಾರ ಸಂಘಗಳ ಖಾತೆ ಇವತ್ತು ಕೆಲಸ ಮಾಡುತ್ತಾ ಇದೆಯೋ ಇಲ್ಲವೋ ಎಂಬ ಭಯ ನಮ್ಮ ಮನಸ್ಸಿಗೆ ಬಂದಿದೆ. ರೂ. 1,87,500 ಇವರ ಕೈನಲ್ಲಿ ಏಕೆ ಕೊಡಬೇಕು ಎಂಬ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ.

ಆಗ್ರಿಕಲ್ಚರ್ ಇಲಾಖೆ ಡಿಮ್ಯಾಂಡ್ ಬಗ್ಗೆ ನನ್ನ ಸ್ನೇಹಿತರು ಮಾತನಾಡಿದ್ದಾರೆ. ನಾನು ಅದ ರಿಂದ ಡಿಮ್ಯಾಂಡು ನಂಬರು 31ಕ್ಕೆ ಹೋಗುತ್ತೇನೆ. ಅದರಲ್ಲಿ ಅರಣ್ಯ ಖಾತೆಗೆ 10 ಲಕ್ಷ ಹಣ ಬೇಕು ಅಂತ ಕೇಳಿದ್ದಾರೆ. ಅಗ್ರಿಕಲ್ಚರ್ ಪ್ರೊಡಕ್ಷನ್ ಮತ್ತು ಸಾಯಿಲ್ ಕನ್ಸರ್ವೇಶನ್ ಪ್ರೋಗ್ರಾಂ ಪ್ರಕಾರ. 1964-65ಕ್ಕೆ ಗವರ್ನಮೆಂಟ್ ಆಫ್ ಇಂಡಿಯದವರು ಅಡಿಶನಲ್ ಅಲಾಟ್‌ಮೆಂಟು ಸ್ಯಾಂಕ್ಷನ್ ಮಾಡಿದ್ದಾರೆ. ಸ್ವಾಮಿ, ಈಗ ಸಾಯಿಲ್ ಕನ್ಸರ್ವೇಶನ್ ಎಷ್ಟರ ಮಟ್ಟಿಗೆ ನಡೆಯುತ್ತಾ ಇದೆ, ಅಫಾರೆಸ್ಟೇಶನ್ ಎಷ್ಟರ ಮಟ್ಟಿಗೆ ನಡೆಯುತ್ತಾ ಇದೆ, ಅನ್ನುವುದನ್ನು ತಮ್ಮ ಮುಖಾಂತರ ಸರಕಾರದ ದೃಷ್ಟಿಗೆ ತರಬೇಕು. ಎಲ್ಲೆಲ್ಲಿ ಕಡ್ಡಾಯವಾಗಿ ಮರ ಬೆಳಸಿತ್ತೋ ಅಂಥ ಮರಗಳನ್ನು ಕತ್ತರಿಸಿಹಾಕಿದ್ದಾರೆ. 3-4 ವರ್ಷದಿಂದ ಒಂದು ಕಡೆ ಅನ್‌ಆಥರೈಸ್ಡ್ ಕಲ್ಟಿವೇಶನ್ ಆಗುತ್ತಿದ್ದರೂ ಅದನ್ನು ತಪ್ಪಿಸಿಲ್ಲ. ಸಾಯಿಲ್ ಕನ್ಸರ್ವೇಶನನ್ನು ಹಾಫ್-ಹಾರ್ಟೆಡ್ ಮೆಜರಾಗಿ ತೆಗೆದುಕೊಂಡಿ ದ್ದಾರೆ. ಇದುವರೆಗೆ ಆ ಬಾಬಿಗೆ ಕೊಟ್ಟಿರುವ ಹಣವನ್ನು ಯಾವ ರೀತಿ ಖರ್ಚು ಮಾಡಿದ್ದಾರೆನ್ನು ವುದನ್ನು ಸರ್ಕಾರದವರು ಹೇಳಿದರೆ, ಇನ್ನು 10 ಲಕ್ಷ ರೂಪಾಯಿಯನ್ನು ಅದಕ್ಕೆ ಕೊಡುವುದರಲ್ಲಿ ದೋಷವಿಲ್ಲ. ಕೊಟ್ಟ ದುಡ್ಡನ್ನು ಸರಿಯಾಗಿ ಖರ್ಚು ಮಾಡದೆ ಇದ್ದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ, ದೇಶದ ಕಲ್ಯಾಣವಾಗುವುದಿಲ್ಲ. ಕೇಂದ್ರ ಸರಕಾರದಿಂದ ಕೊಟ್ಟ 10 ಲಕ್ಷ ರೂಪಾಯಿಯನ್ನು ಖರ್ಚು ಮಾಡತ್ತೇವೆಂದು ಹೇಳುತ್ತೀರಿ. ಇದು ಸುಮ್ಮನೆ ಪುಸ್ತಕ ರೂಪದಲ್ಲಿದ್ದುಬಿಟ್ಟು ದೇಶಕೆ ಯಾವ ಪ್ರಯೋ ಜನ ಆಗುವುದಿಲ್ಲ. ಈ ಸಭೆಯಲ್ಲಿ 3 ವರ್ಷದಿಂದ ಶ್ರೀ ರಾಚಯ್ಯನವರಿಗೆ, ಶ್ರೀಮತಿ ಯಶೋಧರ ದಾಸಪ್ಪನವರಿಗೆ, ಶ್ರೀ ಕೃಷ್ಣಪ್ಪನವರಿಗೆ ನನ್ನ ತಾಲ್ಲೂಕಿನಲ್ಲಿ 700 ಎಕರೆಯಲ್ಲಿ ಮೂರು ಸಾವಿರ ಸಸಿ ಗಳನ್ನು ಕತ್ತರಿಸಿದ್ದಾರೆಂದು ಹೇಳುತ್ತಿದ್ದೇನೆ. ಅಲ್ಲಿಗೆ ಆಂಧ್ರಪ್ರದೇಶದಿಂದ ಜನ ಬಂದು ವ್ಯವಸಾಯ ಮಾಡುತ್ತಾ ಇದ್ದಾರೆ. ಅವರನ್ನು ಎವಿಕ್ಟ್ ಮಾಡಿ ಎಂದು ಹೇಳಿದರ ಇವತ್ತಿನವರೆವಿಗೂ ಯಾವ ಕಾರ್ಯ ಕ್ರಮವನ್ನೂ ಅವರಿಗೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಫಾರೆಸ್ಟ್ ಇಲಾಖೆಯವರೂ ಮತ್ತು ರೆವಿನ್ಯೂ ಇಲಾಖೆಯವರು ಎವಿಕ್ಟ್ ಮಾಡುವುದಕ್ಕೆ ಹೋಗಿ ಆಗದೆ ಹೋಗಿದ್ದು. ಪೋಲೀಸಿನವರಿಗೂ ಆಗದೆ, ಪೋಲೀಸು ಪೋಲೀಸಿನವರಿಗೇ ವ್ಯಾಜ್ಯವಾಗಿದೆ. ಏನೇ ಆದರೂ ಎವಿಕ್ಷನ್ ಇವತ್ತಿನವರೆವಿಗೂ ನಡೆಯ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇಲ್ಲ. ನಮ್ಮ ದೇಶದಲ್ಲಿ ಆಹಾರ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ಏಕೆ ಆಗಲಿಲ್ಲವೆಂದರೆ ವ್ಯವಸಾಯ ಸಲಕರಣೆಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಕ್ಕೆ ಶಕ್ತಿ ಇಲ್ಲ. ಸರಕಾರದವರೂ ಹೇಳುವ ಪ್ರಕಾರ ಅವರಿಗೆ ಟೆಂಪೊರರಿ ಅಕ್ಯುಪೇಶನ್ನಿಗೆ ಕೊಟ್ಟು ಮೇಲೆ ಸ್ಟೇ ಆರ್ಡರ್ ಕೊಟ್ಟ ಮೇಲೂ, ಮನೆಗಳನ್ನು ಕಟ್ಟಿಸುತ್ತಾ ಇದ್ದಾರೆ. ಉರ್ದುವಿನಲ್ಲಿ ಒಂದು ಗಾದೆ ಇದೆ. ಅದರ ಪ್ರಕಾರ ಪುಂಡರಿಗೆ ಎರಡು ಶೇರು ಇದೆ. Might is right and not right is might. ಅರಣ್ಯ ಶಾಖೆ ಸಚಿವರು ಇದನ್ನು ಯೋಚನೆ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ಫಾರೆಸ್ಟ್ ಇಲಾಖೆಯಿಂದ ನಾವು ಎಷ್ಟು ನಿರೀಕ್ಷೆ ಮಾಡಿದ್ದೇವೊ ಅಷ್ಟು ಕೆಲಸವಾಗಿಲ್ಲ. ಶ್ರೀ ರಾಚಯ್ಯನವರು ಎಷ್ಟೋ ಪ್ರಯತ್ನ ಮಾಡಿದರೂ ಏನೂ ಸಾಧ್ಯವಾಗಲಿಲ್ಲ. ಯಾವುದೊ ಚಕ್ರದ ಕಂಬಿ ಕಿತ್ತುಕೊಂಡು ಹೋಗಿದೆ ಇಲ್ಲ ಯಾವುದೋ ಚಕ್ರದಲ್ಲಿ ಏನೇನೋ ಅವ್ಯವಸ್ಥೆ ಆಗಿ ಹೋಗಿದೆ. ಆದ್ದರಿಂದ ಈ ಹಣಕ್ಕೆ ವಿರೋಧ ಮಾಡಬೇಕಾಗಿದೆ.

ಇನ್ನು ಒಂದೇ ಒಂದು ವಿಷಯವನ್ನು ಹೇಳಬೇಕಾಗಿದೆ. ನವಿಲು ತನ್ನ ಗರಿಗಳನ್ನು ತೆರೆದು ಎಷ್ಟು ಚೆನ್ನಾಗಿದೆ ಎಂದು ಅಂದುಕೊಂಡರೆ, ಕೆಂಬಕ್ಕಿಯೂ ತನ್ನ ಪುಕ್ಕವನ್ನು ತೆರೆದು ಹಾಕಿಬಿಟ್ಟು ನವಿಲುಗರಿ ಹಾಗೆ ತನಗೆ ಗರಿಗಳು ಬಂದಿವೆ ಎಂದು ಅಂದುಕೊಂಡಿತಂತೆ. ಅದೇ ರೀತಿ ನಮ್ಮ ಎಜುಕೇಶನ್ ಮಿನಿಸ್ಟರೂ ಸ್ಕಾಲರ್‌ಶಿಪ್ಪಿಗೋಸ್ಕರ ಹಣ ಕೇಳಿದ್ದಾರೆ. ಯಾವ ಕೆಲಸಕ್ಕೆ ಕೈ ಹಾಕಬೇಕು, ಯಾವುದನ್ನು ಕೈ ಬಿಡಬೇಕು ಎಂದು ನಿರ್ಧರಿಸಲು ಯೋಗ್ಯತೆ ಇಲ್ಲವೆ ಇರತಕ್ಕಂಥ ಒಬ್ಬ ಸಚಿವರು, ದೇಶದ ಸ್ಕಾಲರ್‌ಶಿಪ್ ಯೋಜನೆಗೆ ಕೈ ಹಾಕಲು ಹೊರಟಿದ್ದಾರೆ. ಒಂದು ಗಾದೆ ಇದೆ: ಒಬ್ಬ ಹೇಳಿದನಂತೆ, ನನ್ನ ಹತ್ತಿರ ಕತ್ತಿ ಇದೆ, ಅದರ ಜೊತೆಗೆ ಗುರಾಣಿ ಇದ್ದಿದ್ದರೆ ಕತ್ತರಿಸುವುದಕ್ಕೆ ಚೆನ್ನಾಗಿರುತ್ತಿತ್ತು ಎಂದು. ಇಷ್ಟೊಂದು ಹಣ ಅವರಿಗೆ ಕೊಟ್ಟಿದ್ದೇವೆ, ಅದರಲ್ಲಿಯೇ ಸರಿಯಾಗಿ ಆಡಳಿತ ಮಾಡುತ್ತಾ ಇಲ್ಲ. ಅದು ಸಾಲದು ಎಂತ, ಇವತ್ತಿನ ದಿವಸ 51ನೇ ಡಿಮ್ಯಾಂಡಿನಲ್ಲಿ 12 ಲಕ್ಷ ಹಣ ಕೇಳುತ್ತಾ ಇದ್ದಾರೆ. ಈ ಹಣ ಕೊಟ್ಟರೆ ಸದ್ವಿನಿಯೋಗವಾಗುತ್ತದೆಯೋ? ಒಂದು ಸಣ್ಣ ವಿಷಯ ಹೇಳುತ್ತೇನೆ. ಸರಕಾರದವರು ಪ್ರೈಮರಿ ಪುಸ್ತಕಗಳನ್ನು ನ್ಯಾಷನಲೈಸ್ ಮಾಡಿದ್ದಾರೆ. ಮಾಧ್ಯಮ ಶಾಲೆ ಮಕ್ಕಳಿಗೆ ಇಂಗ್ಲೀಶ್ 5ನೇ ರೀಡರ್ ಪ್ರಿಸ್ಕ್ರೈಬ್ ಮಾಡಿದ್ದಾರೆ. ಅದು ಇನ್ನೂ ಪ್ರಿಂಟೇ ಆಗಿಲ್ಲ. ಆಗಲೇ ಜುಲೈ ತಿಂಗಳಿನ ಮಧ್ಯ ಭಾಗದಲ್ಲಿದ್ದೇವೆ, ಇನ್ನೂ ಒಬ್ಬ ಮಕ್ಕಳಿಗೂ ಪುಸ್ತಕ ಸಿಕ್ಕಿಲ್ಲ. ಅವರು ಏನು ಓದುವುದು? ಆ ರೀಡರ್ ಇಲ್ಲವೇ ಇಲ್ಲ, ಆದರೆ ಗೈಡ್ ಎಲ್ಲರ ಕೈಯಲ್ಲಿಯೂ ಇದೆ; ಇದರ ಬೆಲೆ 80 ನಯೇಪೈಸೆ. ರೀಡರಿನ ಖರೀದಿ ನನಗೆ ಗೊತ್ತಿಲ್ಲ. ಇದು ನ್ಯಾಶನಲೈಸ್ ಆದ ಟೆಕ್ಸ್ಟ್ ಬುಕ್ಕು. ನಮ್ಮ ಮಗುವಿಗೆ ಟೆಕ್ಸ್ಟ್ ಬುಕ್ಕು ಬೇಕು, ರೀಡರು ಬೇಕು ಅಂದರೆ, ಗೈಡನ್ನೆ ಪುಸ್ತಕ ಅಂತ ಭಾವನೆ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ.

ಮಾನ್ಯ ವಿದ್ಯಾಮಂತ್ರಿಗಳ ಕೈಯಲ್ಲಿ 12 ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದ್ದೇವೆ ಇದನ್ನು ಅವರು ಎಷ್ಟುಮಟ್ಟಿಗೆ ಅವರು ಸದ್ವಿನಿಯೋಗ ಮಾಡುತ್ತಾರೆ ಅಂತ? 22 ಕೋಟಿ ರೂಪಾಯಿಗಳ ಹಣ ಕೊಟ್ಟು ನಮ್ಮ ರಾಜ್ಯದಲ್ಲಿ ಇರುವ ಪ್ರೈಮರಿ, ಮಾಧ್ಯಮಿಕ ಶಾಲಾ ಮಕ್ಕಳಿಗೆ ಪುಸ್ತಕಗಳನ್ನು ಕೊಡಿ ಎಂದರೆ ಶಾಲೆಗಳು ಮೇ ತಿಂಗಳಿನಲ್ಲಿ ತೆಗೆದರೂ ಕೂಡ ಆಗಲೇ 3 ತಿಂಗಳು ಆಯಿತು ಇನ್ನೂ ಹುಡುಗರಿಗೆ ಓದುವುದಕ್ಕೆ ಪುಸ್ತಕ ಸಿಕ್ಕದಿದ್ದರೆ ಮಾಡುವುದಾದರೂ ಏನು? ಈಗ ಮತ್ತೆ ಈ 12 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಮಹದೇಶ್ವರ ಬೆಟ್ಟದಲ್ಲಿ ಇನ್ನೊಂದು ಕಾಲೇಜನ್ನು ತೆಗೆದರೆ ಗತಿ ಏನು? 44 ಲಕ್ಷ ಜನ ಶಾಲೆಗೆ ಹೋಗತಕ್ಕ ಮಕ್ಕಳು ಪುಸ್ತಕ ಇಲ್ಲದೇ ನೋಟ್ಸನ್ನೇ ರೀಡರ್ ಅಂತ ಹೇಳಿ ಓದುತ್ತಾ ಇದ್ದಾರಲ್ಲಾ ಅದಕ್ಕೆ ತಮ್ಮ ಮುಖಾಂತರ ಸರ್ಕಾರದವರ ದೃಷ್ಟಿಗೆ ತರುತ್ತಾ ಇದ್ದೇನೆ ಇದನ್ನು ನ್ಯಾಷನಲೈಸ್ ಮಾಡಿದ್ದೀರಿ, ಬೇರೆಯವರು ಅಚ್ಚು ಹಾಕುವ ಹಾಗಿಲ್ಲ, ಮಾರಾಟ ಮಾಡುವ ಹಾಗಿಲ್ಲ ಅವರೇ ಪ್ರಿಂಟ್ ಮಾಡಿಸಬೇಕು, ಅವರೇ ಮಾರಾಟ ಮಾಡಿಸಬೇಕು. ಇದನ್ನೆಲ್ಲಾ ಏಕೆ ಹೇಳುತ್ತೇನೆ ಎಂದರೆ ಈ ಟಾಲ್ ಟಾಕ್ಸ್—ದೊಡ್ಡ ದೊಡ್ಡ ಮಾತುಗಳು ಏನಿವೆ ಇದರಿಂದ ಏನೂ ಪ್ರಯೋಜನ ಇಲ್ಲ ಈ 12 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಯಾರಿಗೆ ಕೊಡುತ್ತೀರಿ? ಇದು ಮತ್ತೆ ದುರ್‌ವಿನಿಯೋಗ ವಾಗುವುದಕ್ಕೆ ಅವಕಾಶ ಇರುವುದರಿಂದ ಇದನ್ನು ವಿರೋಧ ಮಾಡಿ ರಾಜ್ಯದಲ್ಲಿ ಏನು ಅವ್ಯವಸ್ಥೆ ನಡೆದಿವೆ ಅಂತಹವರ ಕೈಯಲ್ಲಿ ಮತ್ತೆ 12 ಲಕ್ಷ ರೂಪಾಯಿಗಳನ್ನು ಕೊಟ್ಟು ಖರ್ಚು ಮಾಡಿರಿ ಎಂದರೆ ಎಷ್ಟು ಮಟ್ಟಿಗೆ ಅವರು ಮಾಡುತ್ತಾರೆಯೋ ಗೊತ್ತಿಲ್ಲ ಎಂದು ಹೇಳಿ ಅಧ್ಯಕ್ಷರೆ ಇಷ್ಟು ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri G. V. GOWDA.—Mr. Speaker, this is the first occasion in the history of our State finances that within three months after the passing of the budget the Government is coming before this House with supplementary demands. Hitherto, what we have been doing was if the amount provided was found insufficient the Government used to come before the House. Here there are instances where money has been taken away from the contingency fund and spent during 1963-64 and now the Minister has come before the House to get its approval. Whether that would fulfill the conditions contained in Art. 205 (1) is to be seen. I wish to invite the attention of the House to the fact whether money that has been spent by taking from the contingency fund during 1963-64 could be ratified in 1964-65. Hitherto the House was giving its approval for the expenditure incurred during the year.

Mr. SPEAKER.—Is it supplementary grant or excess grant ? Excess grants are ratified much later *i.e*, after they are spent. The time factor does not come in.

Sri G. V. GOWDA. So far as excess grants are concerned, I may agree. Here it is the supplementary grant that is asked for for the amount spent during 1963 64.

Mr. SPEAKER.—Was it not required to be placed before the House at the earliest time after the amount was taken and spent ? Supposing the amount was drawn from the Contingency Fund on the 31st of March, where was the time for them to get it rectified during the same year ?

Sri G. V. GOWDA.—We were sitting till the end of April.

Could it not have been possible for the Government to postpone the expenditure for four or five days and drawn the money in April. Here they wanted to pay towards some legal charges to a certain person. They have paid him on 28 th March. Could it not have been paid after 1st April ?

Sri B. D. JATTI.—The court directed that the amount should be paid. How could we disobey ? The Supreme Court decided in favour of Sri Bellary and the entire amount was to be paid. He himself came forward and suggested to Government that he might be paid Rs. 20,000 then and that the balance could be settled afterwards. So, on his request we have done that.

Mr. SPEAKER.—Once it is a decree it is a charged item and no debate here can set matters right.

Sri G. V. GOWDA.—Could not the amount have been given later on in order to avoid the violation of the constitutional provision ? I do not know the facts in Mr. Bellary's case. However, the High Court has allowed his writ petition and awarded the costs. Against that, the Government preferred an appeal and that appeal was dismissed by the Supreme Court. Before a person goes to seek remedy in a court of law, should not the Law Department examine the question and give the correct opinion ?

Sri B. D. JATTI.—In this matter we have got it examined by the Law pundits and they were of the opinion that we must go to the Supreme Court. Perhaps the Hon'ble Member is ignorant of the old facts. Mr.

(SRI B. D. JATTI)

Bellary does not belong to the cadre of Old Mysore State; he belongs to he old cadre of Bombay servants. He had his grievance against the Government of Bombay. He wanted some promotion. The then Government of Bombay did not agree to it. He was aggrieved and went to the court. In the meanwhile he became an allottee to this State consequent upon States Reorganisation. Then, this matter went up to the High Court and Supreme Court. So, this Government is not responsible for it; the Bombay Government was responsible for it.

Sri G. V. GOWDA.—If the Law Department was of the opinion that he would succeed in his writ petition, would it not have been better to give the necessary relief without compelling him to seek remedy in the court.

Mr. SPEAKER.—I am going to extend the time for this debate to tomorrow and I propose to call upon the Hon'ble Minister to reply tomorrow.

Sri G. V. GOWDA.—So far as Demand No. 10 is concerned, my Hon'ble Friends have already expressed the view that the expenditure is too much. It might be said that though they make provision they may not spend it. The Government must justify even the making of this provision in the Supplementary Demands.

Regarding Demand No. 19, Government gave sanction to start this hospital in September 1963. So, the necessary provision should have been made; it cannot be said that it is a new service. When they havenot done it, are we justified in giving approval to the Supplementary Demands? A similar question was raised and it was held (Nagpur XI, 1955) that where the need has arisen and a new service is contemplated, provision for such expenditure has to be made in the budget itself. If it is made in the Supplementary Demands, it is illegal and no approval can be given to it.

Then, in respect of the payment of grant-in-aid by the Public Health Department there is no uniformity. In Ex-Mysore Government maintains the dispensaries and recovers 50 per cent from the local bodies. In the Madras Karnatak, it is the local bodies that maintain the dispensaries and no grant is being paid to them since integration. I have been saying that there must be uniform rules in this matter.

In connection with the lands acquired for the Cardamom Research Station, Mudigere, the amount of enhanced compensation, *viz.*, Rs. 34,800 was drawn and paid on the 20th March 1964. In March itself, the last Supplementary Demands for that year was presented. I that this item could have been included. So far as assistance to the Taluk Marketing Societies is concerned, the Government takes a decision late in March and draws the amount through the contingency fund. If they had provided this assistance to the societies, they would have purchase more and stocked. If the demand of the societies is met in December they can purchase more and stock. That would been a check against rise in prices.

I request the Government to take early decision and see that these marketing societies are given financial assistanee early before harvest so that they may be able to make the out-rate purchase of foodgrains.

4-00 PM

In respect of preparation of Master Plan, only three towns are taken. In respect of soil conservation work or contour bunding work, if we see the money spent for those works and the work turned out, it is far from satisfactory. In respect of construction of tanks I welcome 40 lakhs additional amount being provided here and we hope that Government will leave no stone unturned to restore tanks and construct new tanks.

In respect of irrigation wells this year, they have provided just sufficient for completing the incomplete works. Now, several people are coming forward for sinking irrigation wells. Much has got to be done in that direction and much money has to provided. I also hope that the Chief Minister will come to the rescue of the people in the matter of pump sets about which much is already said. There must be some sort of coordination betweenthe Agriculture Engineering and the Revenue Departments. Otherwise, it would be very difficult for the ryots to get pump sets.

Sir, so far as Hatti Gold Mines is concerned this was treated as to centrally sponsored scheme, and is now treated as a State plan scheme.

SRI B. D. JATTI.—Sir, there is a misunderstanding It is not a centrally sponsored scheme. It is a company where 98 per cent of the shares are held by Government of Mysore and 2 per cent by the public.

SRI G. V. GOWDA.—It is said that the scheme is entitled to central assistance. It may be an assistance but it is a loan.

SRI B. D. JATTI. That is quite correct; where is the doubt?

SRI G. V. GOWDA.—Sir, so far as centrally sponsored schemes are concerned, such schemes in our State are far less in number. I request the Government to see that in the fourth plan more and more centrally sponsored schemes are taken into Mysore State. While Madras and Andhra get more such schemes, why not Mysore State?

Sir, in conclusion, I would say that 50 per cent of the Demands deserve our sympathy and the rest could have been foreseen and included in the annual budget.

Chair's Ruling

re: Prior Discussion of Additional and Supplementary Estimates in the Upper House.

MR. SPEAKER.—Members have raised a point of order or a breach of convention stating that the discussion in the Upper House first tends to diminish the status and privilege of the House in the matter of discussion of the Supplementary Demands. All the Members, who spoke, expressed unanimously that it had been the convention that the discussion took place in this House first and thereafter in the Council. It was also mentioned that it being a financial matter, voting was the

(MR. SPEAKER)

exclusive right of this House and that the discussion on this subject in the Council should therefore take place, after this House has dealt with it. It was asserted by most of the Members, who participated, that this had been the convention, and particularly one Member expressed that during his 7½ years of experience, it had never occurred the other way about. I was not sure of it. I got the data from 1958-59, that is practically after the integration period. This is the position, I find:

Year	L. A. (Voting)	L. C. (General discussion)
1958-59	14-3-1959	13-3-1959
1959-60	23-9-1960	23-9-1960
1960-61	14-11-1961	10-11-1961
1961-62	23-3-1962	23-3-1962
	24-3-1962	24-3-1962
1962-63	7-12-1962	7-12-1962
	8-12-1962	8-12-1962
1963-64	10-10-1963	10-10-1963
1964-65	7-7-1964	11-7-1964
	8-7-1964	...

From this, it is only evident, that there is no mandatory provision that it should be done in the Assembly first and thereafter in the Council. At this juncture, I might mention the fact that the presentation has taken place here first and a little later on the same day in the Council. That I think is always correct and the presentation should be kept separately in mind. With regard to its being discussed in the Council first I should like to say that, they can discuss it, but they cannot vote. It was pointed out that Bills were generally introduced here. That is not the invariable rule. Bills are also is introduced there. The Bills as passed by the Assembly are transmitted to that House for consideration and passing. They may pass it as passed by this House or amend it and return the Bill with their amendment to this House for consideration Therefore, we must treat the Budget demands as different from the Bills. There is one more point that has to be dealt with. If it is discussed there first does it lower our status or injure our status or prestige ? If they discuss it erlier there is nothing wrong. Therefore, I feel it is right. Whatever discussion takes place there may be read by the Members of this House in the papers. There should be no reference made here to the discussion that takes plece there. If the discussion was taken place there we are not entitled to take notice of it at all. It will not in any way adversely affect the discussion that takes place here. On the other hand, let us take the other alternative. We discuss, vote it here and pass it. There is nothing more that can be done. I really feel that there is nothing wrong. Therefore, I must say that though the point was raised in an interesting manner, it cannot be upheld.

Additional and Supplementary Demands for Grants for 1964-65 (I Instalment).

(Debate continued).

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ 64-65 ನೆ ಸಾಲಿನ ಅಧಿಕ ಹಾಗೂ ಅನುಪೂರಕ ಅನುದಾನಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಸರ್ಕಾರಕ್ಕೆ ನಾನು ಒಂದೆರಡು ಸಲಹೆಗಳನ್ನು ಕೊಡಬೇಕೆಂದು ಅಪೇಕ್ಷೆ ಪಡುತ್ತೇನೆ. ಆದರೆ ಇಲ್ಲಿಯವರೆಗೂ ಮಾತನಾಡಿರತಕ್ಕ ಮಾನ್ಯ ಸದಸ್ಯರಲ್ಲಿ ವಿರೋಧ ಪಕ್ಷದ ನಾಯಕರೂ ಮತ್ತು ಇತರೇ ಕೆಲವು ಮಾನ್ಯ ಸದಸ್ಯರೂ ಇಲ್ಲಿರತಕ್ಕ ಒಂದು ಪಟ್ಟಿಯ ವಿಚಾರದಲ್ಲಿ ವಿಶೇಷ ಟೀಕೆಗಳನ್ನು ಮಾಡಿದ್ದಾರೆ. ಆದರೆ ನಮ್ಮ ಸಂಸ್ಥಾನದ ಒಬ್ಬ ಗೌರ್ನರ ಆಡಳಿತಕ್ಕೆ ಸಂಬಂಧಪಟ್ಟ ವೆಚ್ಚಗಳ ಬಗ್ಗೆ ಹೆಚ್ಚಿನ ಟೀಕೆಗಳನ್ನು ಒಬ್ಬ ಮಾನ್ಯ ಸದಸ್ಯರು ಮಾಡಿದ್ದಾರೆ. ಆದರೆ ಹಾಗೆ ಟೀಕೆ ಮಾಡುವ ಮುನ್ನ ಆ ಒಬ್ಬ ಗೌರ್ನರನ ಸ್ಥಾನಮಾನಗಳೇನು, ಆ ಮಟ್ಟಕ್ಕೆ ಈ ಖರ್ಚುವೆಚ್ಚಗಳು ಎಷ್ಟಾಗಬಹುದು ಎಂಬುದನ್ನು ಆ ಮಾನ್ಯ ಸದಸ್ಯರು ಮೊದಲೇ ಕೂಲಂಕಷವಾಗಿ ವಿಮರ್ಶೆ ಮಾಡಿದ್ದರೆ ಬಹುಶಃ ಅವರು ಅಷ್ಟು ಮಾತುಗಳನ್ನು ಆಡುತ್ತಿದ್ದರೋ ಅಥವಾ ಇಲ್ಲವೋ ಅದು ನನಗೆ ತಿಳಿಯದಾಗಿದೆ. ಅವರು ಸ್ವಲ್ಪ ವಿಚಾರ ಮಾಡಿದ್ದರೆ ಮೊದಲೇ ಅವರು ಆ ಮಟ್ಟದಲ್ಲಿ ಮಾತನಾಡುವುದಕ್ಕೆ ಹೋಗತಕ್ಕ ಪ್ರಮೇಯವಿಲ್ಲವೆಂಬ ತೀರ್ಮಾನವನ್ನು ಅವರು ತೆಗೆದುಕೊಳ್ಳಬಹುದಾಗಿತ್ತು. ಈ ಅನುದಾನಗಳಿಗೆ ಈ ಮಾನ್ಯ ಸಭೆಯ ಒಪ್ಪಿಗೆ ಬೇಕೆಂಬುದಾಗಿ ಇವುಗಳನ್ನೀಗ ಈ ಸಭೆಯ ಮುಂದೆ ತಂದಿದ್ದಾರೆ. ಆದರೆ ಈ ಸಪ್ಲಿಮೆಂಟರಿ ಗ್ರಾಂಟುಗಳನ್ನು ಆದಷ್ಟು ಬೇಗ ಈ ಸಭೆ ಸೇರಿದ ಕೂಡಲೇ ತರಬೇಕಾಗಿತ್ತು ಎಂಬುದಾಗಿ ಕೆಲವರು, ಇನ್ನು ಕೆಲವರು ಈ ಐಟಂಗಳಲ್ಲಿ ಕೆಲವನ್ನಾದರೂ ಮೂಲ ಆಯವ್ಯಯ ಪಟ್ಟಿಯಲ್ಲೇ ಅಡಕಮಾಡಬಹುದಾಗಿತ್ತೆಂದೂ ಹೇಳಿದ್ದಾರೆ. ಆದರೆ ಇವುಗಳನ್ನು ಸರ್ಕಾರದವರು ಈ ಸಭೆಯ ಮುಂದೆ ರಾಜ್ಯಾಂಗದ 205ನೆ ವಿಧಿಯ ಪ್ರಕಾರ ತರಬೇಕಾಗಿತ್ತು, ಅದೇ ರೀತಿ ತಂದಿದ್ದಾರೆ. ಆದರೆ ಇವುಗಳ ವಿಚಾರದಲ್ಲಿ ಏನೊಂದು ಶಂಕೆ ಬಂದಿದೆಯೆಂದರೆ—ತಜ್ಞರು ಹೇಳತಕ್ಕ ಅಭಿಪ್ರಾಯದ ಪ್ರಕಾರ ಅದನ್ನು ಗಣನೆಗೆ ತೆಗೆದುಕೊಂಡರೆ ವರ್ಷದಲ್ಲಿ 3-4 ಬಾರಿ ಇಂಥಾ ಸಪ್ಲಿಮೆಂಟ್ರಿ ಡಿಮ್ಯಾಂಡುಗಳನ್ನು ತರತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಬಡ್ಜೆಟ್ಟನ್ನು ತಯಾರಿಸತಕ್ಕ ಕಾಲದಲ್ಲಿ ಸೇರಿಸುವುದಕ್ಕಾಗದೆ ಇದ್ದ ಸಂದರ್ಭಗಳೂ ಇರುತ್ತವೆ. ಆದ್ದರಿಂದ ನಾವು ಇವುಗಳಿಗೆ ನಮ್ಮ ಅನುಮತಿಯನ್ನು ನೀಡಲೇಬೇಕು. ಆದರೆ ಈ ಯೋಜನೆಗಳ ಯುಗದಲ್ಲಿ ನಾವು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಬೇಕು. ಕೇಂದ್ರದಿಂದ ಬರತಕ್ಕ ಹಣದ ನೆರವನ್ನು ತೆಗೆದುಕೊಳ್ಳದೆ ಉಪಯೋಗಿಸತಕ್ಕ ಸಂದರ್ಭದಲ್ಲ ಅನೇಕ ರೀತಿಯ ಬೇಡಿಕೆಗಳು ಈ ಸಭೆಯ ಮುಂದೆ ಬರಬೇಕಾಗಿದೆ. ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳ ವಿಚಾರದಲ್ಲಿ ಒಂದೆರಡನ್ನು ಮಾತ್ರ ವಿಚಾರ ಮಾಡುವುದಕ್ಕೆ ಹೋಗುತ್ತೇನೆ. ಈಗ ವ್ಯವಸಾಯದ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಬಹುಶಃ ಇದಕ್ಕೆ 32 ಲಕ್ಷ 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಅಭಿಪ್ರಾಯಪಟ್ಟು ಈ ಬೇಡಿಕೆಯಲ್ಲಿ ಅಳವಡಿಸಿದ್ದಾರೆ. ಹಿಂದೆ ಮಾತನಾಡಿದಂತಹ ಸದಸ್ಯರು 62-63 ನೇ ಸಾಲಿನ ಅಪ್ರೋಪ್ರಿಯೇಷನ್ ಅಕೌಂಟ್ಸ್ ಬಗ್ಗೆ ಕೊಟ್ಟಿರತಕ್ಕ ಅಂಕಿ ಅಂಶಗಳ ಬಗ್ಗೆ ಮಾತನಾಡಿ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಅದನ್ನು ನೋಡಿದರೆ ಹಿಂದಿನ ಸಾಲಿನಲ್ಲಿ ಎಷ್ಟರಮಟ್ಟಿಗೆ ಈ ಇಲಾಖೆ ಪ್ರಗತಿಯನ್ನು ಸಾಧನೆ ಮಾಡಿದೆ ಎಂಬುದು ಗೊತ್ತಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಸಪ್ಲಿಮೆಂಟರಿ ಗ್ರಾಂಟು ರೂಪದಲ್ಲಿ ಏನು ಹಣವನ್ನು ತೆಗೆದ ಕೊಂಡಿದ್ದಾರೋ ಅದನ್ನು ಇವರು ಖರ್ಚು ಮಾಡುವುದಕ್ಕೆ ಪ್ರಯತ್ನ ಪಡುವುದೇ ಇಲ್ಲ. ಇದರಿಂದೇನಾಗುತ್ತದೆಂದರೆ ಕೇಂದ್ರ ಸರ್ಕಾರದವರು ನಮಗೆ ಕೊಡತಕ್ಕ ಹಣವನ್ನು ಪಡೆಯಲು ಸಪ್ಲಿಮೆಂಟರಿ ಗ್ರಾಂಟು ರೂಪವಾಗಿ ಈ ಸಭೆಯ ಮುಂದೆ ಇಟ್ಟು ಈ ಸಭೆಯ ಒಪ್ಪಿಗೆಯನ್ನು ತೆಗೆದುಕೊಳ್ಳದೇ ಹೋದರೆ ಅಲ್ಲಿಂದ ಬರತಕ್ಕ ಹಣ ನಿಜವಾಗಿ ತಪ್ಪಿಹೋಗುತ್ತದೆ. ಹೇಗೆ ಸಪ್ಲಿಮೆಂಟರಿ ಗ್ರಾಂಟನ್ನು ಈ ಸಭೆಯ ಮುಂದೆ ಇಟ್ಟು ಈ ಸಭೆಯ ಒಪ್ಪಿಗೆಯಾದ ಮೇಲೆ ಜಾರಿಗೆ ಕೊಡುವುದರಲ್ಲಿ ಎಷ್ಟು ಸಿನ್ಸಿಯರಾಗಿ ಈ ಸಪ್ಲಿಮೆಂಟರಿ ಗ್ರಾಂಟು ಬರುತ್ತದೋ ಅಷ್ಟು ಸಿನ್ಸಿಯರಾಗಿ ಖರ್ಚು ಮಾಡಲು, ಕಾರ್ಯಗತ ಮಾಡಲು ಪ್ರಯತ್ನ ಮಾಡುವುದಿಲ್ಲ. ಪೂರ್ತಿ ಹಣವನ್ನು ಖರ್ಚುಮಾಡುತ್ತಾರೆನ್ನುವುದೇ ಇಲ್ಲ. ಇದರಲ್ಲಿ ನಿಜವಾಗಿ ನಮಗೆ ಸಮಾಧಾನಕರವೇ ಇಲ್ಲ. ಇನ್ನು ಅಪ್ರೋಪ್ರಿಯೇಷನ್ ಅಕೌಂಟ್ಸ್ ವಿಷಯದ ಬಗ್ಗೆ ವಿಚಾರ ಮಾಡಿ ನೋಡಿದರೆ ಸುಮಾರು 2-3 ವರ್ಷಗಳಿಂದಲೂ ಇವರು ಸಪ್ಲಿಮೆಂಟ್ರಿ ಗ್ರಾಂಟು ತೆಗೆದುಕೊಂಡಿರುವುದನ್ನು ನೋಡಿದ ಪಕ್ಷದಲ್ಲಿ ಎಷ್ಟೋ ಸಂದರ್ಭಗಳಲ್ಲಿ ಒರಿಜಿನಲ್,

(ಶ್ರೀ ಎಂ. ಸಿ. ಬಸಪ್ಪ)

ಗ್ರಾಂಟೇ ಸಕಾಲಗಳಿಗೆ ಖರ್ಚಾಗಿರುವುದಿಲ್ಲ. ಸಮಯ, ಸಂದರ್ಭ, ಸನ್ನಿವೇಶಗಳ ಒತ್ತಡಕ್ಕಾಗಿ ಸಪ್ಲಿಮೆಂಟರಿ ಗ್ರಾಂಟನ್ನು ಕೇಳತಕ್ಕ ಸನ್ನಿವೇಶ ಈ ಇಲಾಖೆಯಲ್ಲಿ ನಮಗೆ ಇವತ್ತು ಕಾಣುತ್ತಿದೆ. ಹಣಕಾಸಿನ ಮಂತ್ರಿಗಳಿಗೆ ಇಷ್ಟೇ ಕೇಳಿಕೊಳ್ಳುವುದು. ಈ ಇಲಾಖೆಯವರು ಏನು ಬೇಡಿಕೆಗಳನ್ನು ತೆಗೆದುಕೊಂಡಿದ್ದಾರೋ ಅವಕ್ಕೆ ನಿರ್ದಿಷ್ಟವಾಗಿ ಖರ್ಚುಮಾಡತಕ್ಕ ಹಣವನ್ನು ಕೊಡುವುದರ ಮೂಲಕ ಈ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಅವರಿಗೆ ಸೂಕ್ತ ಸಲಹೆಗಳನ್ನು ಕೊಡುವುದು ಬಹಳ ಅವಶ್ಯಕವೆಂದು ನಾನಂದುಕೊಂಡಿದ್ದೇನೆ.

ಇನ್ನು ಡಿಮ್ಯಾಂಡ್ ನಂಬರ್ 31. ಈ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಸ್ಟೇಟ್ ಹೈವೇಸ್, ವೀಕ್ ಬ್ರಿಡ್ಜಸ್, ಮತ್ತು ಇತರತಕ್ಕ ರಸ್ತೆಗಳನ್ನು ಅಭಿವೃದ್ಧಿಮಾಡುವುದಕ್ಕೆ ಮತ್ತು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಒಂದು ಸರ್ಕಲ್ಲನ್ನು ಕ್ರಿಯೇಟ್ ಮಾಡಬೇಕು. ಇದರಲ್ಲಿ ಅರ್ಧ ದುಡ್ಡನ್ನು ಇಂಡಿಯಾ ಸರ್ಕಾರದವರು ಕೊಡುತ್ತಾರೆ. ಆದ್ದರಿಂದ ಇವರು ಅಂತಹ ಒಂದು ಸರ್ಕಲ್ಲನ್ನು ಕ್ರಿಯೇಟ್ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಸೇತುವೆಗಳು, ರಸ್ತೆಗಳು, ಈ ತರಹ ಕಾರ್ಯಗಳಿಗೆ ಹಣವನ್ನು ಖರ್ಚು ಮಾಡಬಾರದು. ಇಂತಹ ಯೋಜನೆಗಳನ್ನು ಹಾಕುವಾಗ ಬರೀ ಇನ್‌ವೆಸ್ಟಿಗೇಷನ್ ಮಾಡುವುದಕ್ಕಾಗಿ ಸರ್ಕಲ್ ಕ್ರಿಯೇಟ್ ಮಾಡತಕ್ಕ ಅವಕಾಶವನ್ನು ಇಟ್ಟಿರುವುದು ಬಹಳ ಅಗತ್ಯವೆಂದು ನಾನು ಹೇಳುತ್ತೇನೆ. ಈ ವಿಷಯದ ಬಗ್ಗೆ ಒಂದೆರಡು ಮಾತುಗಳನ್ನು ತಿಳಿಸುವುದು ಬಹಳ ಅಗತ್ಯವೆಂದು ನಾನು ಹೇಳಬೇಕಾಗಿದೆ.

ಇನ್ನು 41 ನೇ ಡಿಮ್ಯಾಂಡ್. ಈ ಬೇಡಿಕೆಯ ಬಗ್ಗೆ ಶ್ರೀಮಾನ್ ವೆಂಕಟೇಗೌಡರು ಹೇಳಿದಹಾಗೆ ನಾನೂ ಸಹ ಹೇಳಬೇಕಾಗಿದೆ. ಕೆಲವು ಕೈಗಾರಿಕೆಗಳಿಗೆ 12 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆಯೆಂದು ಕೇಳಿದ್ದಾರೆ. ಬಹುಶಃ ಈ ಇಲಾಖೆಯವರು ವರ್ಷದ ಆಯವ್ಯಯದ ಬಡ್ಜೆಟ್ಟನ್ನು ತಯಾರು ಮಾಡುವ ಕಾಲದಲ್ಲಿ ಮುಂದಿನ ವರ್ಷದಲ್ಲಿ ಕೈಗಾರಿಕೆಗಳಿಗೆ ಏನು ಪ್ರೋತ್ಸಾಹ ಕೊಡಬೇಕು, ಎಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತೆಂಬುದನ್ನು ಯೋಚಿಸದೆ ಈಗ 12 ಲಕ್ಷ 5 ಸಾವಿರ ರೂಪಾಯಿಗಳನ್ನು ಮತ್ತೆ ಕೇಳುತ್ತಿದ್ದಾರೆ. ಇದನ್ನು ತಪ್ಪಿಸಬೇಕಾಗಿತ್ತು. ಅವರಿಗೆ ಮುಂದಾಲೋಚನೆ ಇಲ್ಲದೆ ಎಷ್ಟು ಹಣ ಬೇಕಾಗುತ್ತದೆಂಬುದರ ಅಗತ್ಯತೆ ಅರಿಯದೆ ಹಿಂದೆ ಆಯವ್ಯಯವನ್ನು ತಯಾರು ಮಾಡಿದ್ದರಿಂದ ಈಗ ಈ ಸಂಪ್ಲಿಮೆಂಟರಿ ಗ್ರಾಂಟು ರೂಪದಲ್ಲಿ ಪುನಃ ಈ ಸಭೆಯ ಅಭಿಪ್ರಾಯವನ್ನು ಮತ್ತು ಒಪ್ಪಿಗೆಯನ್ನು ತೆಗೆದುಕೊಳ್ಳುವುದಕ್ಕೆ ಬರಬೇಕಾಯಿತು ಎಂದು ನನಗನ್ನಿಸುತ್ತದೆ. ಬಹುಶಃ ಇನ್ನು ಮುಂದೆ ಈ ರೀತಿ ಹೆಚ್ಚಿನ ಸಪ್ಲಿಮೆಂಟರಿ ಗ್ರಾಂಟನ್ನು ಕೇಳುವುದನ್ನು ತಪ್ಪಿಸಲು ಮಾನ್ಯ ಹಣಕಾಸಿನ ಸಚಿವರು ಪ್ರಯತ್ನಪಡುತ್ತಾರೆಂದು ಹೇಳಿ ಇವತ್ತು ನಮ್ಮ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಈಗ ನಮ್ಮ ಮುಂದೆ ತಂದಿರತಕ್ಕ ಸಪ್ಲಿಮೆಂಟರಿ ಗ್ರಾಂಟ್ಸ್ ವಿಷಯದಲ್ಲಿ ನನ್ನ ಮಾನ್ಯ ಸ್ನೇಹಿತರು ಅನೇಕರು ಈಗಾಗಲೇ ಮಾತನಾಡಿದ್ದಾರೆ. ಇದರಲ್ಲಿ 20ನೇ ಡಿಮ್ಯಾಂಡ್ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿಗೆ ಖರ್ಚುಮಾಡತಕ್ಕ ಹಣವನ್ನು ನಮೂದು ಮಾಡಿದ್ದಾರೆ. ಇವರು ಆ ಬಗ್ಗೆ ಚೆನ್ನಾಗಿ ವಿಚಾರಮಾಡಿ ಖರ್ಚು ಮಾಡುತ್ತಾ ಇಲ್ಲ. ಇದಕ್ಕೊದಗಿಸುವ ಹಣ ಕೊನೆಯಲ್ಲಿ ಉಳಿದುಹೋಗುತ್ತದೆ. ಇವರು ಹೇಳುವುದು ಒಂದು ಮಾಡುವುದು ಒಂದು ಆಗುತ್ತದೆ. ಸಾಯಿಲ್ ಕನ್ಸರ್‌ವೇಷನ್ ನ್ಯಾಯವಾದ ರೀತಿಯಲ್ಲಿ ಆಗುತ್ತಾ ಇಲ್ಲ. ಇದು ಆಗದೇ ಇರುವುದರಿಂದ ನಮ್ಮಲ್ಲಿರತಕ್ಕ ಎಲ್ಲಾ ಕೆರೆಗಳು ಹೂಳು ತುಂಬಿ ಹೋಗುತ್ತಾ ಇರುವುದಕ್ಕೆ ಒಂದು ಮುಖ್ಯ ಕಾರಣ. ಇನ್ನು ಕೆಲವು ಕಾಲ ಹೋದರೆ ಕೆರೆಗಳಿಂದ ಅಚ್‌ಕಟ್ಟಿಗೆ ನೀರು ಏನು ಕೊಡುತ್ತಾರೋ ಅದನ್ನು ಕೊಡುವುದಕ್ಕೂ ಸಾಧ್ಯವಿಲ್ಲದಂತಾಗುತ್ತದೆ ಏನೋ ಆದ್ದರಿಂದ ಸಾಯಿಲ್ ಕನ್ಸರ್‌ವೇಷನ್ನಿಗೆ ಹೆಚ್ಚು ಗಮನವನ್ನು ಕೊಡಬೇಕು. ಹಳ್ಳ ಕೊರೆದಿರುವ ಪ್ರದೇಶಗಳಲ್ಲಿ ಸಿಲ್ಟ್‌ಟ್ಯಾಂಕ್ ಕಟ್ಟುವ ಕೆಲಸವನ್ನು ಮಾಡಬೇಕು. ಭೂಮಿಯ ಸಾರ ಹೊಳೆಗಳ ಕಡೆಗೆ ಹೋಗತಕ್ಕ ಸನ್ನಿವೇಶ ಇರುವುದರಿಂದ ಸಿಲ್ಟ್ ಟ್ಯಾಂಕ್‌ಗಳನ್ನು ಹಾಕುವುದಕ್ಕೆ ಹೆಚ್ಚಿಗೆ ನಿಗಾ ಕೊಡಬೇಕು ಎಂಬುದಾಗಿಹೇಳಲು ನಾನು ಇಷ್ಟಪಡುತ್ತೇನೆ. ಜೊತೆಗೆ ಕೆಲವು ಕಡೆಗಳಲ್ಲಿ, ಉತ್ತರ ಕರ್ಣಾಟಕದಲ್ಲಿ ಬಾವಿಗಳನ್ನು ರೈತನು ತಾನು ಹೇಳಿದ ಹಾಗೆ ಹಾಕಿಕೊಳ್ಳುವುದಕ್ಕಾಗಿ ಸಬ್ಸಿಡಿ ಕೊಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ. ಈ ಭಾಗದಲ್ಲಿ ಆ ರೀತಿ ಕೊಡುತ್ತಾ ಇಲ್ಲ. ಆ ರೀತಿ ಒಂದು ಪಕ್ಷ ಕೊಡದೇ ಇದ್ದರೆ ಅದಕ್ಕೊದಗಿಸಿರತಕ್ಕ ಹಣ ಖರ್ಚು ಮಾಡದೇ ಉಳಿಯುವುದಕ್ಕೆ ಬದಲಾಗಿ ರೈತನಿಗೆ ಸಬ್ಸಿಡಿ ಕೊಟ್ಟು ಕೆಲಸಗಳನ್ನು ದೃಢವಾಗಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳಬೇಕಾಗಿದೆ. ಜೊತೆಗೆ ಅಫಾರೆಸ್ಟೇಷನ್

ಎಂದೇನಿದೆ ಅದನ್ನು ಮುಂದುವರಿಸಬೇಕೆಂದು ದೊಡ್ಡ ದೊಡ್ಡ ರಸ್ತೆಗಳ ಪಕ್ಕದಲ್ಲಿ ಸಸಿಗಳನ್ನು ಹಾಕಿದ ಹಾಗೆ ಕಾಣುತ್ತಿದೆ. ನಮ್ಮಲ್ಲಿರತಕ್ಕ ಅರಣ್ಯ ಪಾಳು ಬೀಳುತ್ತಿದೆ. ಅದನ್ನು ಕೇಳುವವರು ಇಲ್ಲ, ಹೇಳುವವರಿಲ್ಲ. ದಿಕ್ಕಾಪಾಲಾಗಿ ಹೋಗುತ್ತಿದೆ. ಬೀದಿ ಮಗ್ಗುಲಿನಲ್ಲಿ ಏನೋ ದೊಡ್ಡ ಕೆಲಸ ಅರಣ್ಯ ಇಲಾಖೆಯವರು ಮಾಡುತ್ತಿದ್ದಾರೆಂದು ತೋರಿಸುವುದಕ್ಕೆ ಬದಲಾಗಿ ಇರತಕ್ಕ ಹಳೆಯ ಅರಣ್ಯ ಪ್ರದೇಶಗಳನ್ನು ಚೆನ್ನಾಗಿ ನೋಡಿಕೊಂಡು ಅವುಗಳ ಬಗ್ಗೆ ಹೆಚ್ಚು ನಿಗಾಕೊಟ್ಟು ಎಲ್ಲಾ ಕಡೆಗಳಲ್ಲೂ ಗಿಡ, ಸಸಿಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಸಸಿಗಳು ಚೆನ್ನಾಗಿ ಬೆಳೆಯಬೇಕಾದರೆ ಮಳೆಯು ಚೆನ್ನಾಗಿ ಬೀಳಬೇಕು. ನಮ್ಮ ಭಾಗದಲ್ಲಿ ಮಳೆ ಅಷ್ಟಾಗಿ ಬರುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಅರಣ್ಯ ಸಂಪತ್ತಿನ ಅಭಿವೃದ್ಧಿ ಬಗ್ಗೆ ಹೆಚ್ಚು ನಿಗಾ ಕೊಡಬೇಕು. ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿನವರು ನಮ್ಮ ಕಡೆ ಕೆಲವು ಫಾರಂಗಳನ್ನು ತೆಗೆದಿದ್ದಾರೆ. ಹತ್ತಾರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕೆಲಸ ಮಾಡಿದ್ದಾರೆ. ಈ ಸಾರಿ ಬಡ್ಜೆಟ್ಟಿನಲ್ಲಿ ಸಾಕಷ್ಟು ಹಣವನ್ನು ಈ ಬಾಬಿಗೆ ಒದಗಿಸಿಲ್ಲ, ಏಕೆಂದರೆ ಖರ್ಚುಮಾಡಿದಂತಹ ಹಣದಲ್ಲಿ ನಷ್ಟವಾಗುವ ಪರಿಸ್ಥಿತಿ ಇದೆ. ಹಾರ್ಟಿಕಲ್‌ಚರಲ್ ಫಾರಂಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಚೆನ್ನಾಗಿ ಅಭಿವೃದ್ಧಿ ಮಾಡುವುದಕ್ಕೆ ಅನುಕೂಲಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಮತ್ತು ಸೀಡ್ ಫಾರಂಗಳೇನಿವೆ ಅವುಗಳ ಬಗ್ಗೆ ಶ್ರೀಮಾನ್ ಸುಂತಣ್‌ಕರ್ ಅವರು ತಮ್ಮ ಅನುಭವವನ್ನು ಹೇಳಿದ್ದಾರೆ. ಸುಮಾರು ಒಂದು ಸೇರು ಬೀಜದ ರಾಗಿಯನ್ನು ಬೆಳೆಯುವುದಕ್ಕೆ 11 ರೂಪಾಯಿಗಳವರೆಗೆ ಖರ್ಚುಮಾಡುವ ಸರ್ಕಾರ ರೈತನ ಕಷ್ಟವೇನು ಎಂಬುದನ್ನು ಅರ್ಥಮಾಡಿಕೊಳ್ಳದೇ ಇರುವುದರಿಂದ ಅವನಿಗೇ ನೋಟಿಫೈ ಮಾಡಿದ ಪ್ರಕಾರ ಕಂದಾಯ ಏರಿಸಬೇಕಾಗುತ್ತದೆ. ಒಂದು ಸೇರಿಗೆ 11 ರೂಪಾಯಿಗಳವರೆಗೆ ಸರ್ಕಾರಕ್ಕೆ ಖರ್ಚಾದರೆ ರೈತನಿಗೆ ಅದರಲ್ಲಿ ಅರ್ಧ ಖರ್ಚಾಗುತ್ತದೆ ಎನ್ನುವ ವಿಚಾರವನ್ನು ಅವರು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಒಳ್ಳೇ ಜಾಗಗಳನ್ನು ಸೆಲೆಕ್ಟ್‌ಮಾಡಿ ಬಹಳ ಉತ್ತಮ ಬೀಜವನ್ನು ಸರ್ಕಾರದವರು ನೇರವಾಗಿ ರೈತನಿಗೆ ಕೊಟ್ಟರೆ ಆಗ ಅವನಿಗೆ ನಂಬಿಕೆ ಬರುತ್ತದೆಯೇ ವಿನಹ ಸೀಡ್ ಗ್ರೋಯರ್ಸ್‌ಗೆ ಬೋನಸ್ ವಗೈರೆ ಕೊಟ್ಟರೆ ಬಹಳ ಮೋಸವಾಗುತ್ತದೆಂದು ನನಗನ್ನಿಸುತ್ತದೆ.

ಇನ್ನು 46 ಮತ್ತು 50 ಡಿಮ್ಯಾಂಡುಗಳು ಬಹಳ ಉಪಯುಕ್ತವಾದುವುಗಳು. ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿಗೆ ಕೆಲಸಗಳನ್ನು ತೆಗೆದುಕೊಂಡು ಈ ಬೇಡಿಕೆಯನ್ನು ಈಗಲಾದರೂ ತಂದಿದ್ದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಆದರೆ ಇವರು ಹೇಳಿರತಕ್ಕ ಕೆಲಸ ಕಾರ್ಯಗಳು ಸುಮ್ಮನೆ ಕಾಗದದಲ್ಲಿರುವುದಕ್ಕೆ ಬದಲಾಗಿ ಕಾರ್ಯತಃ ಮಾಡುವಾಗ ಹಣ ಒಂದು ಚೂರು ಲ್ಯಾಪ್ಸ್ ಆಗದಿರುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಇವರು ವಹಿಸಬೇಕು ಮತ್ತು ಜಾಗ್ರತಿಯಿಂದ ಕೆಲಸ ಕಾರ್ಯಗಳು ನಡೆಯುವಂತೆ ನೋಡಿಕೊಳ್ಳಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

4-30 P.M.

ಇನ್ನು ಡಿಮ್ಯಾಂಡ್ ನಂಬರ್ 54ರಲ್ಲಿ ಚಿನ್ನದ ಗಣಿಗೆ ಸಾಲವನ್ನು ಕೊಡುವ ವಿಚಾರವನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ನಮ್ಮ ಸ್ನೇಹಿತರಾದ ಶ್ರೀಮಾನ್ ವೆಂಕಟೇಗೌಡರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಚಿನ್ನದ ಗಣಿಯನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುತ್ತಾರೆಂದು ಹೇಳಿದ್ದರು. ಆದರೂ ಸಹ ಈಗ ಮತ್ತೆ ಹಣವನ್ನು ಒದಗಿಸಿದ್ದಾರೆ. ಆದಾಯ ಬಾರದೆ ಇರತಕ್ಕಂಥ ಬಾಬಿಗೆ ಇಷ್ಟೊಂದು ದೊಡ್ಡ ಮೊತ್ತವನ್ನು ಒದಗಿಸಿರತಕ್ಕದ್ದು ಸ್ವಲ್ಪ ಅನುಮಾನವಾಗಿದೆ. ಅಧಿಕಾರಿಗಳು ಬರೆದದ್ದನ್ನು ಇದರಲ್ಲಿ ಸೇರಿಸಿದ್ದಾರೆಯೇ ಹೇಗೆ ಎಂಬುದನ್ನು ನೋಡಬೇಕು. ಈ ವಿಚಾರದಲ್ಲಿ ಸರ್ಕಾರದವರು ಸ್ವಲ್ಪ ನಿಗಾ ಕೊಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ನಾನು ಹೇಳಿದ್ದು ಕೋಲಾರದ ಚಿನ್ನದ ಗಣಿಯ ವಿಷಯ. ಹಟ್ಟಿ ಚಿನ್ನದ ಗಣಿಯ ವಿಷಯವಲ್ಲ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಎಲ್ಲಕ್ಕಿಂತ ಮುಖ್ಯವಾದ ಇನ್ನೊಂದು ವಿಚಾರ ಇದೆ. ಈ ವಿಚಾರದಲ್ಲಿ ಶ್ರೀಮಾನ್ ಗೋಪಾಲ ಗೌಡರು ವಿರೋಧವಾಗಿದ್ದಾರೆಂದು ನನಗೆ ಎನಿಸಿದರೂ ಕೂಡ ಹಳೆಯ ಮೈಸೂರಿನ ಭಾಗದ ರೈತಾಪಿ ಜನರು ನಮ್ಮ ರಾಜ್ಯಪಾಲರ ಬದಲಾವಣೆಯ ವಿಚಾರದಲ್ಲಿ ಎಷ್ಟು ಮನನೊಂದಿದ್ದಾರೆಂಬುದು ನಮಗೆ ಗೊತ್ತಿದೆ. ಹಿಂದೆ ಇದ್ದ ರಾಜ್ಯಪಾಲರೇ ನಮ್ಮ ರಾಜ್ಯದಲ್ಲಿ ಇದ್ದರೆ ಇವರಿಗೆ ಏನಾಗಿತ್ತು ?

Mr. SPEAKER.—I am not allowing the member to make such a reference here. It is not within the scope. The appointment is made by the President.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಹಿಂದೆ ಇದ್ದ ರಾಜ್ಯಪಾಲರು ಸಂಬಳವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಮನೆ ಮುಂತಾದ ಯಾವ ಸೌಕರ್ಯವನ್ನು ಕೇಳುತ್ತಾ ಇರಲಿಲ್ಲ. ಅವರೇ ಇದ್ದರೆ ಏನಾಗಿತ್ತು? ಈಗ ಹೊಸದಾಗಿ ನಮ್ಮ ರಾಜ್ಯಕ್ಕೆ ರಾಜ್ಯಪಾಲರಾಗಿ ಬಂದಿರತಕ್ಕವರು ಎಲ್ಲಾ ಸೌಕರ್ಯವನ್ನೂ ಕೇಳುತ್ತಿದ್ದಾರೆ. ಅವರಿಗೆ ಸೌಕರ್ಯವನ್ನು ಒದಗಿಸಲು ಈಗ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ.

Mr. SPEAKER.—I must see that only what is relevant is said.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಹೊಸದಾಗಿ ಇಲ್ಲಿಗೆ ಬಂದಿರತಕ್ಕ ಒಬ್ಬ ಗೌರ್ನರ್ ಅವರಿಗೆ ಇಷ್ಟೊಂದು ಹಣವನ್ನು ಯಾತಕ್ಕೆ ಖರ್ಚುಮಾಡಬೇಕು? ಈಗ ಮೈಸೂರಿನಲ್ಲಿ ಲಲಿತಮಹಲ್ ಪ್ಯಾಲೇಸ್ ಇದೆ, ಅಲ್ಲಿಗೇ ಇವರನ್ನು ಬೇಕಾದರೆ ಕಳುಹಿಸಬಹುದು. ಅಲ್ಲಿ ಎಲ್ಲಾ ವಿಧವಾದ ಸೌಕರ್ಯಗಳೂ ಇವೆ. ಈ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ರಾಜಭವನವನ್ನು ಕಟ್ಟಿಸುತ್ತೇವೆಂದು ಈ ಸಭೆಯಲ್ಲಿ ಹೇಳಿದಂತಹ ಮಾತನ್ನು ಒಪ್ಪತಕ್ಕದ್ದಲ್ಲ.

ಶ್ರೀ ಬಿ. ಡಿ. ಜತ್ತಿ.—ಈಗ ಚರ್ಚೆಯಾಗುತ್ತಿರುವ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ 20 ಲಕ್ಷ ರೂಪಾಯಿನ ಡಿಮ್ಯಾಂಡ್ ಯಾವುದು ಇಲ್ಲ. ಆದ್ದರಿಂದ ಮಾನ್ಯ ಸದಸ್ಯರು ಈ ಸಪ್ಲಿಮೆಂಟರಿ ಡಿಮ್ಯಾಂಡಿಗೆ ಸಂಬಂಧಪಟ್ಟ ಹಾಗೆ ಮಾತನಾಡಿದರೆ ಒಳ್ಳೆಯದು.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಆ ವಿಷಯವನ್ನೇ ಮಾತನಾಡುತ್ತೇನೆ. ಈಗ ಗವರ್ನರ್ ಅವರಿಗೆ ಕೊಟ್ಟಿರತಕ್ಕ ರೆಸಿಡೆನ್ಸಿಯಲ್ಲಿ ಪಾರ್ಕ್ ಇದೆ. ಸಿಬ್ಬಂದಿ ಇದೆ, ಎಲ್ಲಾ ವಿಧವಾದ ಸೌಕರ್ಯಗಳೂ ಅಲ್ಲಿ ಇವೆ. ಹೀಗಿರುವಾಗ ರೆಸಿಡೆನ್ಸಿಗೋಸ್ಕರ ಬೇರೆ ಬೇರೆ ಖರ್ಚುಗಳನ್ನು ತೋರಿಸಿ ಇಷ್ಟೊಂದು ಹಣವನ್ನು ಒದಗಿಸಿರತಕ್ಕದ್ದು ಸುತರಾಂ ಸರಿಯಲ್ಲ. ಗಾಂಧಿ ಭಕ್ತರಾದ ಜನ ಸಾಧಾರಣವಾದ ಹಾಗೂ ಸರಳವಾದ ಜೀವನವನ್ನು ನಡೆಸತಕ್ಕಂಥ ಒಂದು ರೀತಿ ಮತ್ತು ನೀತಿಗೆ ಹೊಂದಿಕೊಂಡು ಹೋಗಬೇಕಾಗಿರುವುದರಿಂದ ಈಗ ಗೌರ್ನರ್ ಅವರಿಗೆ ಖರ್ಚುಮಾಡತಕ್ಕ ಹಣದ ಬಾಬನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ಹಣವನ್ನು ಖರ್ಚುಮಾಡುವುದಕ್ಕೆ ಸರ್ಕಾರದವರು ನಮ್ಮ ಒಪ್ಪಿಗೆಯನ್ನು ಕೇಳತಕ್ಕದ್ದು ಸೂಕ್ತವಲ್ಲ. ನಾನು ಈ ವಿಷಯದಲ್ಲಿ ಇನ್ನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರಲ್ಲಿ ಸ್ವಾಗತಾರ್ಹವಾದ ಕೆಲವು ಡಿಮ್ಯಾಂಡುಗಳೂ ಇವೆ. ಉಳಿದವುಗಳು ಸ್ವಾಗತಾರ್ಹವಾಗಿಲ್ಲ. ಅನಾವಶ್ಯಕವಾದ ಕೆಲವು ಬಾಬುಗಳಿಗೆ ಈಗ ಸರ್ಕಾರದವರು ಹಣವನ್ನು ಕೇಳಿರತಕ್ಕದ್ದು ಸರಿಯಲ್ಲ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಸ್ವಾಮಿ ಸರ್ಕಾರದವರು ಈ ಸಭೆಯ ಮುಂದಿಟ್ಟಿರುವ 1964-65ನೇ ಸಾಲಿನ ಸಪ್ಲಿಮೆಂಟರಿ ಎಸ್ಟಿಮೇಟನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ನಾನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ಡಿಮ್ಯಾಂಡ್ ನಂಬರ್ 10 ರಲ್ಲಿ ಐಟಮ್ಸ್ ಒಂದರಿಂದ ಹತ್ತರವರೆಗೆ 4,85,000 ರೂಪಾಯಿಗಳನ್ನು ನಮ್ಮ ಗೌರ್ನರ್ ಅವರಿಗೆ ಸಂಬಂಧಪಟ್ಟ ಹಾಗೆ ಖರ್ಚು ಮಾಡಬೇಕೆಂದು ತೋರಿಸಿದ್ದಾರೆ. ಇದರ ಬಗ್ಗೆ ನಮ್ಮ ಸ್ನೇಹಿತರು ಅನೇಕರು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಮತ್ತು ಕೆಲವರು ಆ ವಿಚಾರದಲ್ಲಿ ತಮ್ಮ ಒಂದು ಶಂಕೆಯನ್ನು ಕೂಡ ವ್ಯಕ್ತಪಡಿಸಿದ್ದಾರೆ. ಈ ವಿಷಯದಲ್ಲಿ ನನ್ನ ಒಂದು ಅಭಿಪ್ರಾಯವನ್ನು ಹೇಳುವುದಾದರೆ ಆ ವಿಚಾರದಲ್ಲಿ ನಮ್ಮ ಸ್ನೇಹಿತರು ಆ ರೀತಿ ಶಂಕೆ ಪಡುವುದಕ್ಕೆ ಕಾರಣವಿಲ್ಲ. ಏತಕ್ಕೆಂದರೆ ನನ್ನ ಒಂದು ಅನುಭವ ಮತ್ತು ನಾನು ನೋಡಿದ್ದರಲ್ಲಿ ಮೊನ್ನೆತಾನೆ ನಮ್ಮ ರಾಜ್ಯಪಾಲರು ನಮ್ಮ ವಿಧಾನ ಮಂಡಲದ ಮಾನ್ಯ ಸದಸ್ಯರಿಗೆ ಒಂದು ಟೀ ಪಾರ್ಟಿಯನ್ನು ಏರ್ಪಡಿಸಿದ್ದಂತಹ ಸಂದರ್ಭದಲ್ಲಿ ಅವರು ತೋರಿಸಿದಂತಹ ಸರಳತೆ ಸೌಜನ್ಯತೆಯನ್ನು ನೋಡಿದರೆ ಅವರು ಇಷ್ಟು ಹಣವನ್ನು ಖರ್ಚುಮಾಡುವುದಕ್ಕೆ ಒಪ್ಪುವದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ವಿಚಾರದಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಇಚ್ಛಿಸುವುದಿಲ್ಲ.

ಇನ್ನು ಡಿಮ್ಯಾಂಡ್ ನಂಬರ್ 20ರಲ್ಲಿ ಅಗ್ರಿಕಲ್‌ಚರಲ್ ಹೆಡ್‌ನಲ್ಲಿ 32 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಇದೇನೋ ಬಹಳ ಉಪಯುಕ್ತವಾದದ್ದು. ಆದರೆ ಇದರಲ್ಲಿ ಕೆಲವು ಲೋಪದೋಷಗಳಿವೆ ಅವುಗಳನ್ನು ಸರ್ಕಾರದವರ ಗಮನಕ್ಕೆ ನಾನು ತರಬಯಸುತ್ತೇನೆ. ಈಗ ನಮಗೆ ಆಹಾರ ಧಾನ್ಯದ ಕೊರತೆ ಇರುವಾಗ ಆಹಾರೋತ್ಪಾದನೆಗೆ ಹೆಚ್ಚಿನ ರೀತಿಯಲ್ಲಿ ಸರ್ಕಾರದವರು ಆಸಕ್ತಿಯನ್ನು ವಹಿಸಬೇಕು. ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಅದನ್ನು ಸದ್ವಿನಿಯೋಗ ಮಾಡಬೇಕು.

ಆ ಮೇಲೆ ಇದೇ ಡಿಮ್ಯಾಂಡಿನಲ್ಲಿ ಕಾಂಪ್ರಹೆನ್ಸೀವ್ ಪ್ಲಾಂಟ್ ಪ್ರೊಟೆಕ್ಷನ್ ಆರ್ಗನೈಜೇಷನ್ಸ್, ಮತ್ತು ಸೆಟಿಂಗ್ ಅಪ್ ಆಫ್ ಸೀಡ್ ಫಾರಮ್ಸ್ ಅಂಡ್ ಡಿಸ್ಟ್ರಿಬ್ಯೂಷನ್ ಆಫ್ ಇಂಪ್ರೂವ್ಡ್ ಸೀಡ್ಸ್ ಗೋಸ್ಕರ ಒಟ್ಟು 10 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈ ವಿಷಯದಲ್ಲಿ ನನ್ನ ಒಂದು ಅನು

ಭವವನ್ನು ಹೇಳುವುದಾದರೆ ಈಗ ಹೆಲ್ತ್ ಇಲಾಖೆಯಲ್ಲಿ ಮಲೇರಿಯಾ ಇರಾಡಿಕೇಷನ್‌ಗೋಸ್ಕರ ಹಣ ಖರ್ಚು ಮಾಡುವುದಕ್ಕೆ ಯಾವ ರೀತಿ ಒಂದು ಯೋಜನೆಯನ್ನು ಒಂದು ಆರ್ಗನೈಜೇಷನ್ ಮಾಡಿ ಕೊಂಡಿದ್ದಾರೆಯೋ ಅದೇ ರೀತಿಯಲ್ಲಿ ಈ ಕಾಂಪ್ರಹೆನ್ಸೀವ್ ಪ್ಲಾಂಟ್ ಪ್ರೊಟೆಕ್ಷನ್ ಮತ್ತು ಸೀಡ್ ಫಾರಮ್ಸ್ ವಿಷಯದಲ್ಲಿ ಮತ್ತು ಡಿಸ್ಟ್ರಿಬ್ಯೂಷನ್ ಆಫ್ ಇಂಪ್ರೂವ್ಡ್ ಸೀಡ್ಸ್ ವಿಷಯದಲ್ಲಿಯೂ ಒಂದು ವ್ಯವಸ್ಥೆ ಮಾಡಬೇಕು. ಅನೇಕ ಸಾರಿ ರೈತರಿಗೆ ಫಾಲಿಡಾಲ್ ಕೊಡುತ್ತಿದ್ದಾರೆ, ಇದರಿಂದ ಅನೇಕ ಅನಾಹುತಗಳಾಗುತ್ತಿವೆ. ಈ ರೀತಿ ರೈತರಿಗೆ ಫಾಲಿಡಾಲ್ ಕೊಡತಕ್ಕ ವಿಷಯವು ಸರ್ಕಾರದ ಗಮನಕ್ಕೂ ಬಂದಿರಬಹುದು. ಈ ಫಾಲಿಡಾಲ್‌ನಿಂದ ಅನೇಕ ಅನಾಹುತಗಳಾಗುತ್ತಿರುವುದನ್ನು ನಾವು ಪತ್ರಿಕೆಯಲ್ಲಿ ಕೂಡ ನೋಡುತ್ತಿದ್ದೇವೆ. ಆದ್ದರಿಂದ ಈ ಅನಾಹುತವನ್ನು ತಪ್ಪಿಸುವುದಕ್ಕೋಸ್ಕರ ಮಲೇರಿಯಾ ಇರಾಡಿಕೇಷನ್‌ಗೋಸ್ಕರ ಯಾವ ರೀತಿ ವ್ಯವಸ್ಥೆಯನ್ನು ಮಾಡಿದ್ದಾರೆಯೋ ಅದೇ ರೀತಿ ಇದಕ್ಕೂ ಕೂಡ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಆಮೇಲೆ ಐಟಮ್ ನಂಬರ್ 10ರಲ್ಲಿ ಇಂಟೆನ್ಸೀವ್‌ರಾಗಿ ಕಲ್ಟಿವೇಷನ್ ಎಂದು ಹಾಕಿಕೊಂಡಿದ್ದಾರೆ. ಈಗ ಮಂಡ್ಯ ಮತ್ತು ಹೆಬ್ಬಾಳಿನಲ್ಲಿ ಇರುವ ಸಂಶೋಧನಾಲಯಗಳಲ್ಲಿ ರಾಗಿಗೆ ಸಂಬಂಧಪಟ್ಟ ಹಾಗೆ ರಿಸರ್ಚ್ ಮಾಡುವುದಕ್ಕೆ ಸರಿಯಾದ ಒಂದು ವ್ಯವಸ್ಥೆಯಿಲ್ಲ. ರಾಗಿಯನ್ನು ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿ ಹೆಚ್ಚು ಭಾಗದಲ್ಲಿ ಬೆಳೆಯುತ್ತಾರೆ ಮತ್ತು ಹೆಚ್ಚು ಜನ ರಾಗಿಯನ್ನು ಉಪಯೋಗಿಸುತ್ತಾರೆ. ಆದ್ದರಿಂದ ರಾಗಿಯ ರಿಸರ್ಚ್‌ಗೋಸ್ಕರ ಒಳ್ಳೆಯ ತಜ್ಞರನ್ನು ಇಟ್ಟು ಆ ವಿಷಯದಲ್ಲಿ ಸಂಶೋಧನೆಯನ್ನು ನಡೆಸಬೇಕು.

ಇನ್ನು ಸೆಟಿಂಗ್ ಆಫ್ ಸೀಡ್ ಫಾರಮ್ಸ್ ಅಂಡ್ ಡಿಸ್ಟ್ರಿಬ್ಯೂಷನ್ ಆಫ್ ಇಂಪ್ರೂವ್ಡ್ ಸೀಡ್ಸ್ ವಿಷಯದಲ್ಲಿ ಹೇಳುವುದಾದರೆ ಈಗ ನಮ್ಮ ತಾಲ್ಲೂಕಿನಲ್ಲಿಯೇ ಒಂದು ಸೀಡ್ ಫಾರಮ್ ಇದೆ. ಆ ಸೀಡ್ ಫಾರಮ್ ಮಾಡುವುದಕ್ಕೋಸ್ಕರ ತೆಗೆದುಕೊಂಡಿರತಕ್ಕ ಭೂಮಿ ಚೌಳು ಹಾಗೂ ಬಂಜರು ಜಮೀನು. ಅದಕ್ಕೆ ಸರ್ಕಾರದವರು ಬೇಕಾದಷ್ಟು ದುಡ್ಡನ್ನು ಖರ್ಚುಮಾಡಿದ್ದಾರೆ. ಆದರೂ ಸಹ ಅಲ್ಲಿ ಸಾಕಷ್ಟು ಉತ್ತಮವಾದ ಬೀಜವನ್ನು ತಯಾರು ಮಾಡಿ ಅವನ್ನು ರೈತರಿಗೆ ಹಂಚಿಲ್ಲ. ಸಾವಿರಾರು ರೂಪಾಯಿಗಳನ್ನು ಆ ಫಾರಮ್‌ಗೋಸ್ಕರ ಸರ್ಕಾರದವರು ಖರ್ಚುಮಾಡಿದ್ದಾರೆ. ಅದಕ್ಕೋಸ್ಕರ ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ ಸರ್ಕಾರದವರು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಸೀಡ್ ಫಾರಮ್‌ಗಳನ್ನು ಮಾಡುವುದಕ್ಕೆ ಬದಲಾಗಿ ಕೆಲವು ಒಳ್ಳೆಯ ರೈತರುಗಳನ್ನು ಆರಿಸಿಕೊಂಡು ಅವರಿಗೆ ಒಳ್ಳೆಯ ಬೀಜಗಳನ್ನು ಕೊಟ್ಟು ದುಡ್ಡನ್ನು ಕೊಟ್ಟು ಒಳ್ಳೆಯ ಬೀಜವನ್ನು ಉತ್ಪಾದನೆ ಮಾಡಿಸಿ ಸರ್ಕಾರದವರು ಆ ಬೀಜವನ್ನು ರೈತರಿಗೆ ಹಂಚುವುದಾದರೆ ಅದರಿಂದ ಅನುಕೂಲವಾಗುತ್ತದೆ. ಇನ್ನೊಂದು ಚಂದೋಳ ಫಾರಮ್ ಎನ್ನತಕ್ಕ ಒಂದು ಫಾರಮ್ ಇದೆ. ನಿಜವಾಗಿಯೂ ಅದನ್ನು ನೋಡಿದರೆ ಬಹಳ ಶೋಚನೀಯವಾಗುತ್ತದೆ. ಅದರಲ್ಲಿ ಬಹಳ ವೇಸ್ಟಾಗುತ್ತಿದೆ ಎಂದು ನಾನು ವಿಷಾದದಿಂದ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ.

ಇನ್ನು ಡಿಮ್ಯಾಂಡ್ ನಂಬರ್ 46ರಲ್ಲಿ ಇರಿಗೇಷನ್ ವಿಷಯದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾನು ಈ ಸಭೆಗೆ ಸದಸ್ಯನಾಗಿ ಬಂದು ಇಲ್ಲಿಗೆ ಸುಮಾರು ಎರಡೂವರೆ ವರ್ಷಗಳಾದುವು. ಇದುವರೆವಿಗೂ ಕೂಡ ನನ್ನ ಕ್ಷೇತ್ರದಲ್ಲಿ ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ಯಾವ ಒಂದು ಕಾರ್ಯವನ್ನೂ ಕೂಡ ತೆಗೆದುಕೊಂಡಿಲ್ಲ. ಆದರೆ ನನ್ನ ಪಕ್ಕದ ಕ್ಷೇತ್ರದ ಸದಸ್ಯರು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಡೆಪ್ಯುಟಿ ಮಿನಿಸ್ಟರಿದ್ದಾರೆ. ಅಲ್ಲಿಯ ಕೆಲಸ ಕಾರ್ಯಗಳಿಗೆ ರೆಕಾರ್ಡುಗಳೆಲ್ಲಾ ಬೇಗ ಬೇಗ ಓಡಾಡುತ್ತವೆ, ಎಸ್ಟಿಮೇಟು ಆಗುತ್ತವೆ, ಬೇಗ ಬೇಗ ಕೆಲಸಗಳೆಲ್ಲವೂ ಆಗುತ್ತಿವೆ. ಅಲ್ಲಿ ಹಿಂದೆ ಇದ್ದಂತಹ ಒಬ್ಬೀರಾಯನ ಕಾಲದ ಕೆಲಸಗಳನ್ನೆಲ್ಲಾ ಕಾರ್ಯರೂಪಕ್ಕೆ ತರುತ್ತಿದ್ದಾರೆ. ಈ ವಿಷಯದಲ್ಲಿ ನಾನು ಬರವಣಿಗೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇನೆ. ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಪಟ್ಟಿಯನ್ನು ಕೊಡಿ ನಾನು ಅವುಗಳನ್ನು ಮಾಡಿಸಿಕೊಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಈ ವಿಷಯದಲ್ಲಿ ಇದುವರೆಗೂ ಯಾವ ಕ್ರಮವನ್ನು ಕೈಗೊಂಡ ಹಾಗೆ ಕಾಣಲಿಲ್ಲ. ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಈ ಕೆಲಸಗಳನ್ನು ತೆಗೆದುಕೊಳ್ಳತಕ್ಕ ವಿಷಯದಲ್ಲಿ ಯಾವ ರೀತಿ ಮಾಡುತ್ತಾರೆಂದರೆ ಯಾವುದೋ ದಾಕ್ಷಿಣ್ಯಕ್ಕೆ ಒಳಗಾಗಿ ಕೆಲವು ಎಸ್ಟಿಮೇಟುಗಳನ್ನು ಮಾಡಿಸಿ ಕೆಲಸಗಳನ್ನು ಶುರು ಮಾಡುತ್ತಾರೆ ಆ ಮೇಲೆ ರಿಪ್ರಸೆಂಟೇಷನ್ ಮಾಡುತ್ತಾರೆ. ಎಂದರೆ ಕೆಲವು ಕೆಲಸಗಳಿಗೆ ಸಣ್ಣಪುಟ್ಟ ಎಸ್ಟಿಮೇಟುಗಳನ್ನು ಮಾಡುವುದು ಅವುಗಳನ್ನು ಕಾರ್ಯರೂಪಕ್ಕೆ ತರುವಾಗ ರಿವೈಸ್ಡ್ ಎಸ್ಟಿಮೇಟ್ ಮಾಡುವುದು ಈ ರೀತಿ ಮಾಡುತ್ತಾರೆ.

ಶ್ರೀ ಎಸ್. ಗೋಪಾಲ ಗೌಡ.—ರಂಧ್ರಾನ್ವೇಷಣೆ ಎಂದರೆ ಏನು, ಸ್ವಾಮಿ ?

ಶ್ರೀ ಸಿ. ಆರ್. ರಂಗೇಗೌಡ.—ಒಂದು ಸಣ್ಣ ರಂಧ್ರವನ್ನು ಕೊರೆದು ಅದನ್ನು ಕ್ರಮೇಣ ದೊಡ್ಡದಾಗಿ ಮಾಡುವಂತೆ ಮೊದಲು ಸಣ್ಣ ಮೊತ್ತಕ್ಕೆ ಅಂದಾಜನ್ನು ತಯಾರುಮಾಡಿ ಅದನ್ನು ಕ್ರಮೇಣ ದೊಡ್ಡದಾಗಿ ಮಾಡಿಕೊಳ್ಳುವುದು.

ಡಿಮ್ಯಾಂಡು 54ರಲ್ಲಿ ನೀರಾವರಿ ಬಾವಿಗಳಿಗೆ, ಅಣೆಕಟ್ಟುಗಳಿಗೆ, ಪಿಕಪ್ಪುಗಳಿಗೆ, ಹಣವನ್ನು ಕೊಟ್ಟಿದ್ದಾರೆ. ಪಂಪು ಸೆಟ್‌ಗಳ ಬಗ್ಗೆ ಹಿಂದೆ 46 ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. 2-4-63ರಲ್ಲಿ ಚುಕ್ಕೆಯ ಗುರುತಿಲ್ಲದ ಪ್ರಶ್ನೆಗೆ ಉತ್ತರ ಕೊಡುತ್ತ "No pumps were supplied since there was no request......" ಎಂದು ಹೇಳಿದ್ದಾರೆ. ಈಚೆಗೆ 6-7-64 ರಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಐದನೆಯ ಪಟ್ಟಿಯಲ್ಲಿ 139ನೆಯ ಪ್ರಶ್ನೆಗೆ ಉತ್ತರ ಕೊಡುತ್ತ "38 parties have already been supplied with power to the I. P. Sets" ಎಂದು ಹೇಳಿದ್ದಾರೆ. ಯಾವ ಅಧಿಕಾರಿ ಈ ಉತ್ತರಗಳನ್ನು ಕೊಟ್ಟಿದ್ದಾರೆಂದು ಗೊತ್ತಾಗುವುದಿಲ್ಲ. ಹಿಂದೆ 38 ಪಂಪು ಸೆಟ್ಟುಗಳನ್ನು ಕೊಟ್ಟಿದ್ದಾರೆ. ಅದನ್ನು ಯಾವ ರೀತಿ ಕೊಟ್ಟರು ಎಂದರೆ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಕಮೀಷನ್ ಬೇಸಿಸ್ ಮೇಲೆ ಪಂಪುಗಳನ್ನು ಕೊಟ್ಟರು. ಇದ ರಲ್ಲಿ ಇನ್ನೂ ಕೆಲವು ಪಂಪುಸೆಟ್‌ಗಳು ಉಳಿದಿವೆ. ಯಾರಿಗೆ ಬೇಕಾಗಿರಲಿ, ಬೇಡದೆ ಇರಲಿ ಬಲವಂತ ವಾಗಿ ಕೊಟ್ಟರು. ಅದರಲ್ಲಿ ಒಂದು ಪಂಪುಸೆಟ್ಟು ಕೂಡ ಕೆಲಸ ಮಾಡುತ್ತಿಲ್ಲ. ಮಾಗಡಿ ಟೌನ್‌ನಲ್ಲಿ ಹಣವಂತರ ಹತ್ತಿರ ಅವುಗಳನ್ನು ಅಡವಿಟ್ಟಿದ್ದಾರೆ. ಒಂದೂ ಕೆಲಸ ಮಾಡುತ್ತಿಲ್ಲ. ಇದನ್ನು ಸರ್ಕಾ ರದ ಗಮನಕ್ಕೆ ತರುತ್ತಿದ್ದೇನೆ.

ಹಿಂದಿನ ಬಡ್ಜೆಟ್ ಭಾಷಣದಲ್ಲಿ ಅರ್ಥ ಮಂತ್ರಿಗಳು ಉತ್ತರಕೊಡುತ್ತ ಅಕ್ಕಸಾಲಿಗರಿಗೆ ಬೇಕಾ ದಷ್ಟು ಅನುಕೂಲ ಮಾಡಿದ್ದೇವೆ, ಜಮೀನು ಕೊಟ್ಟಿದ್ದೇವೆ ಎಂದು ಹೇಳಿದರು. ಮಾಗಡಿ ತಾಲ್ಲೂಕಿನಲ್ಲಿ ರುವ ಒಬ್ಬ ಅಕ್ಕಸಾಲಿಗನಿಗೂ ಸಹ ಜಮೀನು ದೊರೆತಿಲ್ಲ. ಬರೀ 'ಲಿಪ್ ಸಿಂಪತಿ' ಆಗಿದೆ ಒಂದು ವೇಳೆ ಜಮೀನು ಕೊಟ್ಟರೂ ಕೂಡ ವ್ಯವಸಾಯ ಮಾಡಬೇಕಾದರೆ ಸುಲಭವಲ್ಲ. ವ್ಯವಸಾಯ ಮಾಡಬೇಕಾ ದರೆ ಎತ್ತು ಬೇಕು, ಗಾಡಿ ಬೇಕು, ನೇಗಿಲು ಬೇಕು. ಸುಮ್ಮನೆ ಜಮೀನು ಕೊಟ್ಟರೆ ಏನು ಪ್ರಯೋಜನ ? ಸರ್ಕಾರದವರು ಈ ವಿಷಯಗಳಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಸರ್ಕಾರ ದವರು ನೆರವು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀಮಾನ್ ಮಾದಪ್ಪಗೌಡರು ಸಾಯಿಲ್ ಕನ್‌ಸರ್ವೇಷನ್ ವಿಷಯ ಹೇಳಿದರು. ಹಳೇ ಮೈಸೂರಿನಲ್ಲಿ, ಈ ಕೆಲಸವನ್ನು ತೆಗೆದುಕೊಂಡಿಲ್ಲ. ಇದರಲ್ಲಿ ಅಘಾರ ಸ್ಟೇಷನ್ನಿಗೆ ಹತ್ತು ಲಕ್ಷ ರೂಪಾಯಿ ಕೇಳಿದ್ದಾರೆ. ಯಾವುದೋ ಗಿಡಗಳನ್ನು ಬೆಳಸುವುದರಿಂದ ಏನು ಪ್ರಯೋಜನವಾಗು ತ್ತದೆ ? ಇದರಿಂದ ಬೇಕಾದಷ್ಟು ಉತ್ಪತ್ತಿ ಬರಬೇಕಾದರೆ ಅಮರಾಯಿ ಫಸಲನ್ನು ಬಹಳವಾಗಿ ಆದಷ್ಟು ಬೇಗ ಬೆಳೆಯಬೇಕು. ಅವುಗಳಿಂದ ತಕ್ಷಣ ಉತ್ಪತ್ತಿ ಬಾರದೆ ಇದ್ದರೂ 10-15 ವರ್ಷ ವಾದ ಮೇಲೆ ಒಳ್ಳೆಯ ಉತ್ಪತ್ತಿ ಬರುತ್ತದೆ. ಎಣ್ಣೆ ಬೀಜಗಳು ದೊರೆಯುವ ಮರಗಳನ್ನು ಹೆಚ್ಚಾಗಿ ಬೆಳಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ನಾನು ಹೇಳಿರುವ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ತಾಲ್ಲೂಕಿನಲ್ಲಿ ಆಗಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—I have looked into the judgment referred to by Sri G. V. Gowda. Evidently he read something scrappy from what is called "Shorter Constitution of India" by Basu. It would not be wise to place much reliance on such remarks. That the budget could form a subject of discussion in a litigation before a High Court is something I could not comprehend. That is what seems to have happened. But the petition was rejected. It is a miscellaneous petition under article 226. Hence, I do not think that the contention of Sri G. V. Gowda is correct.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ) ಮಾನ್ಯ ಸಭಾಪತಿಗಳೇ, ಸಪ್ಲಿಮೆಂಟರಿ ಡಿಮಾಂಡುಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಕೆಲವು ಡಿಮಾಂಡುಗಳ ಬಗ್ಗೆ ನನ್ನ ಅನು ಭವ ಮತ್ತು ನಮ್ಮ ರಾಜ್ಯ ಸರ್ಕಾರದವರು ಇಲ್ಲಿಯವರೆಗೂ ಏನು ಮಾಡಿದ್ದಾರೆ ಮತ್ತು ಏನೇನು

ಕಾರ್ಯಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಒಂದೆರಡು ವಿಚಾರಗಳನ್ನು ತಿಳಿಯಪಡಿಸುತ್ತೇನೆ. ಈಗಾಗಲೇ ಕೆಲವು ಮಾನ್ಯ ಮಿತ್ರರು ಮಾತನಾಡಿದ್ದಾರೆ. ಈಗಿನ ಗಂಡಾಂತರ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯ ಆಹಾರದ ಕೊರತೆಯನ್ನು ಅನುಭವಿಸುತ್ತಿರುವಾಗ ನಮ್ಮ ಸರ್ಕಾರ ಒಕ್ಕಲುತನದ ಸಲುವಾಗಿ ಅಷ್ಟು ನಿಗಾ ಕೊಟ್ಟಿಲ್ಲ ಎನ್ನುವ ಮಾತು ಕಲವು ಮಟ್ಟಿಗೆ ಸಮಂಜಸ ಎನ್ನುವ ಭಾವನೆ ಬರುತ್ತದೆ. ಡಿಮಾಂಡ್ 38, 46, 54, ಇವುಗಳಲ್ಲಿ ಒಕ್ಕಲುತನದ ಸಲುವಾಗಿ ಹೆಚ್ಚು ಹಣವನ್ನು ಒದಗಿಸಿದ್ದಾರೆ. ಒಡ್ಡುಗಳ ಸಲುವಾಗಿ, ನೀರಾವರಿಯ ಸಲುವಾಗಿ ಮತ್ತು ಇತರ ಕಾರ್ಯಗಳ ಸಲುವಾಗಿ ಹಣವನ್ನು ಹೆಚ್ಚಾಗಿ ಒದಗಿಸಿದ್ದಾರೆ ಎನ್ನುವ ಒಂದು ಭಾವನೆ ಬರುತ್ತದೆ. ಹೆಚ್ಚು ಹಣವನ್ನು ಒಕ್ಕಲುತನದ ಕೆಲಸಗಳಿಗೆ ಉಪಯೋಗ ಮಾಡುವುದು ಸಮಂಜಸವಾದುದು. ಆದರೆ ಇಲ್ಲಿಯವರೆಗೂ ಸಾಧಿಸಿದ ಪ್ರಗತಿ ಚಿಂತಾಜನಕವಾಗಿದೆ. ನಮ್ಮ ಸರ್ಕಾರ ಒಡ್ಡು ಹಾಕುವ ಕೆಲಸಕ್ಕೆ ಲಕ್ಷ್ಯ ಕೊಟ್ಟಿದೆ ಎಂದು ಹೇಳಬೇಕಾಗಿದೆ. ಆದರೆ ಈ ಕೆಲಸದಲ್ಲಿ ಜಮೀನಿನ ಕಿಮ್ಮತ್ತು ಏನಿರುತ್ತದೆ ಅದಕ್ಕಿಂತ ಒಡ್ಡು ಹಾಕುವುದರ ಕಿಮ್ಮತ್ತು ಹೆಚ್ಚಾಗುತ್ತದೆ. ಹೀಗಾದರೆ ಏನು ಮಾಡುವುದು? ಬರಗಾಲ ಬಂದಾಗ ರಸ್ತೆ ಕೆಲಸವನ್ನು ತೆಗೆದುಕೊಳ್ಳುತ್ತಾರೆ. ಆದರೆ ಆ ರಸ್ತೆಗಳೆಲ್ಲ ಕೊಚ್ಚಿ ಹೋಗುತ್ತದೆ. ಒಡ್ಡುಗಳನ್ನು ಹಾಕುವ ಕೆಲಸದಲ್ಲಿ ಸಿಬ್ಬಂದಿಯ ಖರ್ಚನ್ನೂ ಸಹ ಜಮೀನು ಮಾಲೀಕರಿಂದ ತೆಗೆದುಕೊಳ್ಳುತ್ತಾರೆ. ಇದನ್ನು ರೈತರ ಮೇಲೆ ಹೊರಿಸುವುದು ಸರಿಯಲ್ಲ. ಇದರ ಕಡೆಗೆ ಸರ್ಕಾರ ಸ್ವಲ್ಪ ಲಕ್ಷ್ಯ ಕೊಡಬೇಕು.

ಡಿಮಾಂಡ್ 46 — ಇದು ಬಹಳ ಅವಶ್ಯವಾದುದು. ಬರಗಾಲ ಸಂಬಂಧದಲ್ಲಿ ಹೆಚ್ಚು ಚರ್ಚೆ ಮಾಡಿದ್ದೇವೆ. ಹಣಕಾಸಿನ ಮಂತ್ರಿಗಳು ಹೊಸ ಬಾವಿಗಳು, ಅಣೆಕಟ್ಟುಗಳು ಮತ್ತು ಸಣ್ಣ ಸಣ್ಣ ಕೆರೆಗಳ ಸಂಬಂಧದಲ್ಲಿ ಹೆಚ್ಚು ಹಣವನ್ನು ಒದಗಿಸಿದ್ದು ಸ್ವಾಗತಾರ್ಹ. ಆದರೆ ಹಣವನ್ನು ಖರ್ಚು ಮಾಡುವಾಗ ಮತ್ತು ಪಂಪುಗಳಿಗೆ, ಬಾವಿಗಳಿಗೆ ಹಣವನ್ನು ಒದಗಿಸುವಾಗ ಎಷ್ಟೋ ಜನ ಬಡವರಿಗೆ ಸಿಕ್ಕುತ್ತಿಲ್ಲ. ಐದಾರು ಎಕರೆ ಭೂಮಿ ಇದ್ದವರಿಗೆ ಇದರ ಉಪಯೋಗವಾಗಿಲ್ಲ. ಇಂಥ ಜನರೇ ನಮ್ಮ ರಾಜ್ಯದಲ್ಲಿ ಹೆಚ್ಚು ಇರುವಾಗ ಅವರಿಗೆ ಯಾವ ಸೌಲಭ್ಯವನ್ನು ಮಾಡಿಕೊಡುತ್ತೀರಿ ಎನ್ನುವುದನ್ನು ಹೇಳಬೇಕು. ನಾನು ಹಿಂದಿನ ಸಲ ಹೇಳಿದ್ದೇನೆ ಭೂಮಿಯ ಕಂದಾಯವನ್ನು ಪರಿಗಣಿಸಿ ಬಾವಿ ನೀರು ಬರುವುದಕ್ಕೆ ಸಾಧ್ಯವಿದ್ದರೆ ಬಾವಿಗೆ ಖರ್ಚು ಮಾಡಲಿಕ್ಕೆ ಅವರಿಗೆ ಹಣವನ್ನು ಕೊಡಿರಿ ಎಂದು. ಇಲ್ಲಿಯವರೆಗೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ಇತ್ತೀಚೆಗೆ ಹಿಂದೂಸ್ಥಾನ ಸರ್ಕಾರದಿಂದ ಈ ಸರ್ಕಾರದ ಕಡೆಗೆ ಬಾವಿಯ ಉಪಯೋಗವನ್ನು ಪಡೆಯುವ ಸಲುವಾಗಿ ಸಹಾಯ ಬಂದಿದೆ. ಅದರ ಪ್ರಕಾರ ಹಣ ಕೊಡುವಾಗ ಇವರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ.

ಇನ್ನು 20 ನೆಯ ಬೇಡಿಕೆಯಲ್ಲಿ ಭೂಮಿಯನ್ನು ಉತ್ತಮ ಪಡಿಸುವುದಕ್ಕೆ ಮತ್ತು ರಿಕ್ಲಮೇಷನ್‌ಗೆ ಹೆಚ್ಚಿನ ಹಣವನ್ನಿಟ್ಟಿದ್ದಾರೆ. ಘೋಣ ನದಿಯ ಪ್ರದೇಶದಲ್ಲಿ ಕಳೆದ ಅನೇಕ ವರ್ಷಗಳಿಂದ ಒಂದು ಒಂದೂವರೆ ಲಕ್ಷ ಎಕರೆ ಭೂಮಿ ಸೌಳಾಗಿದೆ. ಅದನ್ನು ಉತ್ತಮಗೊಳಿಸಬೇಕೆಂದು ಕೇಳುತ್ತಿದ್ದೇವೆ. ಆದರೆ ಇದುವರೆಗೂ ಏನೂ ಆಗಿಲ್ಲ. ಈ ಸಂಬಂಧವಾಗಿ ಎಲ್ಲಾ ಮಂತ್ರಿಗಳನ್ನೂ ಕಂಡಿದ್ದೇವೆ. ಆ ಭೂಮಿ ವ್ಯವಸಾಯಕ್ಕೆ ಅರ್ಹವಾಗಲು ಯಾವ ಗೊಬ್ಬರ ಹಾಕಬೇಕು ಅಥವಾ ಏನು ಮಾಡಬೇಕು ಎಂಬ ಬಗ್ಗೆ ಯಾವ ಸಲಹೆಯನ್ನೂ ಕೊಟ್ಟಿಲ್ಲ. ಈಗಾಗಲೇ ಸೀಡ್ ಫಾರಂ ಅಥವಾ ಬಿತ್ತನೆ ಫಾರಂಗಳ ವಿಷಯ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇಂತಹ ಫಾರಂ ಇರುವುದು ಅಗತ್ಯ. ಯಾವ ಭೂಮಿಯಲ್ಲಿ ಯಾವ ಬೆಳೆ ಬೆಳೆಯಬೇಕೆಂಬುದನ್ನು ಸೀಡ್ ಫಾರಂಗಳ ಮೂಲಕ ತಿಳಿಸುವುದು ಅಗತ್ಯ. ಧಾರವಾಡದಲ್ಲಿ ಒಂದು ಬಿತ್ತನೆ ಕೇಂದ್ರವಿದೆ. ಈಗ ಐದಾರು ವರ್ಷಗಳಿಂದ ಬಿತ್ತನೆ ಕೇಂದ್ರಗಳು ಹೆಚ್ಚಾಗಿವೆ, ಆದರೂ ಕೂಡ ಈಲ್ಡ್ ಅಥವಾ ಉತ್ಪನ್ನ ಕಡಮೆಯಾಗಿದೆ ಎನ್ನುವುದರ ಕಡೆ ಗಮನಕೊಡಬೇಕು. ವ್ಯವಸಾಯಗಾರರಿಗೆ ಹೆಚ್ಚು ಹಣ ಸಹಾಯ ಕೊಟ್ಟ ಮಾತ್ರಕ್ಕೆ ಮುಗಿಯಲಿಲ್ಲ. ಸರಕಾರದ ಉದ್ದೇಶವನ್ನು ಕಾರ್ಯಗತ ಮಾಡಬೇಕು. ಮಿಡತೆ ಹಾವಳಿ ಹೆಚ್ಚಾಗಿದೆ. ಇದರ ನಿವಾರಣೆಗೆಪರಿಣಾಮಕಾರಿಯಾದ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಹೀಗಾಗಿ ರೈತರ ಆರ್ಥಿಕ ಸ್ಥಿತಿ ಕಡಿಮೆಯಾಗುತ್ತಿದೆಯೇ ಹೊರತು ಹೆಚ್ಚುವುದಕ್ಕೆ ಅವಕಾಶವಾಗಿಲ್ಲ.

ಇನ್ನು 31 ನೆಯ ಬೇಡಿಕೆಯ ವಿಚಾರ, ಇನ್‌ವೆಸ್ಟಿಗೇಷನ್ ಶಾಖೆಯನ್ನು ಪ್ರಾರಂಭ ಮಾಡುವುದು ಒಳ್ಳೆಯದು. ಆದರೆ ಇನ್‌ವೆಸ್ಟಿಗೇಷನ್ ಯಾವ ರೀತಿ ಆಗುತದೆಂಬುದನ್ನು ನೋಡಬೇಕು. ತಜ್ಞರೂ, ಇಂಜಿನಿಯರುಗಳೂ ನಿವೇಶನವನ್ನು ಪರಿಶೀಲಿಸುತ್ತಾರೆ. ಒಂದು ಯೋಜನೆಯಲ್ಲಿ, ಆದರ ಆಮೇಲೆ ಅದನ್ನು ಬದಲಾವಣೆ ಮಾಡುತ್ತಾರೆ. ಹೀಗೆ ಇನ್‌ವೆಸ್ಟಿಗೇಷನ್‌ನಲ್ಲಿ ಅತೃಪ್ತಿಕರವಾಗಿ ಕೆಲಸ ನಡೆದರೆ ಅಥವಾ ಬೇರೆ ಕಾರಣಗಳಿಂದ ಬದಲಾವಣೆಯಾದರೆ, ಸುಮ್ಮನೆ ರೊಕ್ಕ ಖರ್ಚಾದರೆ ಅದು ಸದುಪಯೋಗವಾದಂತಾಗುವುದಿಲ್ಲ. ಈ ಉಪಯುಕ್ತ ಇಲಾಖೆಯನ್ನು ತೆರೆಯುವುದಕ

(ಶ್ರೀ ಎಸ್. ಎಂ. ಗುರಡ್ಡಿ)

ಅಭ್ಯಂತರ ಇಲ್ಲ; ಆದರೆ ಉಪಯುಕ್ತವಾದ ಕೆಲಸವೇನೂ ನಡೆಯದಿದ್ದರೇನು ಮಾಡುವುದು? ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

Sri V. S. PATIL (Belgaum I).—Sir, Demand No. 10 item 11, Demand No. 20 item 1 and Demand No. 48 are all to be considered as practically the same thing. These 3 items are based upon judgments of the courts and they are charged items which we have to pay, but we can only offer our remarks. This item 11 in Demand No. 10 appears to be rather strange. It appears to be an old matter. I do not know why this matter was dragging on in spite of the fact that our State was created on 1st November 1956 and now it is nearly 8 years and still this matter is pending.

Mr. SPEAKER.—It is no longer pending. The Supreme Court has decided.

Sri V. S. PATIL.—It is pending for payment and the ultimate amount mentioned on page 2 is Rs 38,421. That appears to be the liability imposed upon us by the High Court and the Supreme Court. Similarly, in other items also the liability has been thrown upon the Government for doing certain things. I should like to ask one thing. We have got our Law Department estabilished here. They are bound to give legal opinion on any matter of dispute between an individual and the Government. Before that individual is forced to go to a court of law, I feel that it is the duty of the Law Department to see whether the Government stand is tenable or not. If that stand is tenable, then alone we should encourage the fighting in these matters. If the stand is not tenable, why should the Government force the individual to go to a court of law and then obtain a decree against the Government which does not do any credit to the Government, but if the Government fail in a court of law it brings definite discredit to the administration. In this particular case, when the High Court decided against this Government, why should they go on fighting in appeal to the Supreme Court? We know that to conduct a case in the Supreme Court is top heavy expenditure. I think even the initial expenditure is about Rs. 3,000 for printing, etc. When the case was not tenable, why did the Government go to the Supreme Court and incur this huge expenditure?

Mr. SPEAKER.—He is raising a very mighty big question which had better be raised and discussed during the budget discussion rather than during the diseussion of the supplementary demands.

Sri V. S. PATIL.—That is all right, but these are the instances which I want to quote and that is why I should like to suggest to Government that initially when a case is started, there must be some opinion obtained from the legal officers appointed by the Government either at the State level or at the district level. If those opinions are not upheld by courts of law, then I submit that those persons who had given those opinions must be punished in some way or the other.

Mr. SPEAKER.—It is a very bad test for many lawyears.

Sri V. S. PATIL.—I know of many instances and that is why I am saying this.

Mr. SPEAKER.—I do not say there is no force in his argument.

Sri V. S. PATIL.—There is a background to what I am saying. On a previous occasion the Hon'ble Law Minister stated on the floor of this House in connection with the appointments of Government Pleaders and Government Lawyers at the district level or even in the High Court, that these are political jobs and they would appoint anybody. He said this in answer to one of the questions and that is why I am asking this. If these are political jobs which this Government is distributing, that is the reason for the incompetency of these legal officers of the Government and we have to pay very heavily from our treasury. That is why merit alone must count and not party affiliations in making appointments. That is a wrong notion which this Government is following in appointing legal officers and that is the reason why we have been made to pay such huge amounts in courts. In this case this House is entitled to know the facts of this case of Bellary. What are the facts ? If our stand was not tenable why did they go to the High Court and the Supreme Court ?

Sri B. D. JATTI.—This is a case from Bombay.

Sri V. S. PATIL.—When the case was transferred to this Government, it was the duty of this Government to examine the facts and see whether the case is to be contested or whether we should accede to the request of the petitioner. This has not been done, but on the contrary they thought it fit to fight till the Supreme Court and incurred this heavy liability.

Then, Sir regarding item 12 and 13. The amount is mentioned as the amount for goldsmiths. We are entitled to know that even though the amount is coming from the centre that does not mean we are not entitled to know the actual facts. May we knnw what are the reliefs given to the goldsmiths ? the number who are benefitted and what is the amount spent for the relief ? All these things should be placed before the House before the Finance Minister asks us to vote.

5-00 P.M.

The next demand is 19. The work was ready on 2nd August 1963 and 28th September 1963. This question of expenditure ought to have been included in the budget estimates.

The next Demand is 20. Here for items 5,6,7,8,9 and 10, lumpums are given. No details have been supplied as to what these amounts represent, whether they represent service work and what they are going to do with these amounts and whether they are absolutely necessary. In this connection I should like to bring to the notice of the Minister that supplementary demands stands stand on the same footing as budget. We are entitled to know the detail for which the amounts are required. So, I fail to understand whether such kinds of demands can be placed before the House and whether they are in order. I submit to you that these demands will have to be deleted because they have not followed the procedure under law. We are entitled to know the details before we sanction the money. Are there any estimates ?

(SRI V. S. PATIL)

In item 2, reclamation of alkaline. What does this refer to? I do not understand. It is very difficult to know what extent of land they are going to reclaim and how much benefit is to be accrued to the State. Are we to blindly pass on these demands simply because the Government have placed before us these demands? I should like to tell the Minister that such vague items should not be placed before us. There must be full explanation for each demand.

Regarding Demand 23 - These marketing societies were created with the object that the cultivator must get good prices and consumers should get the articles at reasonable prices. That was the main intention of these marketing societies. Hon'ble members know how these societies are working. There is a society at Belgaum. I have seen the merchants though they get licence for the society, they form into a group and any article purchased is brought in that society for sale. They offer it for auction. When that auction takes place within that group no others can bid. Those cultivators do not get even market prices. I can give my own example. I had sent one bag full of "ladies' fingers"—Bendi. In the auction it fetched 14 annas for a bag. The purchaser cannot sell to outsider and the group formed by these merchants did not raise the prices. We all know that for 14 annas we cannot get a handful of this vegetable. This is the way the societies are working the detriment of the consumer and purchaser. So, something has to be done to see that these societies work up for the benefit of the purchaser as well as the consumer. But these middlemen are coming up and they are taking advantage. So, there is no use giving any grants to these societies.

As regards Demand No. 26, I fail to understand why this accelerated training scheme was started and later on they decided to wind it up after incurring this big amount. Why such a scheme was started without considering it in all its aspects and later on given up. That ought to be considered by this House.

Coming to Demand No 44, the funny thing is item 4 which deals with the formation of Mysore State Handicrafts Development Corporation as a private limited Joint Stock Company owned entirely by Government under the provisions of the Indian Companies Act. This was run by the Government and now it is handed over to a corporation. There are so many corporations and boards and their annual reports are placed before the House for discussion, but where is the time to discuss them? The same thing will happen with regard to this corporation also. Mr. Jatti will place its annual report before the House some time and nobody will look into it. This sort of creation of boards for their nominees to misappropriate public money is not congenial. We have got bitter experience in regard to the Khadi Board. This board or company business must be stopped by Government. They must think over investing public money in such matters.

†ಶ್ರೀ ಎಸ್ ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ; 1964—65ನೆ ವರ್ಷದ ಅಧಿಕ ಹಾಗೂ ಅನುಪೂರಕ ಅನುದಾನಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಮೊದಲನೆಯ ಕಂತನ್ನು ವಿರೋಧಿಸುತ್ತಾ, ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು, ಮುಕ್ಕಣ್ಣಪ್ಪನವರು, ಸುಂಠನ ಕರರು, ಜಿ. ವಿ. ಗೌಡರು ಮತ್ತಿತರರು, ಎಲ್ಲರೂ ಮಾತನಾಡಿ ಹೆಚ್ಚುಕಡಿಮೆ ಎಲ್ಲಾ ಐಟಮ್ಮುಗಳ ಮೇಲೂ ವಿವರವಾಗಿ ತಮ್ಮ ಟೀಕೆಗಳನ್ನು ಮಾಡಿದ್ದಾರೆ; ಪುನರಾವೃತ್ತಿ ಮಾಡುವುದು ನನಗೆ ಇಷ್ಟವಿಲ್ಲ.

ಸ್ವಾಮಿ, ನೂತನ ರಾಜ್ಯಪಾಲರು, ಈ ರಾಜ್ಯದ ರಾಜ್ಯಪಾಲ ಹುದ್ದೆಯನ್ನು ವಹಿಸಿಕೊಂಡ ವೇಳೆ, ಮೇಲ್ಮನೆ ಮತ್ತು ಈ ಮನೆ ಸದಸ್ಯರಿಗಲ್ಲದೇನೆ, ಹೊರಗಡೆಯೂ ಕೂಡ, ಒಂದು ಜನ ತಂತ್ರದ ಗಾಳಿ ಬೀಸಿ, ಸ್ವಲ್ಪ ರಾಜ್ಯಾಂಗಬದ್ಧವಾದ ಟೀಕೆಗಳನ್ನು ಮಾಡುವ ಒಂದು ಶಕ್ತಿ ಬಂದದ್ದು ಸ್ವಾಗತಾರ್ಹದ ವಿಷಯ ಅಂತ ಅನಿಸುತ್ತದೆ.

Mr. SPEAKER.—I won't allow any remark to be made on the conduct of the Governor.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಹಣಕಾಸಿನ ಮಂತ್ರಿಗಳು, ಹಿಂದಿನ ರಾಜ್ಯಪಾಲರು ಸರಕಾರದಿಂದ ಯಾವ ಸವಲತ್ತನ್ನೂ ಉಪಯೋಗಿಸಿಕೊಳ್ಳುತ್ತಾ ಇರಲಿಲ್ಲ ಅಂತ ಹೇಳಿದರು ; ಕಾರು ಗಳನ್ನೂ ಉಪಯೋಗಿಸಿಕೊಳ್ಳುತ್ತಿರಲಿಲ್ಲವೆಂತ ಹೇಳಿದರು. ರಾಜ್ಯಪಾಲರ ಹುದ್ದೆಗೆ ಸಂಬಂಧ ಪಟ್ಟಹಾಗೆ ಕಾರ್ಯಾಲಯಗಳು ಇದ್ದವು, ಸಿಬ್ಬಂದಿ ಇತ್ತು, ಇನ್ನೂ ಅನೇಕ ಸವಲತ್ತುಗಳು ಇದ್ದುವು. ಈ ಹುದ್ದೆಯನ್ನು ಹೊಸದಾಗಿ ಸೃಷ್ಟಿಮಾಡುತ್ತಾ ಇಲ್ಲ. ಈ ವಿಷಯದಲ್ಲಿ ನಾನು ಆಯವ್ಯಯ ಅಧಿವೇಶನದಲ್ಲಿ ಮಾತನಾಡುತ್ತಾ ಕೆಲವು ಅಂಶಗಳ ಕಡೆ ಸರಕಾರದ ಗಮನವನ್ನು ಸೆಳೆದಿದ್ದೆ, ಈ ಐಟಂಗಳ ಖರ್ಚು ಸರಕಾರದ ಮೇಲೆ ಏಕೆ ಬೀಳುತ್ತೆ? ಪುನಃ ಹಿಂದೆ ಇನ್ನೊಂದು ವಿಷಯ ಆಗ ಪ್ರಸ್ತಾಪಮಾಡಿದ್ದೆ. ಬೆಂಗಳೂರು ಅರಮನೆಯನ್ನು 4ಕೋಟಿ ರೂಪಾಯಿಗಳಿಗೆ ಮೈಸೂರು ರಾಜ್ಯ ಸರಕಾರ ಕೊಳ್ಳಬೇಕು ಅಂತ ಹೇಳಿ ಮಾತುಕತೆನಡೆಸಿದೆ ಎಂದು ಪತ್ರಿಕೆಯಲ್ಲಿ ಬಂದಿದೆಯೆಂದು. ಈ ವಿಷಯ ಪ್ರಸ್ತಾಪಮಾಡಿದಾಗ, ಒಂದು ಸಲ ಮಾನ್ಯ ಮುಖ್ಯ ಮಂತ್ರಿಗಳು ಅದು ಎಲ್ಲಾ ಕೇವಲ ಊಹಾಪೋಹ ಅಂತ ಹೇಳಿದ್ದರು ಈ ಮನೆಯಲ್ಲಿ. ನಿಜ. ಬೆಂಗಳೂರಿನಲ್ಲಿ ರಾಜ್ಯಪಾಲರಿಗಾಗಿ ಒಂದು ಕಾರ್ಯಾಲಯ ಮತ್ತು ಒಂದು ವಾಸದ ಮನೆ ಇಲ್ಲ ಅನ್ನುವ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಈಗ ಆ ರೀತಿ ವ್ಯವಸ್ಥೆ ಇಲ್ಲದೆ ಕೆಲವು ಅನಾನುಕೂಲಗಳು ಆಗಿರಬಹುದು ಅಂತ ಕೂಡ ಭಾವಿಸುತ್ತೇನೆ. ಆದರೆ 20 ಲಕ್ಷ ರೂಪಾಯಿಗಳಲ್ಲಿ ಹೊಸದಾಗಿ ಕಟ್ಟಡವನ್ನು ಕಟ್ಟಬೇಕೆಂದು ಅಥವಾ......

Mr. SPEAKER.—There is no such demand before the House.

ಶ್ರೀ ಎಸ್. ಗೋಪಾಲಗೌಡ.—ಇರುವ ಕಟ್ಟಡಕ್ಕೇ ರೆನೋವೇಶನ್ ಅಥವ ರಿಪೇರಿ ಮಾಡಬೇಕು ಮತ್ತು ಕೆಲಸವನ್ನು ಮೈಸೂರು ಸರಕಾರ ತೆಗೆದುಕೊಳ್ಳಬೇಕು ಅಂತ ಭಾವಿಸಿ, ಆ ಬಗ್ಗೆ ಕೆಲವು ಎಸ್ಟಿಮೇಟುಗಳು ಆಗಿದ್ದುವು. ಆದರೆ ಜನತಂತ್ರದ, ಪ್ರಜೆಗಳ, ಜನರ ಅಭಿಪ್ರಾಯ ಸ್ವಲ್ಪ ಪ್ರಕಟ ವಾಗಿ ಬಂದದ್ದರಿಂದ, ಹಾಗೂ ಪತ್ರಿಕೆಗಳಲ್ಲಿ ಪ್ರತಿಭಟನೆ ಬಂದುದರಿಂದ, ಎಲ್ಲ ಕಡೆಯಿಂದಲೂ ಪ್ರತಿ ಭಟನೆ ಬಂದದ್ದರಿಂದ ಆ ಕೆಲಸವನ್ನು ಹಿಂದಿಟ್ಟು, ಈ ಒಂದು ಬೇಡಿಕೆಯಲ್ಲಿ ಅದನ್ನು ಸೇರಿಸಿಲ್ಲ. ಆದಾಗ್ಯೂ ಶ್ರೀ ಮುಕ್ಕಣ್ಣಪ್ಪನವರು ಹೇಳಿದ ಹಾಗೆ, ಮುಗುಮ್ಮಾಗಿ ಕೆಲವು ಬೇಡಿಕೆಗಳನ್ನು ಸೇರಿಸಿ ಕೊಂಡಿದ್ದಾರೆ. ನೀರಿಗೆ 50,000, ಗಾರ್ಡನ್ನುಗಳಿಗೆ 50,000, ಇಂಪ್ರೂಮೆಂಟಿಗೆ 50,000, ರಿಪೇರಿಗಳಿಗೆ 50,000 ರೂಪಾಯಿ, ಎರಡು ಲಕ್ಷ ರೂಪಾಯಿಗಳನ್ನು ಈ ರೀತಿ ಇಟ್ಟುಕೊಂಡಿದ್ದಾರೆ; ವಿವರಗಳನ್ನು ಕೊಡುತ್ತಾ ಇಲ್ಲ. ನಾನು ಆಯವ್ಯಯ ಅಧಿವೇಶನದಲ್ಲಿ ಮಾತನಾಡುವಾಗಲೂ ಹೇಳಿದೆ. ಕೆಲವು ಲಂಪ್‌ಸಮ್ ಐಟಮುಗಳು ಅಂತ ಹೇಳಿ ಇಟ್ಟುಕೊಂಡಿದ್ದು, ಚಿಕ್ಕ ಗುರ್ತು ಗಳನ್ನು ಹಾಕಿಕೊಂಡು, ಕೆಲಸಗಳನ್ನು ನಿಮ್ಮನಿಮ್ಮ ಅನುಕೂಲಗಳಿಗೆ ತಕ್ಕಂತೆ ಬದಲಾ ಯಿಸಿಕೊಳ್ಳುವುದು, ಆವಾಗ ಹಣವನ್ನೂ ಬದಲಾಯಿಸಿಕೊಳ್ಳುವುದು, ಇದರಿಂದ ಭ್ರಷ್ಟಾಚಾರಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ ಮತ್ತು ಕೆಲಸಗಳ ಅಗತ್ಯತೆಯನ್ನು ಅನುಸರಿಸಿ ನೀವು ಈ ಹಣವನ್ನು ಖರ್ಚು ಮಾಡುವುದಿಲ್ಲ ಅನ್ನುವುದನ್ನು ಹೇಳಿದ್ದೆ. ಇಲ್ಲಿಯೂ ಮತ್ತೆ ಹೆಚ್ಚಿಗೆ ಹಣವನ್ನು ಕೇಳಿದ್ದೀರಿ. ವೈಯಕ್ತಿಕವಾಗಿ ರಾಜ್ಯಪಾಲರ ಬಗ್ಗೆ ಯಾರೂ ಮಾತನಾಡಲಿಲ್ಲ. ಅದನ್ನು ಯಾರೋ ಕಾಂಗ್ರೆಸ್ ಸದಸ್ಯರು ಮಾತನಾಡುತ್ತಾ ಕೆಲವೊಂದು ಆ ರೀತಿ ಅಭಿಪ್ರಾಯವನ್ನು ಹೇಳಿದರು ; ಆ ಅಭಿಪ್ರಾಯ ಯಾರಿಗೂ ಇಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ.

(ಶ್ರೀ ಎಸ್. ಗೋಪಾಲ ಗೌಡ)

ಹಣಕಾಸಿನ ಗಭೀರ ಪರಿಸ್ಥಿತಿ ಇರುವಾಗ, ಈ ದೇಶದಲ್ಲಿ ಆಹಾರ ಧಾನ್ಯಗಳ ಬೆಲೆ ಪ್ರತಿದಿನ ಏರುತ್ತಾ ಇರುವುದರಿಂದ, ನಿರುದ್ಯೋಗ ಇರುವುದರಿಂದ ಮತ್ತು ಅನೇಕ ತೊಂದರೆಗಳು ಇರುವುದರಿಂದ ಸರ್ಕಾರ ಹೊಸದಾಗಿ ಹೇಳತಕ್ಕ ಅನೇಕ ಕಂದಾಯಗಳನ್ನು ಜಾರಿಗೆ ಕೊಡುವುದಕ್ಕೆ ಆಗದೇ ಅಂತಹವುಗಳ ಮೇಲೆ ರೈತರು ಪ್ರತಿಭಟನೆ ಮಾಡುತ್ತಾ ಇರುವುದರಿಂದ ಇಂತಹ ಸನ್ನಿವೇಶದಲ್ಲಿ ಹಣಕಾಸನ್ನು ಯಾವ ರೀತಿ ಖರ್ಚು ಮಾಡಬೇಕೆನ್ನುವುದು ಈಗಾಗಲೇ ಸರ್ಕಾರದವರಿಗೆ ಮನದಟ್ಟು ಆಗಿರಬೇಕಾಗಿತ್ತು. ಇವತ್ತು ದೇಶದಲ್ಲಿರುವ ಅಭಾವ ಮತ್ತು ಕ್ಷಾಮ ಪರಿಸ್ಥಿತಿ ಪರಿಹಾರದ ಬಗ್ಗೆ, ನಿರುದ್ಯೋಗದ ಬಗ್ಗೆ ಜನರಿಗೆ ಅಗ್ಗದ ಬೆಲೆ ಅಂಗಡಿಗಳನ್ನು ತೆರೆದು ಅವರಿಗೆ ಏನಾದರೂ ನೆರವು ನೀಡುವ ಬಗ್ಗೆ ಈ ಸರ್ಕಾರ ಏನಾದರೂ ಹೆಚ್ಚುವರಿ ಬೇಡಿಕೆಗಳನ್ನು, ಹಣ ಬೇಕು, ನಾವಿದನ್ನು ನಿರೀಕ್ಷೆ ಮಾಡಿರಲಿಲ್ಲ ಎಂದು ಹೇಳಿ ಬೇಡಿಕೆಯನ್ನು ತಂದಿದ್ದರೆ ಬಹುಶಃ ಈ ಸಭೆಯಲ್ಲಿ ವಿರೋಧ ಬರುತ್ತಿರಲಿಲ್ಲ ಎಲ್ಲರೂ ಸ್ವಾಗತ ಮಾಡಬೇಕಾಗಿತ್ತು. ಆದರೆ ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಇರತಕ್ಕ ಬೇಡಿಕೆಗಳನ್ನು ನಾವು ಒಂದೊಂದನ್ನಾಗಿ ಪರಿಶೀಲಿಸಿದ್ದೇ ಆದರೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಅವರ ಮಂತ್ರಿಮಂಡಲ ಈ ಯೋಜನೆಯನ್ನು ನಡೆಸಿಕೊಂಡು ಹೋಗುವುದು ಮತ್ತು ಈ ಸರ್ಕಾರದ ಭಾರವನ್ನು ಹೊರುವುದಕ್ಕೆ ಶಕ್ತರಾಗಿಲ್ಲ ಎನ್ನುವುದನ್ನು ಇದೇ ಎತ್ತಿ ತೋರಿಸುತ್ತದೆ. ಇದಕ್ಕೆ ಉದಾಹರಣೆಗಳನ್ನು ಕೊಡಬಹುದು, ಇಲ್ಲಿರುವ ಐಟಂಗಳಲ್ಲಿ ಕೋರ್ಟಿಗೆ ಹೋದ ವಿಷಯ ಶ್ರೀಮಾನ್ ಪಾಟೀಲ್ ಅವರು ಹೇಳಿದ್ದಾರೆ. ಹಾಗೆಯೇ ಬೇರೆ ವಿಷಯಗಳನ್ನು ಕೆಲವು ಸದಸ್ಯರು ವಿವರವಾಗಿ ಹೇಳಿದ್ದಾರೆ. ಇದರಿಂದ ಅಸಮರ್ಥತೆ ಎದ್ದು ಕಾಣುವುದಲ್ಲದೆ ಇಲಾಖೆಗಳಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲ ಎಂಬುದೂ ಕೂಡ ಕಂಡುಬರುತ್ತದೆ. ಮತ್ತು ಸಾರ್ವಜನಿಕ ಅಂದಾಜು ಲೆಕ್ಕ ಸಮಿತಿ ವರದಿ ಮೇಲೆ ಮಾತನಾಡುತ್ತಾ ಅವರು ಅವರ ಮಾತುಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾರೆ ಹೆಚ್ಚುವರಿ ಬೇಡಿಕೆಗಳನ್ನು ತರುವಾಗ ಮುಖ್ಯವಾಗಿ ಯೋಜನೆಯ ಹಣದಲ್ಲಿ ಉಳಿಯುವಂತೆ ಮಾಡಿದರೆ ಅದು ತಪ್ಪಾಗುತ್ತದೆ ಎಂದು ಹೇಳಿ ಅವರು ಹೇಳಿದ್ದನ್ನೇ ನಾವು ಮತ್ತೆ ಹೇಳಿದ್ದೇವೆ. ಇವತ್ತು ಹೆಚ್ಚುವರಿ ಬೇಡಿಕೆಗಳನ್ನು ತರುವ ಹವ್ಯಾಸ ಏನಿದೆ ಇದು ಸಾಮಾನ್ಯವಾಗಿ ಔಪಚಾರಿಕವಾದ ಒಂದು ಕೆಲಸವೇನೋ ಅನ್ನುವ ರೀತಿಯಲ್ಲಿ ಒಂದು ಅಭಿಪ್ರಾಯ ಮುಖ್ಯವಾಗಿ ಮಂತ್ರಿಮಂಡಲ ನಡೆಸುವವರಲ್ಲಿ ಮತ್ತು ಜವಾಬ್ದಾರಿ ಹೊತ್ತಿರತಕ್ಕ ಅಧಿಕಾರಿಗಳಲ್ಲಿ ಬಂದಿರುವಂತೆ ಕಾಣುತ್ತದೆ. ಮಾನ್ಯ ಪಾಟೀಲ್ ಅವರು ಹೇಳಿದರು ಅಂತಹ ತಪ್ಪು ಅಭಿಪ್ರಾಯಗಳನ್ನು ಸರ್ಕಾರದವರಿಗೆ ಕೊಟ್ಟು ಪ್ರತಿಯೊಂದು ಕೇಸಿನಲ್ಲೂ ಹೈಕೋರ್ಟು, ಸುಪ್ರೀಂ ಕೋರ್ಟಿಗೆ ಹೋಗತಕ್ಕ ಹವ್ಯಾಸ ಮುಂದುವರಿಸಿಕೊಂಡು ಹೋಗುವುದಕ್ಕೆ ಯಾರು ಸಹಾಯ ಮಾಡುತ್ತಾರೆ ಅಂತಹವರಿಗೆ ಶಿಕ್ಷೆಯಾಗಬೇಕೆಂದು ನಾನಾದರೂ ಹೇಳುತ್ತೇನೆ. ಸ್ವಾಮಿ ಒಂದು ಇಲಾಖೆಯ ಮುಖ್ಯಸ್ಥ ಇಂತಹ ವಿಷಯಗಳ ಬಗ್ಗೆ ನಿಗಾ ವಹಿಸದಿದ್ದರೆ ಅಂತಹವನನ್ನು ಸಲೀಸಾಗಿ—ಡೈರೆಕ್ಟರು ಎಂದು ಏನು ನಾವು ಹೇಳುತ್ತೇವೆ ಅವನನ್ನು ಅದೇ ಇಲಾಖೆಯಲ್ಲಿ ಸಾಮಾನ್ಯ ನಾಲ್ಕನೆಯ ದರ್ಜೆ ಕೆಲಸಕ್ಕೆ ಕಳುಹಿಸಬಹುದು—ಬೇಕಾದರೆ ಅವನಿಗೆ ಅದೇ ಸಂಬಳ ಕೊಡಿ, ಅವನು ಆ ಜನರ ಜೊತೆಯಲ್ಲಿ ಕೆಲಸ ಮಾಡಿಕೊಂಡು ಇರಲಿ ಎರಡು ವರ್ಷ. ಯಾವಾಗಲಾದರೂ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ತೆಗೆದುಕೊಳ್ಳಬಹುದು. ಹತ್ತು ಲಕ್ಷ ಈ ಕಡೆ ಹತ್ತು ಲಕ್ಷ ಆ ಕಡೆ ಅದಕ್ಕೆ ಇದಕ್ಕೆ ಹಾಕಬಹುದು ಎಂಬ ಅಭಿಪ್ರಾಯ ಇವತ್ತು ಈ ರಾಜ್ಯದಲ್ಲಿ ಮತ್ತು ಹೊರಗಡೆ ಕಂಡು ಬರುತ್ತಾ ಇರುವಂತೆ ಕಾಣುತ್ತದೆ. ಇದನ್ನು ತಡೆಗಟ್ಟದಿದ್ದರೆ ಈ ಮನೆಯಲ್ಲಿ ಹಣಕಾಸಿನ ಬಗ್ಗೆ ಏನು ರಾಜ್ಯಾಂಗ ಒಂದು ಹತೋಟಿಯನ್ನು ಈ ಮನೆಗೆ ಕೊಟ್ಟಿದೆ ಅದು ಹೋಗುತ್ತದೆ ಎಂದು ನಾನು ಭಯಪಟ್ಟು ಎಚ್ಚರಿಕೆಯ ಮಾತನ್ನು ಆಡಬೇಕಾಗಿದೆ. ತಾವು ಹೇಳುತ್ತೀರಿ ತಮ್ಮ ಮಾತನ್ನು ಒಪ್ಪುತ್ತೇನೆ. ಹಣಕಾಸಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಮನೆಯಲ್ಲಿ ಮೊದಲು ಮಂಡಿಸಬೇಕು ಮೇಲ್ಮನೆಯಲ್ಲಿ ನಂತರ ಮಂಡಿಸಬೇಕು, ಚರ್ಚೆ ಮೊದಲು ಅಲ್ಲಿ ನಡೆದರೆ ಅದು ಪತ್ರಿಕೆಯಲ್ಲಿ ಬಂದು ಅದನ್ನು ಗಮನಿಸಬೇಕಾದ ಅಗತ್ಯವಿಲ್ಲ, ಅದರಲ್ಲೇನೂ ತಪ್ಪು ಇಲ್ಲ ಎಂದು ತಾವು ಹೇಳುತ್ತೀರಿ. ಅದು ಸರಿ ಎಂದು ಇಟ್ಟುಕೊಂಡರೆ ಇವತ್ತು ಈ ಮನೆಗೆ ಹಣಕಾಸಿನ ಮೇಲೆ ವಿಶೇಷವಾದ ಹತೋಟಿಯನ್ನು ಇಟ್ಟುಕೊಳ್ಳಬೇಕೆಂದು ಹೇಳಿ ರಾಜ್ಯಾಂಗ ಏನು ನಿರೀಕ್ಷಿಸುತ್ತದೆ ಆ ಕರ್ತವ್ಯವನ್ನು ನಾವು ಕಾಯಾವಾಚಾಮನಸಾ ಮಾಡಬೇಕಾಗುತ್ತದೆ ಎಂಥ ಸಂದರ್ಭವಲ್ಲಾದರೂ ಹಣಕಾಸಿನ ಬಗ್ಗೆ ಸಾಕಾದಷ್ಟು ನಿಗಾವಹಿಸತಕ್ಕ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ಇಲ್ಲಿ ಹಣ ಖರ್ಚಾದ ಮೇಲೆ ನಮ್ಮ ಟೀಕೆಗೆ ಏನೂ ಅರ್ಥ ಇರುವುದಿಲ್ಲ.

ಸುವರ್ಣ ನಿಯಂತ್ರಣದ ಆಜ್ಞೆ ಬಂದದ್ದರಿಂದ 9 ಜನಕ್ಕೆ ಕೆಲಸ ಸಿಕ್ಕಿದ ಹಾಗೆ ಆಯಿತು. ಸೂಪರಿಂಟೆಂಡೆಂಟ್, ಸೀನಿಯರ್ ಅಸಿಸ್ಟೆಂಟ್ಸ್, ಜೂನಿಯರ್ ಅಸಿಸ್ಟೆಂಟ್ಸ್, ಸ್ಟೆನೋಗ್ರಾಫರ್‌ನಿಂದ ಹಿಡಿದು ದಫೇದಾರ್‌ವರೆಗೂ ಎಲ್ಲಾ ಇದೆ. ಈ ಆಫೀಸು ತಮ್ಮ ಆಫೀಸಿನ ಪಕ್ಕದಲ್ಲಿ ಇದೆಯೇ? ಇದು ಎಲ್ಲಿ ಇದೆ ?

ಇನ್ನು ಬೇಡಿಕೆ 54ರಲ್ಲಿ ಸುವರ್ಣ ಖಾತೆಗೆ ಕೆಲವು ಹಣವನ್ನು ಇಟ್ಟಿದ್ದೀರಿ, ರೀಹ್ಯಾಬಿಲಿಟೇಷನ್ ಆಫ್ ಡಿಸ್‌ಪ್ಲೇಸ್ಡ್ ಗೋಲ್ಡ್ ಸ್ಮಿತ್ಸ್ ಎಂದು ಹೇಳಿ 15 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಸುವರ್ಣಗಾರರ ಸ್ಥಿತಿ ಇವತ್ತು ಏನಾಗಿದೆ ಅವರಿಗೆ ಯಾವ ತರಹದ ಸಹಾಯವನ್ನು ಮಾಡಿದ್ದೀರಿ ಎಂಬುದನ್ನು ತಾವೇನಾದರೂ ವಿಚಾರ ಮಾಡಿ ನೋಡಿದರೆ ತುಂಬಾ ಶೋಚನೀಯ ಪರಿಸ್ಥಿತಿ ಇವೆ. ಈ ಸುವರ್ಣ ಆಜ್ಞೆಯಿಂದ ಬಂಗಾರದ ಮೇಲೆ ಹತೋಟಿಯನ್ನು ಇಟ್ಟುಕೊಳ್ಳಬೇಕು, ಕಳ್ಳಬಂಗಾರ ದೇಶಕ್ಕೆ ಬರದಂತೆ ಮಾಡಬೇಕು, ಕಳ್ಳ ವ್ಯಾಪಾರವನ್ನು ತಡೆಗಟ್ಟಬೇಕು, ಅದರ ಮೇಲೆ ನಿಯಂತ್ರಣ ವನ್ನು ಇಟ್ಟುಕೊಳ್ಳಬೇಕು ಎಂದು ಹೇಳಿ ಯಾವ ಒಂದು ಆಜ್ಞೆಯನ್ನು ಮಾಡಿದಿರಿ ಅದನ್ನು ಯಾವುದೇ ರೀತಿಯಲ್ಲೂ ಕಾರ್ಯಗತ ಮಾಡುವುದಕ್ಕೆ ಸರ್ಕಾರದವರಿಗೆ ಆಗಿಲ್ಲ. ಇದರಿಂದ ಒಂದೇ ಒಂದು ಪರಿಣಾಮವಾದದ್ದು ಎಂದರೆ ಲಕ್ಷಾಂತರ ಜನರು ಯಾವ ಈ ಒಂದು ಕಸಬನ್ನು ಮಾಡಿ ಜೀವನವನ್ನು ಮಾಡುತ್ತಾ ಇದ್ದರು, ಒಡವೆಗಳನ್ನು ಮಾಡಿ ಮಾರಾಟ ಮಾಡಿ ಜೀವನ ಮಾಡುತ್ತಾ ಇದ್ದರು ಅವರ ಹೊಟ್ಟೆಯ ಮೇಲೆ ಸರ್ಕಾರ ಹೊಡೆದಂತೆ ಆಯಿತೇ ಹೊರತು ಬಂಗಾರದ ಒಂದು ಮಾರಾಟದಲ್ಲಿ ಆಗುತ್ತಾ ಇದ್ದ ಭ್ರಷ್ಟಾಚಾರವನ್ನು ತಡೆಗಟ್ಟಲು ಆಗಲಿಲ್ಲ. ಬೆಂಗಳೂರಿನಲ್ಲಿ ಒಂದು ಕಡೆ ಹಿಡಿದೆವು ಎಂದು ಹೇಳಿದಿರಿ ಆದರೆ ಆ ಅಪಾರ ಬಂಗಾರ ಎಲ್ಲಿ ಹೋಯಿತು? ಅದು ಏನಾಯಿತು ಎಂದು ಕೇಳಿ ನಾನು ಒಂದು ಪ್ರಶ್ನೆ ಕೊಟ್ಟೆ ಅದಕ್ಕೆ ಉತ್ತರ ಬರಲಿಲ್ಲ. ಅದು ಭೂಗತವಾಯಿತು. ಈಗಲೂ ಕೆಲವರನ್ನು ಹಿಡಿಯಬಹುದು, ಶೋಧಿಸಬಹುದು ಎಂದು ತೋರುತ್ತದೆ. ಈ ಅಪಾರ ಬಂಗಾರ ಎಲ್ಲಿ ಹೋಯಿತು, ಎಷ್ಟು ಸರ್ಕಾರದ ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು, ಏನಾಗಿದೆ, ವ್ಯವಸ್ಥಿತವಾಗಿ ಎನ್ನುವುದನ್ನು ಇವತ್ತು ಸರ್ಕಾರದವರಿಗೆ ಕೇಳ ಬಯಸುತ್ತೇನೆ. ನಿಜವಾಗಿಯೂ ನೀವು ಇವತ್ತು ಕೇಳುತ್ತಾ ಇರುವ ಹಣವನ್ನು ಅವರಿಗೆ ಕೋ ಆಪರೇಟೀವ್ಸ್ ಮೂಲಕ ಮನೆಯಲ್ಲಿ ಕೈಗಾರಿಕೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಹಾಗೂ ಅವರು ಬೇರೆ ಅವರಿಗೆ ಸಂಬಂಧಪಟ್ಟ ಉದ್ಯಮಗಳಲ್ಲಿ ನೆಲಸಿ ಅವರ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಹಾಯ ಮಾಡದೇ ಹೋದರೆ ಬಹಳ ಜನರು ಈಗಾಗಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ಅನೇಕರು ಬೀದಿಯ ಬಿಕಾರಿಗಳಾಗಿ ಅಲೆಯತಕ್ಕ ಪರಿಸ್ಥಿತಿ ಬರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ರಿಸರ್ಚ್ ಸ್ಕೀಮ್‌ ಬಗ್ಗೆ ಮೂಡಿಗೆರೆ ವಿಷಯ ಹೇಳಿದ್ದೀರಿ. ತಮ್ಮ ಡೈರೆಕ್ಟೋರೇಟ್ ತಮ್ಮ ಕಾರ್ಯಾಲಯ ಹೇಗೆ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಇದು ಒಂದು ನಿದರ್ಶನ ಅಷ್ಟೆ. ಅವರಿಗೆ ಯಾವುದೂ ಬೇಡ ಅವರ ಸ್ಥಿತಿಗತಿಗಳು ಗಟ್ಟಿಯಾಗಿದ್ದರೆ ಸಾಕು, ಸಂಬಳ ಬರುತ್ತಾ ಇದ್ದರೆ ಸಾಕು, ರಿಸರ್ಚ್ ನಡೆಯಲಿ ನಡೆಯದೇ ಇರಲಿ ಅಂತೂ ಅವರು ಈ ಯೋಜನೆಗಳಲ್ಲಿ ಕೆಲಸ ಮಾಡಿ ಕೊಂಡು ಹೋಗುತ್ತಾ ಇರುತ್ತಾರೆ. ಇನ್ನು ಕೇಂದ್ರದಿಂದ ಒಂದಷ್ಟು ಹಣ ಬಂದಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕಂದಾಯದ ಮಂತ್ರಿಗಳು ಬಹಳ ಹೆಮ್ಮೆಯಿಂದ ಹೇಳಿ ಕೊಂಡರು, ನಮ್ಮ ದುರಾದೃಷ್ಟವಶಾತ್, ಹೋಗಲಿ-ಅದೃಷ್ಟವಶಾತ್ ಎಂತಲೇ ಹೇಳುತ್ತೇನೆ ಅವರು 265 ಲಕ್ಷ ರೂಪಾಯಿಗಳನ್ನು ನಮಗೆ ಕೊಟ್ಟರು ಎಂದು ಹೇಳಿದರು. ನಾನು ಹೇಳುವುದಾದರೆ ಹೊರ ಗಡೆ ಕೇಂದ್ರದಲ್ಲಿ ಯಾರಿದ್ದಾರೆ ಅವರನ್ನು ದೇವತೆಗಳು ಎಂದು ನಮ್ಮ ಜನ ತಿಳಿದುಕೊಂಡಿದ್ದಾರೆ, ಅದು ಬಹಳ ದೊಡ್ಡ ತಪ್ಪು ದೆವ್ವಗಳೂ ಕೂಡ ಅಲ್ಲಿ ಇವೆ. ಈ ಯೋಜನೆಗಳಲ್ಲಿ ಎಷ್ಟೋ ಸಲ ನೋಡಿ ದ್ದೇವೆ ವರ್ಷದ ಆಖೈರಿನಲ್ಲಿ ಲಕ್ಷ ಗಟ್ಟಲೆ ರೂಪಾಯಿಗಳನ್ನು ಮೈಸೂರು ಸ್ಟೇಟ್‌ಗೆ 20 ಲಕ್ಷ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳಿ ಕೊಡುತ್ತಾರೆ.

5-30 P.M.

ಕೇಂದ್ರದಿಂದ ಹಣ ಬಂದಿದೆ ಅದಕ್ಕೋಸ್ಕರ ಅಪ್ರೋಪ್ರಿಯೇಷನ್ ಎಂದು ಹೇಳುತ್ತಾರೆ, ಅದು ನಿಜವೇ ಹೌದು. ಆದರೆ ಇದನ್ನು ನಡೆಸಿಕೊಂಡು ಹೋಗುವುದಕ್ಕೆ ಬಹಳ ಸಲ ಕಷ್ಟವಾಗುತ್ತದೆ. ಒಂದನ್ನು ತಾವು ನೋಡಬಹುದು ಬೇಡಿಕೆ 26ರ ಕಡೆಗೆ ತಮ್ಮ ಗಮನ ಸೆಳೆಯುತ್ತೇನೆ. ಅದರಲ್ಲಿ ಒಂದು ಪ್ರಯೋಗ ಮಾಡಿದ್ದಾರೆ. 1963—64ರಲ್ಲಿ ಇಂಡಿಯಾ ಸರ್ಕಾರದವರು 22.91 ಲಕ್ಷದ ಒಂದು ಟ್ರೈನಿಂಗ್ ಸ್ಕೀಮಿಗೆ ಮಂಜೂರಾತಿ ನೀಡಿದರು. ಆದರೆ ನಂತರ 1ನೇ ಆಗಸ್ಟ್ 1963 ರಿಂದ ಅದನ್ನು ನಿಲ್ಲಿಸಲು ತೀರ್ಮಾನಿಸಿದರು. ಇಂಥ ಸ್ಕೀಮು ನಮಗೆ ಬೇಡ ಎಂದು ಹೇಳುವ ಧೈರ್ಯವಾಗಲಿ ಅಥವ ದೂರದೃಷ್ಟಿಯಾಗಲಿ ಸರ್ಕಾರಕ್ಕಿರಬೇಕು ; ಇಲ್ಲ ಒಂದು ಯೋಜನೆ ಬಂದರೆ ಅದನ್ನು ಪರಿಶೀಲಿಸುವುದಕ್ಕೆ ಬುದ್ಧಿ, ಜಾಣ್ಮೆ ಕಾಲ, ಮನಸ್ಸು ನಮ್ಮ ರಾಜ್ಯ ಸರ್ಕಾರಕ್ಕಿರಬೇಕು. ಅವರು ಕೊಟ್ಟಿದ್ದೆಲ್ಲಾ ತೆಗೆದುಕೊಳ್ಳಬೇಕು, ಏನು ಹೇಳಿದರೆ ಅದನ್ನು ಮಾಡಬೇಕು ಎಂದು ಹೇಳು ವುದಕ್ಕೆ ಇದೊಂದು ಒಳ್ಳೆಯ ಉದಾಹರಣೆ. ಆಮೇಲೆ 7 ಲಕ್ಷ ಚಿಲ್ಲರೆ ರೂಪಾಯಿಗಳು ಖರ್ಚಾಗಿವೆ, ಅದಕ್ಕೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಮೊದಲು ಸಾಲ ತಂದು ಕೊಡಿ ಎಂದು ಹೇಳಿದರು

(ಶ್ರೀ ಎಸ್. ಗೋಪಾಲ ಗೌಡ)

ಎಂದು ತಿಳಿಸುವ ಒಂದು ಉದಾಹರಣೆ ಸಾಕು. ಇದರಿಂದ ಕೇಂದ್ರದ ನೆರವು ದೊರೆಯುತ್ತದೆಂದು ರಾಜ್ಯ ಸರ್ಕಾರ ಕಣ್ಣುಮುಚ್ಚಿಕೊಂಡು ನಡೆಸುವ ಪ್ರಯೋಗದ ಪರಿಣಾಮವೇನು ಆಗುತ್ತದೆಂಬುದನ್ನು ತಿಳಿಯಬಹುದು, ಯೋಜನೆಯ ಫಲಶ್ರುತಿಯನ್ನು ನಾವು ಅರ್ಥಮಾಡಿಕೊಳ್ಳಬಹುದು.

ಟೌನ್ ಪ್ಲಾನಿಂಗ್ ಹಾಗೂ ನ್ಯಾಷನಲ್ ಹೈವೆ ಸರ್ವೆಗಾಗಿ ಸ್ವಲ್ಪ ಪಿ.ಡಬ್ಲ್ಯು.ಡಿ. ನವರು ಸಿಬ್ಬಂದಿಯನ್ನು ನೇಮಕ ಮಾಡಿದ್ದಾರೆ, 1ನೆಯ ಬೇಡಿಕೆಯಲ್ಲಿ ಇದಕ್ಕೆ ಹಣ ಕೇಳಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆ ಬಗ್ಗೆ ಸ್ವಲ್ಪ ಹೊರಗೆ ಹೋಗಿ ಒಂದು ವಿಷಯ ಹೇಳಲು ಇಷ್ಟಪಡುತ್ತೇನೆ. ಈ ದಿವಸ ಯಾವುದೋ ಕಾರಣದಿಂದ ಅಸಿಸ್ಟೆಂಟ್ ಇಂಜನಿಯರು ಮತ್ತು ಜೂನಿಯರ್ ಇಂಜನಿಯರುಗಳಿಗೆ ಸರಿಯಾದ ಜಾಗ ಮತ್ತು ಕೆಲಸ ತೋರಿಸುತ್ತಿಲ್ಲ, ದೊಡ್ಡ ಇಂಜನಿಯರ, ಆಫೀಸಿನ ಎದುರಿಗೆ ನೂರಾರು ಜನರು ತಿಂಗಳುಗಟ್ಟಲೆ ಜಾಗ ತೋರಿಸಿ, ಎಂದು ಅಲೆದಾಡುವುದನ್ನು ನೋಡಬಹುದು.

44ನೆಯ ಡಿಮ್ಯಾಂಡಿನಲ್ಲಿ ಕೈಗಾರಿಕೆಗಳಿಗೆ ಸಂಬಂಧಪಟ್ಟ ಕೆಲವು ಬೇಡಿಕೆಗಳಿವೆ. ದೀಪಕ್ ಇನ್ಸುಲೇಟೆಡ್ ಕೇಬಲ್ ಕಾರ್ಪೊರೇಷನ್ ವಿಷಯದಲ್ಲಿ ಹೆಚ್ಚು ಮಾಹಿತಿಯಿಲ್ಲ. ಅದು ಯಾವುದು? ಕೇಬಲ್ ಕಾರ್ಪೊರೇಷನ್ ಎಂದು ನಮೂದು ಮಾಡಲಾಗಿದೆ. ಬಾಳೆಹಣ್ಣಿನ ಅಭಿವೃದ್ಧಿಯ ಬಗ್ಗೆ ಮದ್ರಾಸಿನ ಕಾರ್ಪೊರೇಷನ್ನಿನಲ್ಲಿ ಒಂದು ಲಕ್ಷ ಚಿಲ್ಲರೆ ಬಂಡವಾಳ ಹಾಕಬೇಕೆಂದಿದ್ದಾರೆ, ನ್ಯಾಷನಲ್ ಪ್ರಾಜೆಕ್ಟ್ಸ್ ಕನಸ್ಟ್ರಕ್ಷನ್ ಕಾರ್ಪೊರೇಷನ್ ಎಂದು ದೆಹಲಿಯಲ್ಲಿರುವುದಕ್ಕೆ 5 ಲಕ್ಷ ರೂಪಾಯಿಗಳನು ಕೊಟ್ಟಿದ್ದಾರೆ. ಮೈಸೂರು ಸ್ಟೇಟ್ ಹ್ಯಾಂಡಿ ಕ್ರಾಫ್ಟ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನಿಗೆ 5 ಲಕ್ಷ ಹಾಕಿ ಅದನ್ನು ದೊಡ್ಡ ಬೋರ್ಡ್ ಮಾಡಬೇಕೆಂಬ ಆಶೆ ಸರ್ಕಾರಕ್ಕಿದೆ. ಹ್ಯಾಂಡಿ ಕ್ರಾಫ್ಟ್ಸ್ ಬಗ್ಗೆ ವಿ. ಎಸ್. ಪಾಟೀಲರು ಹೇಳಿದರು. ಈ ವಿಷಯದಲ್ಲಿ ನಾನು ಸರ್ಕಾರಕ್ಕೆ ಹೇಳುವುದು ಈ ಕುಶಲ ಕೈಗಾರಿಕೆ ಬಗ್ಗೆ ಏನು ಬೋರ್ಡ್ ಮಾಡಬೇಕೆಂದಿದ್ದಾರೆ ಅದರಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಕ್ರಮ ನೋಡಿದರೆ ಹೊರದೇಶದವರು ಅಥವ ಇತರರು ಬಂದರೆ ಅವರಿಗೆ ತೋರಿಸುವುದಕ್ಕೆ ಮಾತ್ರ ಒಂದು ಷೋ ರೂಂ ಅಥವ ಮ್ಯೂಸಿಯಂ ಇದ್ದಹಾಗೆ ಒಂದು ವ್ಯವಸ್ಥೆ ಮಾಡಿರುವರೇ ಹೊರತು ಸಂಬಂಧಪಟ್ಟ ವಸ್ತುಗಳನ್ನು ತಯಾರು ಮಾಡುವವರಿಗೆ ಯಾವ ರೀತಿಯ ಸಹಾಯವನ್ನೂ ಸರಿಯಾಗಿ ಮಾಡುತ್ತಿರುವಂತೆ ಕಾಣಲಿಲ್ಲ. ಉದಾಹರಣೆಗೆ ಸಾಗರ, ಸೊರಬ, ಕಾರವಾರ ಮುಂತಾದ ಕಡೆಗಳಲ್ಲಿ ಗುಡಿಗಾರರಿದ್ದಾರೆ, ಅವರು ಅನೇಕ ರೀತಿಯ ಸಾಮಾನುಗಳನ್ನು ತಯಾರಿಸುತ್ತಾರೆ. ಅವರಿಗೆ ನೆರವು ನೀಡಲು ಯಾವ ಸಮಗ್ರ ಯೋಜನೆಯೂ ತಯಾರಾಗಿಲ್ಲ.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರೆ).—ಸರ್ಕಾರ ಸಭೆಯ ಮುಂದಿಟ್ಟಿರುವ ಈ ಸಪ್ಲಿಮೆಂಟರಿ ಬಡ್ಜೆಟ್ಟನ್ನು ನೋಡಿದರೆ ಯಾವ ಒಂದು ಯೋಜನೆಯನ್ನೂ ಮುಂದಾಗಿ ತಯಾರಿಸಿಲ್ಲವೆಂದು ಒದಗಿಸಿರುವ ಅಂಕಿಸಂಖ್ಯೆಗಳಿಂದ ಗೊತ್ತಾಗುತ್ತದೆ. 10ನೆಯ ಡಿಮ್ಯಾಂಡಿನಲ್ಲಿ ರಾಜ್ಯಪಾಲರ ವಸತಿಗೃಹಕ್ಕೆ ಸಂಬಂಧಪಟ್ಟ ರಿಪೇರಿಗೆ ಒಂದೆಡೆ ಇಂಪ್ರೂವ್‌ಮೆಂಟಿಗೆ ಎಂದು, ಇನ್ನೊಂದೆಡೆ ಹೀಗೆ ಎರಡು ಕಡೆ 50 ಸಾವಿರ ರೂಪಾಯಿಗಳ ಬೇಡಿಕೆ ಇದೆ. ವಸತಿಗೃಹದಲ್ಲಿ ಯಾವ ಇಂಪ್ರೂವ್‌ಮೆಂಟ್, ಮತ್ತು ಯಾವ ರಿಪೇರಿ ಎಂಬದು ನಮ್ಮೆಲ್ಲರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಯಾವುದೊಂದು ಎಸ್ಟಿಮೇಟು ಯೋಜನೆ ಇಲ್ಲವೆಂದು ಕಾಣುತ್ತದೆ. ಇನ್ನು ಕಾರು ಮುಂತಾದ್ದಕ್ಕೆ ಒಂದು ಲಕ್ಷ 2 ಸಾವಿರ ರೂಪಾಯಿಗಳನ್ನೊದಗಿಸುವುದು ಈ ಕಷ್ಟಕಾಲದಲ್ಲಿ ಅದೊಂದು ದೊಡ್ಡ ಸಂಖ್ಯೆ. ಅದು ಕೂಡ ಸ್ವಲ್ಪ ಹೆಚ್ಚೆಂದು ಎಲ್ಲರಿಗೂ ಕಾಣುತ್ತದೆ. ಸರ್ಕಾರ ಈ ವಿಚಾರಗಳಲ್ಲಿ ಮುಂದಾಗಿ ಅಂದಾಜು ಪಟ್ಟಿ ಇತ್ಯಾದಿ ಕಾರ್ಯಕ್ರಮ ಕೈಗೊಂಡಿಲ್ಲ. 20ನೆಯ ಡಿಮಾಂಡಿನಲ್ಲಿ ತೋಟಗಳಿಗಾಗಿ ವ್ಯವಸಾಯ ಇಲಾಖೆಗೆ ಹಣ ಮೀಸಲಾಗಿದೆ. ಮೈಸೂರು ಮತ್ತು ಬೆಂಗಳೂರುಗಳಲ್ಲಿ ಕಬ್ಬನ್ ಪಾರ್ಕ್, ಲಾಲ್‌ಬಾಗ್ ಮುಂತಾದವುಗಳಿಗಾಗಿ ಉತ್ತಮವಾಗಿ ಅಭಿವೃದ್ಧಿಯ ಬಗ್ಗೆ ವಿಶೇಷ ಗಮನಕೊಡುತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ —ಅಧ್ಯಕ್ಷರು ಮತ್ತು ಮಂತ್ರಿಗಳ ಮನೆಯ ಮುಂದೆ ಕೊಡಗಳನ್ನಿಡುವುದಕ್ಕೆ ಏರ್ಪಾಡು ನಡೆದಿದೆಯೇ ಹೊರತು ಕಬ್ಬನ್ ಪಾರ್ಕಿಗಲ್ಲ.

Mr. SPEAKER.—The remark is objectionable and unfounded, and not fit to be made on the floor of the House. He must be prepared to take the consequences of it. In fact, he should have been wise; by not bringing in personalities at all.

ಶ್ರೀ ಗೋಪಾಲ ಸಾಲೆನ್ನ.—ರಾಜ್ಯಪಾಲರ ತೋಟಗಾರಿಕೆಗಾಗಿ ಅಪಾರ ಧನ ಕೇಳುತ್ತಿದ್ದೀರಿ.

ಇದನ್ನು ಯಾವ ಉದ್ದೇಶದಿಂದ ಹೇಳುತ್ತಿದ್ದೇನೆಂದರೆ ಅವುಗಳನ್ನೆಲ್ಲಾ ರಮ್ಯವಾಗಿ ದೇಶದಲ್ಲಿ ನಗರಗಳ ಸೌಂದರ್ಯ ಹೆಚ್ಚುತ್ತದೆ ಹಾಗೆಯೇ ಮಲೆನಾಡು ಜಿಲ್ಲೆಗಳ ಅರಣ್ಯ ಸಂಪತ್ತನ್ನು ಬೆಳಸದೇ ಇರುವುದರಿಂದ ಅವು ಸಮಯಹೋದಹಾಗೆಲ್ಲಾ ನಾಶವಾಗುತ್ತಿವೆ. ಇದನ್ನು ಸರಕಾರ ಗಮನದಲ್ಲಿಟ್ಟುಕೊಳ್ಳಬೇಕು. ಇರಿಗೇಷನ್ನು ವಿಚಾರದಲ್ಲಿ ಹೇಳುವಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರಾವಳಿ ಪ್ರದೇಶದಿಂದ ಹಾದು ಬರುವ ಹತ್ತು ನದಿಗಳಿಗೆ ಸೇರಿರುವ ಹಲವಾರು ಸಾಮಾನ್ಯ ಛಾನಲ್ಲುಗಳನ್ನು (ತೋಡು) ವರ್ಷಂಪ್ರತಿ ಮುಚ್ಚಲ್ಪಡುವ ಮಣ್ಣು ತೆಗೆಸಿ ನೀರಿನ ಸೌಕರ್ಯಮಾಡಿ ಕೊಟ್ಟರೆ ಅಕ್ಕ ಪಕ್ಕದಲ್ಲಿರುವ ಸಣ್ಣ ಸಣ್ಣ ರೈತರಿಗೆ ಕೃಷಿಗಾಗಿ ನೀರು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಅಲ್ಲದೆ ಸಾಮಾನುಗಳನ್ನು ಕಾಲುವೆಗಳ ದಾರಿಯಾಗಿ ಸಾಗಿಸಲಿಕ್ಕೂ ಆಗುತ್ತದೆ. ಇವರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಮುಂಚೆ ಕೇಳಿಕೊಂಡಾಗ ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಸರಿಯಾಗಿ ಪರಿಶೀಲಿಸುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅವರಕಡೆಗೂ ನಾನು ಪ್ರತ್ಯೇಕವಾಗಿ ಕಾಗದವನ್ನು ಬರೆದು ಸಂಪೂರ್ಣ ವಿವರ ತಿಳಿಸಲಿದ್ದೇನೆ. ಸರಕಾರ ದಕ್ಷಿಣ ಕನ್ನಡ ಜಿಲ್ಲೆಯ ಬಡ ರೈತರ ಬಗ್ಗೆ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ಡಿಮ್ಯಾಂಡು 27ರಲ್ಲಿ ಸೋಷಿಯಲ್ ವೆಲ್‌ಫೇರ್ ಬಾಬಿಗಾಗಿ ಮೂವತ್ತು ಸಾವಿರ ರೂಪಾಯಿಗಳನ್ನು I.A.S. ಮತ್ತು I. P. S ತರಬೇತಿಗಾಗಿ ಖರ್ಚುಮಾಡಿದ್ದನ್ನು ಕೊಡಬೇಕೆಂದು ಕೇಳಿದ್ದಾರೆ. ಈ ಯೋಜನೆಯೇನೋ ಒಳ್ಳೆಯದು. ಆದರೆ ಈ ತರಬೇತಿಯಿಂದ ಈ ವಿದ್ಯಾರ್ಥಿಗಳ ಭವಿಷ್ಯದ ಪರಿಣಾಮವೇನು ಎಂಬುದನ್ನು ಸರಕಾರ ಸ್ವಲ್ಪ ಸ್ಥೂಲವಾಗಿ ಪರಿಶೀಲಿಸಿ ಯೋಚನೆ ಮಾಡುವುದಗತ್ಯ. ಇದರಲ್ಲಿ ಮುಖ್ಯವಾಗಿ ಸರಕಾರ ಗಮನಿಸಬೇಕಾದುದೇನೆಂದರೆ ಇಲ್ಲಿ ತರಬೇತಿಗಾಗಿ ಬಂದ ಷೆಡ್ಯೂಲ್ಡ್ ಕ್ಯಾಸ್ಟಿನ ಯಾವ ಜನರು ಪ್ರಥಮವಾಗಿ ಸೆಂಟು ಪರ್ಸೆಂಟಿನಷ್ಟು ಫೇಲ್ ಆಗಿದ್ದಾರೆಂದು ಕೇಳುತ್ತೇನೆ. ಹೀಗೆ ಏಕಾಯಿತು ಎಂದು ಇದನ್ನು ಸರಿಯಾಗಿ ಪರಿಶೀಲಿಸುವುದಗತ್ಯ. ಇಂತಹ ಇನ್ನೊಂದು ಯೋಜನೆ ಅಲಹಾಬಾದಿನಲ್ಲೊಂದು ಆದರೆ, ನಮ್ಮ ಈ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿದ್ದ ಈ ತರಬೇತಿ ಕೇಂದ್ರದಲ್ಲಿ ಸಾಕಷ್ಟು ಪ್ರಗತಿದಾಯಕವಾದ ಉತ್ತಮ ಅಧಿಕಾರಿಗಳನ್ನು ಇಲ್ಲಿ ತರಲಿಕ್ಕಾಗಲಿಲ್ಲವೊ? ದಲಿತ ಉಮೇದ್ವಾರರಿಗೆ I. A. S ಮತ್ತು I. P S. ಪರೀಕ್ಷೆಗಳ ಓಪನ್ ಕಾಂಪಿಟೇಷನ್‌ನಲ್ಲಿ ಬರಲಿಕ್ಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಕೇಂದ್ರ ಸರಕಾರ ಇಂಥಹ ಒಂದು ಒಳ್ಳೆಯ ಉದ್ದೇಶವಿಟ್ಟುಕೊಂಡು ಸ್ಥಾಪಿಸಿದರೂ ಇಲ್ಲೇಕೆ ಈ ರೀತಿ ನೂರಕ್ಕೆ ನೂರು ಮಂದಿಯನ್ನು ಫೇಲು ಮಾಡಿದರು ಎನ್ನುವುದನ್ನು ಕೂಲಂಕಷವಾಗಿ ನೋಡಬೇಕಾಗಿದೆ. ಒಬ್ಬ ವ್ಯಕ್ತಿಯು ಮಾತ್ರ ಆರಂಭದಲ್ಲಿ ಪಾಸಾಗಿ ಬಂದಿರುವುದರ ಸಲುವಾಗಿ (ಅವನೂ ಬಾಯಿದೆರೆ ಪರೀಕ್ಷೆಯಲ್ಲಿ ಪಾಸಾಗಲಿಲ್ಲ) ಸರಕಾರದವರು ಇಪ್ಪತ್ತು ಮೂವತ್ತು ಸಾವಿರದಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇಲ್ಲಿ ತರಬೇತಿಗಾಗಿ ಸೇರಿದ ಎಲ್ಲಾ ವಿದ್ಯಾರ್ಥಿಗಳೂ B. A. ಹಾಗೂ M. A. ಉತ್ತಮವಾಗಿ ಪಾಸಾದವರು ಇಲ್ಲೇಕೆ ಪಾಸುಮಾಡಲಿಕ್ಕಾಗಲಿಲ್ಲ? ಇದರಲ್ಲಿ ಏನಾದರೂ ಒಳಸಂಚಿದೆಯೋ ಎನ್ನುವುದನ್ನು ನಾವಿಲ್ಲಿ ಕೂಲಂಕಷವಾಗಿ ಪರಿಶೀಲಿಸಿ ನೋಡಬೇಕಾಗಿವೆ. ಎಷ್ಟೋ ಜನರು ತರಬೇತಿಯಿಲ್ಲದೇನೆ ಐ. ಎ. ಎಸ್, ಐ. ಪಿ. ಎಸ್. ಪಾಸಾದವರು ಈಗಾಗಲೇ ಹುದ್ದೆಯಲ್ಲಿದ್ದಾರೆ. ಇಲ್ಲೇಕೆ ಆರಂಭದಲ್ಲೇ ಎಲ್ಲವರಿಗೂ ಭವಿಷ್ಯ ಹೀಗಾಯಿತು ಇಲ್ಲಿರುವ ಪ್ರೊಫೆಸರುಗಳೇನಾದರೂ ವಂಚನೆ ಮಾಡಿದ್ದಾರೆಯೇ ಅಥವ ಈ ತರಬೇತಿಯನ್ನು ಕ್ರಮವಾಗಿ ನೋಡುವವರು ಅಯೋಗ್ಯರಾಗಿದ್ದರೆ? ಎಂಬುದನ್ನು ಗಮನಿಸಬೇಕು. ಈ ರೀತಿ 30 ಜನರನ್ನು ತರಬೇತಿಗೆ ಸೇರಿಸಿ ಅವರನ್ನೆಲ್ಲ ಫೇಲುಮಾಡಿಸಿದರೆ ಐ. ಎ. ಎಸ್. ಮತ್ತು ಐ. ಪಿ ಎಸ್‌ಗಳಂತ ಉನ್ನತ ಹುದ್ದೆಗಳಿಗೆ ಈ ಜನಾಂಗದ ಅಭ್ಯರ್ಥಿಗಳೇ ಮುಂದೆ ಸಿಗುವುದಿಲ್ಲವೆಂದಾದರೆ ಅದರಿಂದ ಇತರಿಗೆ ಮುಖ್ಯವಾಗಿ ತಮ್ಮ ತಮ್ಮ ಕೋಮುಗಳ ಅಥವ ಸಂಬಂಧದವರಿಗೆ ಪ್ರಯೋಜನ ಹೊಂದಲಿಕ್ಕೇನಾದರೂ ಒಳಸಂಚು ನಡೆದಿದೆಯೋ ಎನ್ನುವುದನ್ನು ಪರಾಂಬರಿಸುವುದು ಅಗತ್ಯವಿದೆ. ಈ ಮೇಲಿನ ಕಡೆಗೆ ಹೆಚ್ಚು ಗಮನಕೊಡಲೇ ಬೇಕು, ಇದರಲ್ಲಿದ್ದ Board of Examinerಗಳು ಎಂದರೆ ಪರೀಕ್ಷಕರು ಯಾರಿದ್ದರು? ಇಲ್ಲಿ ಸರಿಯಾದ ರಕ್ಷಣೆಗಾಗಿ ಈ ವರ್ಗದ ಪ್ರಾತಿನಿಧ್ಯಕ್ಕಾಗಿ ಷೆಡ್ಯೂಲ್ಡ್ ಕ್ಯಾಸ್ಟು ಪಂಗಡದ ಪ್ರತಿನಿಧಿಗಳು ಇದರಲ್ಲಿರುವಂತೆ ಮುಂಜಾಗರೂಕತೆ ತೆಗೆದುಕೊಳ್ಳಬೇಕು. ಹಾಗಾದರೆ ಇನ್ನು ಮುಂದಾದರೂ ಈ ರೀತಿ ಆಗದಂತೆ ಸರಕಾರ ನೋಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅಲ್ಲದೆ ಒತ್ತಾಯ ಮಾಡುತ್ತೇನೆ.

ಇನ್ನು ಕೈಗಾರಿಕೆಯ ವಿಚಾರದಲ್ಲಿ ಡಿಮ್ಯಾಂಡು 44ರಲ್ಲಿ ಸರಕಾರ ಹಣ ಕೇಳಿದ್ದಾರೆ, ಮದ್ರಾಸಿನಲ್ಲಿರುವ ಒಂದು ಕಾರ್ಪೊರೇಷನ್ನು ಕಡೆಯಿಂದ ಬಾಳೇಹಣ್ಣು ರಫ್ತುಮಾಡಲು ಷೇರುಗಾಗಿ ಧಾರಾಳ ಹಣ ಕೊಟ್ಟಿದ್ದಾರೆ. ಈ ಹಣವನ್ನು ಕೊಡುವುದರ ಹಿನ್ನೆಲೆ ಯೇನು ಎನ್ನುವ ಪ್ರಶ್ನೆಯನ್ನು ಇಲ್ಲಿ ತಿಳಿದುಕೊಳ್ಳಬೇಕಾದುದು ಅತ್ಯಗತ್ಯ. ಏಕೆಂದರೆ ನಮ್ಮ ರಾಜ್ಯಕ್ಕೆ ಈ ಯೋಜನೆಯಿಂದ ಅಷ್ಟು

(ಶ್ರೀ ಗೋಪಾಲ ಸಾಲಿನ್ನ)

ಹೆಚ್ಚೇನು ಅನುಕೂಲಗಳೇನಾಗುತ್ತವೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಡಿಲ್ಲಿಯ ಕೇಂದ್ರ ಹ್ಯಾಡೀಕ್ರಾಫ್ಟ್ ಕಾರ್ಪೊರೇಷನ್ನಿಗಾಗಿ ಇದರಲ್ಲಿ ಪ್ರತ್ಯೇಕವಾಗಿ ಲಕ್ಷಾಂತರ ರೂಪಾಯಿ ಅವಕಾಶ ಮಾಡಿದೆ ಮತ್ತು ಇದರಂತೆ ದೇಶದಲ್ಲ ಇನ್ನೂ ಎಷ್ಟೋ ಕಾರ್ಪೊರೇಷನ್ನುಗಳನ್ನು ಬೆಳೆಸಬೇಕೆಂದು ಕೆಲವು ಲಕ್ಷದಷ್ಟು ಹಣ ವೆಚ್ಚಮಾಡುವುದು ಯಾವ ನ್ಯಾಯ ? ಈ ರೀತಿ ಹಣ ಬೇರೆ ಬೇರೆ ವಿಧದಲ್ಲಿ ಸಂಸ್ಥೆಗಳಲ್ಲಿ ಹಾಕುವುದು ಅಥವ ಯಥೇಚ್ಛವಾಗಿ ಖರ್ಚುಮಾಡಲು ಸಂಬಂಧಪಟ್ಟ ಇಲಾಖೆಯವರು ಅಗತ್ಯವುಳ್ಳ ಪೂರ್ವಯೋಜಿತ ಅಂದಾಜು ಖರ್ಚಿನ ಕಾಗದ ಪತ್ರಗಳೊಂದನ್ನು ತಯಾರಿಸದೇ ಕೇಂದ್ರ ಸರಕಾರದವರ ಕೊಡುತ್ತಿದ್ದಾರೆಂದು ನಾವು ಇಷ್ಟಬಂದಂತೆ ಖರ್ಚು ಮಾಡುವುದು ಸರಿಯಲ್ಲ. ಕೆಲವು ಕಡೆ ಹಣ ಲ್ಯಾಪ್ಸ್ ಆಗುತ್ತದೆ. ಕೆಲವು ಕಡೆ ಅನಾವಶ್ಯವಾಗಿ ಹೆಚ್ಚಾಗಿ ಖರ್ಚು ಆಗುತ್ತದೆ. ಆ ರೀತಿ ರಾಜ್ಯದ ಬೊಕ್ಕಸದ ಹಣ ದುಂದು ವೆಚ್ಚವಾಗಬಾರದು. ಇಂತಹ ಪರಿಸ್ಥಿತಿಗಳು ಮುಂದೆ ಎಂದಾದರೂ ಬರಬಾರದು. ಮುಖ್ಯವಾಗಿ ರಾಜ್ಯದ ಜನರಿಗೆ ಅನುಕೂಲವಾಗುವಂತಹ, ರಾಷ್ಟ್ರೀಯ ಉತ್ಪನ್ನ ಹೆಚ್ಚಾಗುವ ಯೋಜನಾ ಕಾರ್ಯಗಳನ್ನು ಸರಕಾರ ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ. (ಕಾಪು) ಸ್ವಾಮಿ, ಈಗಾಗಲೇ ಮೂರು ತಿಂಗಳಾಗುವುದರೊಳಗಾಗಿ ನಮ್ಮ ಮಾನ್ಯ ಜನತಾಸರಕಾರ ಕೋಟ್ಯಾಂತರ ರೂಪಾಯಿಗಳ ಹೆಚ್ಚುವರಿ ಬೇಡಿಕೆಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಇದರಲ್ಲ 3,61,9[illegible],700 ರೂಪಾಯಿಗಳಷ್ಟು ಹೆಚ್ಚುವರಿ ಬೇಡಿಕೆಯನ್ನು ಕೇಳಿದ್ದಾರೆ. ಒಟ್ಟಿನಲ್ಲಿ 5,21,570 ರೂಪಾಯಿ ಹಣ ಬೇಕಾಗಿದೆ ಎಂದು ಇಷ್ಟು ದೊಡ್ಡ ಮೊತ್ತವನ್ನು ತಮ್ಮ ಕೈಯಲ್ಲಿ ಕೊಡುವಾಗ ನಾವಾದರೂ ಕೆಲವು ವಿಷಯಗಳನ್ನು ಆಲೋಚನೆಮಾಡಿ ನಮ್ಮ ಸಲಹೆಗಳನ್ನು ನಿಮ್ಮ ಮುಂದೆ ಇಡುವುದು ನಮ್ಮ ಆದ್ಯಕರ್ತವ್ಯ. ತಾವು ಈಗ ತಂದಿರುವ ಒಟ್ಟು ಬೇಡಿಕೆಯಾದ 5,21,570 ಲಕ್ಷ ರೂಪಾಯಿಗಳಲ್ಲಿ 4,85,000 ಸಾವಿರ ರೂಪಾಯಿಗಳಷ್ಟನ್ನು ನೂತನ ರಾಜ್ಯಪಾಲರಿಗಾಗಿ ಖರ್ಚುಮಾಡುತ್ತಿದ್ದೀರಿ. ಈ ಹಣ ಖರ್ಚುಮಾಡುವಾಗ ಈ ದೇಶದ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಖರ್ಚುಮಾಡಬೇಕಾಗುತ್ತದೆ. ತಮ್ಮ ಹಣಕಾಸಿನ ಭಂಡಾರ ಬರೀ ಕಾಂಗ್ರೆಸ್ಸೆ ತುಂಬಿದ ಜನತೆಯಿಂದ ತುಂಬಿರುವ ಭಂಡಾರವಲ್ಲ. ದೇಶದ ಕೋಟ್ಯಾಂತರ ಜನ ಹೊಟ್ಟೆಗೆ ಹಿಟ್ಟಿಲ್ಲದ ಬಡ ಜನರ ಪ್ರತಿಯೊಂದು ತೊಟ್ಟು ರಕ್ತದಿಂದ ಉತ್ಪನವಾದ ಪ್ರತಿಯೊಂದು ನಯಾಪೈಸಾಗಳಿಂದ ತುಂಬಿದ ಭಂಡಾರ ಎನ್ನುವುದನ್ನು ಲಕ್ಷಕ್ಕೆ ತೆಗೆದುಕೊಂಡು ತಾವು ಹಣ ಖರ್ಚುಮಾಡಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ನೂತನ ರಾಜ್ಯಪಾಲರು ಮಿಲಿಟರಿಯಲ್ಲಿದ್ದವರು. ಅವರು ಕಲ್ಲು ಮುಳ್ಳುಗಳಲ್ಲಿ ನಡೆದು ಗುಡ್ಡಗಾಡಿನಲ್ಲಿ ಸುತ್ತಿದ್ದಂತಹವರು. ಅವರು ಇಷ್ಟೊಂದು ವಿಲಾಸಮಯವಾದ ಜೀವನವನ್ನು ಇಲ್ಲ ಮಾಡಬೇಕೇ ?

Mr. SPEAKER.—Is he sitting on judgment ? I would appeal to him not to bring in personalities. It is not proper to let loose here what he feels.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನನ್ನ ಮನಸ್ಸಿನಲ್ಲಿ ಇಲ್ಲ ರಾಜ್ಯಪಾಲರಾಗಿರುವವರ ಬಗ್ಗೆ ಹೇಳುತ್ತಿಲ್ಲ, ನಮ್ಮ ಮುಖಂಡರುಗಳು ತಮ್ಮ ಪ್ರತಿಷ್ಠೆಯನ್ನು, ಪ್ರಾಶಸ್ತ್ಯವನ್ನ ತೋರಿಸುವುದಕ್ಕಾಗಿ ರಾಜ್ಯಪಾಲರು ಇಷ್ಟೊಂದು ವಿಲಾಸಮಯವಾದ ಜೀವನವನ್ನು ನಡೆಸುವುದಕ್ಕಾಗಿ ಇವರಿಗೆ ನೀರಿನ ಸರಬರಾಜು ಮಾಡುತ್ತಾರೆಯೋ ಎನ್ನುವ ಸಂಶಯ ನನ್ನಲ್ಲಿ ಅಳವಡಿಸಿಕೊಂಡಿದೆ. 4,85,000 ರೂಪಾಯಿಗಳ ಖರ್ಚಿನಲ್ಲಿ ಮಾಡುವುದರ ಹಿನ್ನೆಲೆಯೇನು ಎನ್ನುವುದನ್ನು ನೋಡುವಾಗ-ಕೆಲವು ವಿಷಯಗಳು ಬಿಟ್ಟರೆ-ಪ್ರಮಾಣದಲ್ಲಿ ಹೇಳುವಂತ ಇದೇನು ದೇವೇಂದ್ರನ ಅಮರಾವತಿ ರಾಜ್ಯದ ಉಪವನವನ್ನು ನೋಡುವಂತಹ ಪರಿಸ್ಥಿತಿ ಇದೆ ಎಂದು ನನಗೇನೋ ತೋರುತ್ತಿದೆ. 50 ಸಾವಿರ ರೂಪಾಯಿಗಳಷ್ಟನ್ನು ರಾಜ್ಯಪಾಲರ ಉದ್ಯಾನವನಗಳಿಗಾಗಿ ಇಲ್ಲ ಖರ್ಚುಮಾಡುತ್ತಿದ್ದಾರೆ.

ನಮ್ಮ ಮೈಸೂರು ರಾಜ್ಯ ಇಡೀ ಹಿಂದೂಸ್ಥಾನದಲ್ಲೇ ಈ ಉದ್ಯಾನವನಗಳಿಗೆ ಒಂದು ಹೆಸರುವಾಸಿಯಾದಂಥ ರಾಜ್ಯವಾಗಿದೆ. ಹಾಗೆ ಹೇಳುತ್ತಿರುವಾಗ ಇಲ್ಲಿ ಇನ್ನೊಂದು ಪ್ರತ್ಯೇಕ ಉದ್ಯಾನವನವನ್ನು ನಿರ್ಮಿಸಲು ಈ ಬಡಬೋರೇಗೌಡನ ಹಣವನ್ನೇಕೆ ಖರ್ಚುಮಾಡುತ್ತಿದ್ದಾರೋ ನನಗದು ತಿಳಿಯದು.

ಶ್ರೀ ಬಿ. ಡಿ. ಜತ್ತಿ.—ಪ್ರತ್ಯೇಕವಾದ ಉದ್ಯಾನವನ ಎಂದು ಎಲ್ಲಿ ಹೇಳಿದೆ ?

ಶ್ರೀ ಭಾಸ್ಕರ ಸೆಟ್ಟಿ.—ಇಲ್ಲ ಗಾರ್ಡನ್‌ಗಾಗಿ 50 ಸಾವಿರ ರೂಪಾಯಿಗಳೆಂದು ಹೇಳಿರತಕ್ಕದ್ದರ ಅರ್ಥವಾದರೂ ಏನು? ಹಾಗೇ ಈ ಉದ್ಯಾನವನದ ವಿಚಾರವನ್ನು ನೋಡುವುದಾದರೆ, ಈ ಉದ್ಯಾನವನದ ಕಂಟ್ರಾಕ್ಟನ್ನು ಶ್ರೀಮಾನ್ ಜತ್ತಿಯವರೇ ತೆಗೆದುಕೊಂಡು ಇವರು ದೇವಲೋಕಕ್ಕೆ ಹೋಗಿ ಅಲ್ಲಿಂದ ಗಿಡಗಳನ್ನು ತಂದು ಇಲ್ಲಿ ನಡುತ್ತಾರೇನೋ ಎಂಬ ಭಾವನೆ ಬರುತ್ತಿದೆ!

ಇನ್ನು 20ನೆಯ ಡಿಮ್ಯಾಂಡಿಗೆ ಬಂದರೆ: ಈ ಬಾಬಿಗೆ 32,50,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಇಂಟೆನ್ಸೀವ್ ಅಗ್ರಿಕಲ್ಚರಲ್ ಡಿಸ್ಟ್ರಿಕ್ಟ್ ಪ್ರೋಗ್ರಾಮಿಗೆಂದು 5 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಇದನ್ನು ಬಿಟ್ಟರೆ ಇನ್ನು ಇಂಟೆನ್ಸೀವ್ ರೈಸ್ ಕಲ್ಟಿವೇಷನ್ ಪ್ರೋಗ್ರಾಮಿಗೆಂದು 2 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜನರು ಈ ತೀವ್ರತರ ಭತ್ತದ ಕೃಷಿ ವ್ಯವಸಾಯ ಈ ಹೊತ್ತು ಬರಬಹುದು, ನಾಳೆ ಬರಬಹುದು ಎಂದು ಬಾಯಿಬಿಟ್ಟುಕೊಂಡು ಕಾದಿದ್ದರು. ಅದರೆ ಹಿಂದೆ ಯಾರೋ ಒಬ್ಬ ಹುಡಗನು ಹುಲಿ ಬಾರದಿದ್ದಾಗ ಹುಲಿ ಬಂತು, ಹುಲಿ ಬಂತು ಎಂದು ಹೇಳಿ ನಿಜವಾಗಿಯೂ ಹುಲಿ ಬಂದಾಗ ಹೇಳಿದರೆ ಆ ಹುಡುಗನನ್ನು ಹುಲಿ ತಿಂದುಹಾಕಿತೆಂದು ಹೇಳಿದ ಕಥೆಯಂತಿದೆ ಈ ವಿಚಾರ. ಇಲ್ಲಿಯವರೆಗಾದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ 17 ಬ್ಲಾಕುಗಳಲ್ಲಿ ಒಬ್ಬ ಎಕ್ಸ್‌ಟೆನ್‌ಷನ್ ಆಫೀಸರನ್ನಾದರೂ ನೇಮಕ ಮಾಡಿಲ್ಲ. ಯಾರಿಗೂ ಅಲ್ಲಿ ಕೃಷಿಯ ಅನುಕೂಲವನ್ನು ಇಲ್ಲಿಯತನಕ ಕಲ್ಪಿಸಿಲ್ಲ. ಈಗ ಇಲ್ಲಿ ಒದಗಿಸಿರತಕ್ಕ ಈ ಎರಡು ಲಕ್ಷ ರೂಪಾಯಿಗಳೇನಿದೆ ಇದನ್ನು ಕೇವಲ ಅಧಿಕಾರಿಗಳ ಸಂಬಳ ಸಾರಿಗೆಗಾಗೇ ವಿನಿಯೋಗವಾಗುತ್ತದೆಂದು ತಿಳಿಯಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ತೀವ್ರತಮ ಬತ್ತದ ವ್ಯವಸಾಯಕ್ಕೆ ತುಂಬಾ ಸ್ಕೋಪಿದೆ. ಅಲ್ಲಿ ಈ ಹಣ ಹೀಗೆ ದುರ್ವಿನಿಯೋಗವಾಗದಂತೆ ಸರ್ಕಾರದವರು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 46: ಇದರಲ್ಲಿ ಫ್ಲಡ್‌ಕಂಟ್ರೋಲ್ ಮತ್ತು ಡ್ರೈನೇಜ್ ಕೆಲಸಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ನಮ್ಮ ಪಕ್ಕದ ರಾಜ್ಯವಾದ ಕೇರಳದಲ್ಲಿ ಈ ನೆರೆನಿಯಂತ್ರಣದ ಯೋಜನೆಯನ್ನು ಮಾಡಿ ಅದನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅಡಕ ಮಾಡಿ ಅದು ಅಲ್ಲಿ ಬಹಳ ದಿವಸಗಳಿಂದಲೂ ನಡೆದುಕೊಂಡು ಬರುತ್ತಿದೆ. ಆದರೆ ಆ ನೆರೆ ನಿಯಂತ್ರಣದ ಸಮಿತಿಯಲ್ಲಿ ನಮ್ಮ ರಾಜ್ಯದ ಪ್ರತಿನಿಧಿಗಳ್ಯಾರೂ ಇಲ್ಲ. ನಮ್ಮ ಮುಖ್ಯಮಂತ್ರಿಗಳನ್ನು ಕೇಳಿದರೆ ನಮ್ಮ ಮೈಸೂರಿನಲ್ಲಿ ಈ ನೆರೆನಿಯಂತ್ರಣದ ಅವಶ್ಯಕತೆಯಿಲ್ಲವೆಂದು ಹೇಳುತ್ತಿರುವುದು ಅವರಿಗೆ ಈ ರಾಜ್ಯದ ಮಾಹಿತಿ ಎಷ್ಟರಮಟ್ಟಿಗಿದೆ ಎಂಬುದನ್ನು ಅದು ಸೂಚಿಸುತ್ತಿದೆ. ಈವರೆಗೆ ಕೇಂದ್ರ ಸರ್ಕಾರ ನೀಡಿರತಕ್ಕ ಸುಮಾರು 60 ಕೋಟಿ ರೂಪಾಯಿಗಳಲ್ಲಿ ನಮ್ಮ ರಾಜ್ಯಕ್ಕೆ ಒಂದು ನಯೇ ಪೈಸೇ ಕೂಡ ಸಿಕ್ಕಿಲ್ಲ. ನಾವು ಕೇಳಿಯೂ ಇಲ್ಲ. ಈ ನೆರೆನಿಯಂತ್ರಣದ ಒಂದು ಯೋಜನೆಯನ್ನು ನಮ್ಮ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ರೂಪಿಸಬೇಕಾದ ಜಗತ್ಯ ಬಹಳವಾಗಿದೆ. ಈಗಾಗಲೇ ಕೇರಳದಲ್ಲಿ ಅಲ್ಲಿ 41 ನದಿಗಳು ಹರಿಯುತ್ತಿದ್ದು ಅವರಾಗಲೇ 22 ಕೋಟಿ 40 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಈ ಒಂದು ಯೋಜನೆಯನ್ನು ಮಾಡಿ ನೆರೆಹಾವಳಿಯನ್ನು ಇಲ್ಲಿ ತಪ್ಪಿಸಬೇಕೆಂದು ಹೇಳುತ್ತೇನೆ. ಅಂತೂ ವ್ಯವಸಾಯದ ವಿಷಯದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿನ ನಿಗಾ ಕೊಡಬೇಕಾದ್ದು ಅಗತ್ಯ.

ಇನ್ನು ಇದರಲ್ಲಿ ಗೋಲ್ಡ್ ಕಂಟ್ರೋಲ್ ಆಜ್ಞೆಯ ವಿಚಾರವನ್ನು ತಿಳಿಸಿದ್ದಾರೆ. ನಮ್ಮ ಜಿಲ್ಲೆಗೆ ಇದರಿಂದ ಒಂದು ಕಾಸಿನ ಪ್ರಯೋಜನವೂ ದೊರೆತಿಲ್ಲ. ಸರ್ಕಾರ ಇಷ್ಟು ಹಣವನ್ನೇಕೆ ಖರ್ಚು ಮಾಡಿದೆ ಎಂಬುದರ ಬಗ್ಗೆ ನಮಗೆ ಸಾಕಷ್ಟು ಅಂಕಿಅಂಶಗಳನ್ನು ಸರ್ಕಾರದವರು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಆಜ್ಞೆಯ ಸಲುವಾಗಿ ಯಾರು ಕೆಲಸವನ್ನು ಕಳೆದುಕೊಂಡಿದ್ದಾರೋ ಅವರಿಗೇನೂ ಅನುಕೂಲ ಸಿಕ್ಕಿಲ್ಲ. ಸಿಕ್ಕಿದ್ದರೂ ಅದು ಕೇವಲ ಎಲ್ಲೋ ಒಬ್ಬಿಬ್ಬ ಖಾದೀ ಪುಢಾರಿಗಳಿಗೆ ಅವರ ಕಿಸೆಯಲ್ಲಿ ಬಿದ್ದಿರಬಹುದು. ನಮ್ಮ ಜಿಲ್ಲೆಗೆ ಒಂದು ಕಾಸನ್ನೂ ಕೊಟ್ಟಿಲ್ಲ. ಇವರಿಗೆ ಈಗಲಾದರೂ ಕೆಲಸಗಳನ್ನು ಒದಗಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6 P.M.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಈ ದಿವಸ ಇಟ್ಟಿರತಕ್ಕ ಈ ಸಪ್ಲಿಮೆಂಟರಿ ಗ್ರಾಂಟುಗಳೇನಿವೆ ಇವುಗಳ ಬಗ್ಗೆ ಮಾತನಾಡುವಾಗ ನಾವು ಇವುಗಳ ಒಂದು ಹಿನ್ನೆಲೆಯನ್ನು ಅರಿತುಕೊಳ್ಳಬೇಕು. ಇದರ ಹಿನ್ನೆಲೆ ಎಷ್ಟು ಚೆನ್ನಾಗಿದ್ದರೆ ನಮ್ಮಲ್ಲಿ ಆಹಾರ ಧಾನ್ಯಗಳ ಬೆಲೆಯೂ ಅಷ್ಟೇ ಜಾಸ್ತಿಯಾಗುತ್ತದೆ. ಇದರಿಂದ ನಮ್ಮ ಹಣಕಾಸಿನ ವೆಚ್ಚಗಳು ಯಾವರೀತಿ ನಡೆಯುತ್ತಿವೆ ಎಂಬುದನ್ನು ಜನರು ಒಂದು ಚುರುಕಾದ ದೃಷ್ಟಿಯಿಂದ ನೋಡುತ್ತಿರುವುದರಿಂದಲೇ ಅವರು ನಮ್ಮ ಆಡಳಿತ

(ಶ್ರೀ ವಿ. ಎಂ. ದೇವ್)

ಒಂದು ಭ್ರಷ್ಟಾಚಾರದ ಕಣಜವಾಗಿದೆ ಎಂದು ಹೇಳುತ್ತಿದ್ದಾರೆ. ಅಧ್ಯಕ್ಷರು ದಯಮಾಡಿ ನನಗೇನೋ ಒಂದು ಅವಕಾಶವಿತ್ತ ಕಾರಣ ನಾನೀಗ ಇಲ್ಲಿ ಕೆಲವು ಅಂಶಗಳನ್ನು ತಿಳಿಸಬೇಕೆಂದಿದ್ದೇನೆ.

ವ್ಯವಸಾಯ ಇಲಾಖೆಯಲ್ಲಿ ಆಹಾರೋತ್ಪಾದನೆಗೆ, ಒಳ್ಳೆಯ ಬೀಜದ ಉತ್ಪಾದನೆಗೆ, ಸಸ್ಯ ಸಂರಕ್ಷಣೆಗೆ ಹಾಗೂ ತೀವ್ರ ವ್ಯವಸಾಯಕ್ಕೆ ಇದರಲ್ಲಿ ಸುಮಾರು 21 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇನ್ನೂ ಹೆಚ್ಚು ಆಹಾರ ಬೆಳೆಯಬೇಕಾದರೆ ರೈತರಿಗೆ ಏನೇನು ಅನುಕೂಲಗಳು ಬೇಕೋ, ಹಣದ ಸೌಕರ್ಯ ಎಷ್ಟರಮಟ್ಟಿಗೆ ಕೊಡಬೇಕೋ ಆ ಒಂದು ದೃಷ್ಟಿಯಿಂದ ಇದನ್ನು ಮಾಡಿಲ್ಲವೆಂದು ನನಗೆ ತೋರುತ್ತದೆ. ಇದಕ್ಕಾಗಿ ನಾನು ಕೇಳುವುದು ಇಷ್ಟು. ಬರೀ ಸೈಂಟಿಫಿಕ್ ರಿಸರ್ಚ್, ಲ್ಯಾಂಡ್ ಪ್ರೊಟೆಕ್ಷನ್ ಆರ್ಗನೈಸೇಷನ್—ಇವುಗಳನ್ನು ಎಫೆಕ್ಟಿವ್ ಆಗಿ ಮಾಡುವುದಾದರೆ ಆಗ ಮಾತ್ರ ಇಲಾಖೆಯಲ್ಲಿ ಬಹಳ ಹೆಚ್ಚಿಗೆ ಕೆಲಸವಾಗುತ್ತದೆ ಮತ್ತು ಈ ಇಲಾಖೆಯ ಮೂಲಕ ಹೆಚ್ಚು ಬೆಳೆಯೂ ಆಗುತ್ತದೆ. ಈಗ ದೊಡ್ಡ ಪ್ರಮಾಣದ ಫಾರಂಗಳಲ್ಲಿ ಅದನ್ನು ತೆಗೆದುಕೊಂಡು ಏನಾದರೂ ಮಾಡಬೇಕಾದರೆ ಇನ್ನೂ ಪ್ಲಾಂಟ್ ಪ್ರೊಟೆಕ್ಷನ್ ಆಗಲಿಲ್ಲವೆಂದು ಹೇಳುತ್ತಾರೆ. ಹಳೆಯಕಾಲದಲ್ಲಿ ಯಂತ್ರ ಯುಗಕ್ಕೆ ಮುಂಚೆ ಯಾವ ತರಹ ವ್ಯವಸಾಯವಿತ್ತೋ ಆ ರೀತಿಯಲ್ಲಿರುವುದು ಒಳ್ಳೆಯದು. ಸ್ವಲ್ಪ ಹಣವನ್ನು ಸ್ಪ್ರೇಯರ್ಸ್‌ಗಾಗಿ ಉಪಯೋಗಿಸಬೇಕು.

ಇನ್ನೊಂದು ವಿಷಯ. ಸೀಡ್ ಫಾರಮ್ಸ್‌ಗಳಲ್ಲಿ ಸಂಬಳ ಕೊಟ್ಟು ಆಹಾರೋತ್ಪಾದನೆ ಮಾಡಿ ಎಂದು ಹೇಳುತ್ತಾರೆ. ಆದರೆ ಆಯವ್ಯಯವನ್ನು ನೋಡಿದರೆ ಸರ್ಕಾರದಲ್ಲಿ ಖರ್ಚು ಉಳಿಯುವುದಿಲ್ಲ. ಅವನು ಎಷ್ಟು ಕೆಲಸ ಮಾಡಬೇಕೋ ಅಷ್ಟು ಮಾಡಲೇ ಬೇಕು. ಸೀಡ್‌ಗ್ರೋಯರ್ಸ್ ಉತ್ಪಾದನೆ ಜಾಸ್ತಿ ಆಗುವ ಹಾಗೆ ಮಾಡಬೇಕಾದರೆ ರೈತನಿಗೆ ಒಂದನೆಯದಾಗಿ ಪ್ರೊಟೆಕ್ಷನ್ ಬೇಕು. ಅವನ ಜಮೀನು ಪರಭಾರೆಯಾಗಬಾರದು. ಎರಡನೆಯದು ಅವನಿಗೆ ಒಳ್ಳೆಯ ಇಂಪ್ಲಿಮೆಂಟ್ಸ್ ಬೇಕು—ಇವನ್ನು ಜನಗಳಿಗೆ ಒದಗಿಸುವುದಕ್ಕೋಸ್ಕರ ಸೀಡ್‌ಫಾರಂಗಳ ಜೊತೆಗೆ ಇಂಪ್ಲಿಮೆಂಟುಗಳನ್ನು ಸಾಮೂಹಿಕವಾಗಿ ಲೋಕಲ್‌ಬಾಡಿ ಮುಖಾಂತರ ಒದಗಿಸುವುದಕ್ಕೆ ಸರ್ಕಾರದವರು ಯೋಚನೆ ಮಾಡಿ ಆ ಸ್ಕೀಮುಗಳನ್ನು ಜಾರಿಗೆ ತರಬೇಕು. ಹೀಗೆ ಒಳ್ಳೆಯ ಸೀಡ್‌ನಿಂದ ಹೆಚ್ಚಿಗೆ ಬೆಳೆ ಬೆಳೆಯಬಹುದು. ಎಸ್ಟಾಬ್ಲಿಷ್‌ಮೆಂಟಿಗೆ ಎಷ್ಟು ಪ್ರತಿಫಲ ದೊರೆಯಬಹುದೋ ಅದು ಇಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಯೋಚನೆ ಮಾಡಿ ಈ ಇಂಪ್ಲಿಮೆಂಟುಗಳು ಚೆನ್ನಾಗಿ ಸಿಗುವ ಹಾಗೆ ಮಾಡಬೇಕು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಜಮೀನು ಯಾರು ಬೇಕಾದರೂ ತೆಗೆದುಕೊಳ್ಳುತ್ತಾರೆಂದರೆ ಜಾಸ್ತಿ ದುಡ್ಡು ಪಡೆಯಬೇಕೆಂಬ ದೃಷ್ಟಿಯಿಂದ ಮಾಡುತ್ತಿದ್ದಾರೆಯೇ ಹೊರತು ಅಲ್ಲಿ ಬೆಳೆಯುವುದಕ್ಕಲ್ಲ.

ಶ್ರೀ ವಿ. ಎಂ. ದೇವ್.—ಇನ್ನು ಇಂಟೆನ್ಸಿವ್ ಅಗ್ರಿಕಲ್ಚರಲ್ ಪ್ರೋಗ್ರಾಂ ಅಂದರೆ ಇದರಲ್ಲಿ ಮುಖ್ಯವಾಗಿ ಉತ್ಪಾದನೆಯಾವುದು ಜಾಸ್ತಿಯಾಗಬೇಕು. ಪ್ರತಿಯೊಂದು ಹಳ್ಳಿಯಲ್ಲೂ ಸಾಗುವಳಿ ಜಮೀನು ನೀರಾವರಿಯಾಗುವುದಲ್ಲದೆ ಅದರ ಜೊತೆಗೆ ಕೆಮಿಕಲ್ ಇಂಡಸ್ಟ್ರೀಸ್ ಡೆವಲಪ್ ಆಗಬೇಕು. ಈಗ ಇಂಟೆನ್ಸಿವ್ ಕಲ್ಟಿವೇಷನ್ ಈ ಇಲಾಖೆಯಲ್ಲಿ ಪ್ರಾರಂಭ ಮಾಡಿದ್ದಾರೆ. ಆದರೆ ಇಲ್ಲಿ ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಈ ದೃಷ್ಟಿಯಿಂದ ಯಾವ್ಯಾವ ಕೆಲಸಕಾರ್ಯಗಳು ಆಗಬೇಕೋ ಅವಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಸಾಯಿಲ್ ಕನ್‌ಸರ್‌ವೇಷನ್ ವಿಷಯ. ಇದರಲ್ಲಿ ರೈತರಿಗೆ 40 ರಿಂದ 80 ರೂಪಾಯಿಗಳ ವರೆಗೂ ತೆರಿಗೆ ಹಾಕುತ್ತಾರೆ. ಇದರಲ್ಲಿ ಬಹಳ ಕಷ್ಟಗಳಿವೆ. ಆ ತರಹ ಏಕೆಂದರೆ ಅಲ್ಲಿ ಸಣ್ಣಸಣ್ಣ ಬಂಡುಗಳಿರುತ್ತವೆ. ಅನೇಕ ಕಡೆಗಳಲ್ಲಿ ಬಂಡುಗಳನ್ನು ಹಾಕಿದ್ದಾರೆ. ಆದರೆ ಎಸ್ಟಾಬ್ಲಿಷ್‌ಮೆಂಟಿಗೆ ಇವರು ದುಡ್ಡು ಕೊಡುತ್ತಾರೆ. ಯಾವಾಗಲೂ ಒಬ್ಬ ಮನುಷ್ಯ ಖರ್ಚುಮಾಡಿದರೆ ಅದಕ್ಕೆ ತಕ್ಕ ಪ್ರತಿಫಲ ಬೇಕು. ಆದರೆ ಈ ಬಂಡಿಂಗುಗಳನ್ನು ಹಾಕಿದರೂ ಕೂಡ ಎತ್ತರವಾದ ಜಮೀನುಗಳಲ್ಲಿ ಹಾಕುತ್ತಾರೆ, ಬಹಳ ತಗ್ಗಿನಲ್ಲಿ ಹಾಕುವುದಿಲ್ಲ. ಒಂದೇ ಸಾರಿ ಈ ಮಸೂದೆ ಇಲ್ಲಿಗೆ ಬರುವುದಕ್ಕೆ ಬದಲಾಗಿ ಬರೀ ಹಳೆಯ ಮ್ಯೆನ್ಯೂರಿನಲ್ಲಿ ಸಸಿಗಳನ್ನು ಮುಫತ್ತಾಗಿ ಕೊಡಿಸಿದರೆ ಆಗ ಕಾಂಟೂರ್ ಬಂಡಿಂಗ್ ಸರಿಯಾಗಿ ಆಗುತ್ತದೆ, ನಿಜವಾಗಿ ಹೆಚ್ಚಿಗೆ ಈಲ್ಡ್ ಸಹ ಆಗುತ್ತದೆ ಕಂದಾಯವೂ ಸರ್ಕಾರಕ್ಕೆ ಹೆಚ್ಚಾಗಿ ಸಿಗುತ್ತದೆ. ಆದರೆ ಹೆಚ್ಚಿಗೆ ಆದಾಯವಿಲ್ಲದೆ ಕೆಲಸಕ್ಕೆ ದಾರಿಯಾಗುವುದಿಲ್ಲ. ತುಮಕೂರು ಜಿಲ್ಲೆಯಲ್ಲಿ ಸಿರಾ ಬಾರ್ಡರಿನಲ್ಲಿ ನಾನು ಇರುವದು. ಅಲ್ಲಿ ಒಂದು ಎಕರೆಗೆ ಒಂದು ಪಲ್ಲಾ, ಎರಡು ಪಲ್ಲಾ ಧಾನ್ಯಗಳನ್ನು ಬೆಳೆಯುತ್ತಾರೆ. ಕಾಂಟೂರು ಬಂಡಿಂಗ್ ಹಾಕಿ ಸುಮಾರು 80 ರೂಪಾಯಿಗಳನ್ನು ಕೊಟ್ಟರೆ ಎಷ್ಟು ಬೆಳೆಯಬಹುದು ಎಂಬುದನ್ನು ಇನ್ನೂ ಕ್ಯಾಲ್‌ಕ್ಯುಲೇಟ್ ಮಾಡಿಲ್ಲ. ನಮಗೆ ಅದು ಹೊಳೆದಿಲ್ಲ. ಅಂತಹ ಕಡೆಗಳಲ್ಲಿ ಯಾವ

ಧಾನ್ಯಗಳನ್ನು ಚೆನ್ನಾಗಿ ಬೆಳೆಯಬಹುದೋ ಅದಕ್ಕಾಗಿ ಎಷ್ಟು ಧನವನ್ನು ಐದಾರು ವರ್ಷಗಳಲ್ಲಿ ಖರ್ಚುಮಾಡಿರುತ್ತಾರೋ ಅದರ ಹತ್ತರಷ್ಟಾದರೂ ಅವನಿಗೆ ಹಿಂದಕ್ಕೆ ಬರುತ್ತದೆ. ಆದ್ದರಿಂದ ಸಾಯಿಲ್ ಕನ್‌ಸರ್‌ವೇಷನ್ ದೃಷ್ಟಿಯಿಂದಾದರೂ ಬದಲು ಮಾಡಿ ಈ ಸಸಿಗಳನ್ನು ಮುಫತ್ತಾಗಿ ಕೊಡಬೇಕು ಅಥವಾ ಕಮ್ಮಿ ಬೆಲೆಗೆ ಕೊಡಬೇಕೆಂದು ಹೇಳುತ್ತೇನೆ. ಇದು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆಯೇ ಹೊರ್ತು ಮತ್ತೇನೇನೂ ಇಲ್ಲ.

ಇನ್ನು ಇದರಲ್ಲಿ ಇನ್‌ವೆಸ್ಟಿಗೇಷನ್ ಸರ್ಕಲ್ ಎಂದು ತೆಗೆದುಕೊಂಡಿದ್ದಾರೆ. ಇವರು ಪಿ.ಡಬ್ಲ್ಯು.ಡಿ.ಯಲ್ಲಿ ಇರ್ರಿಗೇಷನ್ ಬಗ್ಗೆ ಸಿಬ್ಬಂದಿಗಾಗಿ ಎಷ್ಟು ಹಣವನ್ನು ವರ್ಷೇ ವರ್ಷೇ ಸಂಬಳ ರೂಪವಾಗಿ ಖರ್ಚುಮಾಡುತ್ತಿದ್ದಾರೆ ಮತ್ತು ಎಷ್ಟು ಕೆಲಸಗಳಾಗಿವೆ ಎಂಬುದನ್ನು ನೋಡಿದರೆ ಎಷ್ಟೋ ಬ್ರಿಡ್ಜಸ್ ಕೆಟ್ಟುಹೋಗಿವೆ. ಆದರೆ ಇವರು ಎಷ್ಟೋ ದುಡ್ಡನ್ನು ಖರ್ಚುಮಾಡುತ್ತೇವೆ ಮತ್ತು ಹೊಸದಾಗಿ ಜನಗಳಿಗೆ ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಹೇಳುವುದು ಸುಳ್ಳು. ಯಾವ್ಯಾವ ಪ್ರೊಪೋರ್ಷನ್ನಿನಲ್ಲಿ ಇಷ್ಟು ಹಣವಿದ್ದರೆ ಇಷ್ಟು ಬ್ರಿಡ್ಜ್‌ಗಳನ್ನು ಹೆಚ್ಚಿಗೆ ಕಟ್ಟಬೇಕೆಂದು ಇಲಾಖೆಯವರು ಮಾಡಿದ್ದಾರೆಂಬುದನ್ನು ಇವರು ತಿಳಿಯಬೇಕು. ಆದ್ದರಿಂದ ಪಿ.ಡಬ್ಲ್ಯು.ಡಿ. ಯವರೇ ಆಗಲೀ ಅಥವಾ ಸರ್ಕಾರದವರೇ ಆಗಲಿ ಜನ ಹೇಳುವುದನ್ನು ತಾತ್ಸಾರವಾಗಿ ಇಟ್ಟುಕೊಳ್ಳಬಾರದು. ಆದರೆ ಮಾನ್ಯ ಅಧ್ಯಕ್ಷರು ಇಂತಹ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಭಾಷೆ ಯಾವುದಾದರೇನು, ನಿಜವಾಗಿ ಜ್ಞಾನ ಬರಬೇಕಾದರೆ ಸ್ವಲ್ಪ ಶ್ರಮವಹಿಸಬೇಕು. ಈ ಮಸೂದೆಯ 31, 38 ಮತ್ತು 46 ನೇ ಸೆಕ್ಷನ್ನುಗಳ ಪಕ್ಷಿನೋಟ ನೋಡಿದ್ದರಲ್ಲಿ ಏನು ಗೊತ್ತಾಗುತ್ತದೆಂದರೆ ಒಟ್ಟಿನಲ್ಲಿ ಇನ್‌ವೆಸ್ಟಿಗೇಷನ್ ಇನ್ಸ್‌ಪೆಕ್ಷನ್ ಎಂಬುದಾಗಿ ಸುಮ್ಮನೆ ಕಾಲ ಕಳೆಯುತ್ತಿದ್ದಾರೆ. ಅದರಲ್ಲಿ ದುಡ್ಡು ಖರ್ಚುಮಾಡುವುದರಲ್ಲಿ ಆಗಿರುವುದಾದರೂ ಏನು, ಆದಾಯಕ್ಕೆ ಬದಲಾಗಿ ನಷ್ಟವಾಗುತ್ತಿದೆ. ಈಗ ದೇಶ ಕಟ್ಟುವ ಸಂಸ್ಥೆ ಅಂದರೆ ಪಿ.ಡಬ್ಲ್ಯು.ಡಿ. ಅದು ಅದಷ್ಟು ಜಾಗ್ರತೆ ಮುಂದುವರೆಯಬೇಕಾದರೆ ಅಲ್ಲಿ ಬಹಳ ಹೆಚ್ಚು ಕೆಲಸವಾಗಬೇಕಾದರೆ, ಆರ್ಥಿಕಾಭಿವೃದ್ಧಿ ತೀವ್ರವಾಗಿ ಆಗಬೇಕಾಗಿದ್ದರೆ ಎಲ್ಲರಿಗೂ ಗೊತ್ತಿರುವ ಹಾಗೆ ಮಾಡುವುದು ಏನೆಂದರೆ ಇಲಾಖೆಯ ಮೂಲಕ 'ಪೀಸ್ ವರ್ಕ್ ಪೇಮೆಂಟ್' ಮೇಲೆ ತಕ್ಕ ಸಿಬ್ಬಂದಿಯನ್ನು ನೇಮಿಸಿ ಕೆಲಸ ಮಾಡಿಸಬೇಕು. ಇದ' ಎಲ್ಲಾ ಇಲಾಖೆಗಳಲ್ಲೂ ಬರಬೇಕು. ಈ ದೃಷ್ಟಿಯಿಂಥ ಸರ್ಕಾರದವರು ಯೋಚನೆ ಮಾಡಲಿ. ಆದ್ದರಿಂದ ಸಾಯಿಲ್ ಕನ್‌ಸರ್‌ವೇಷನ್ ಮಾಡುವಾಗ ಹೆಚ್ಚಿಗೆ ಸಸಿಗಳನ್ನು ಕೊಟ್ಟು ನಡಿಸಿದರೆ ಒಳ್ಳೆಯದು. ಅವನಿಗೆ ದುಡ್ಡು ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ಸಿಬ್ಬಂದಿಗಾಗಿ ಎಷ್ಟು ಹಣವನ್ನು ಅವನು ಖರ್ಚುಮಾಡ್ಯಾನು ಎಂದು ನಾನು ಹೇಳಬೇಕಾಗಿದೆ. ನನ್ನ ಎಸ್ಟೇಟ್‌ನಲ್ಲಿ ಜಮೀನು 20 ಎಕರೆಗಳಷ್ಟು ಫ್ಲಾಟ್ ಇದೆ. ಅಲ್ಲಿಗೆ ಒಬ್ಬ ಕಾಂಟೂರ್ ಬಂಡಿಂಗ್ ಎಕ್ಸ್‌ಪರ್ಟ್ ಬಂದ. ಅಲ್ಲಿಗೆ ನಾನೇ ಆತನನ್ನು ಕರೆದುಕೊಂಡು ಹೋಗಿ ತೋರಿಸಿದರೆ ಅವನಿಗೆ ಸಾಯಿಲ್ ಕನ್‌ಸರ್‌ವೇಷನ್ ಎಂದರೆ ಗೊತ್ತಿಲ್ಲ. ಆದ್ದರಿಂದ ಈ ಮಸೂದೆಯಲ್ಲಿ ಟೋಪಿಗಳ ಅವಾಂತರ ಮತ್ತು ಹಾವಳಿಯಲ್ಲಿ ಕಸುಬು ಗೊತ್ತಿಲ್ಲದೇ ಇರುವವರು ಸೇರಿಕೊಂಡು ಇಂತಹ ಅಡಕಸ್ಬಿ ಕೆಲಸ ಮಾಡುವುದು ಸರಿಯಲ್ಲ. ರೈತನಾದವನನ್ನು ಈ ವಿಚಾರವಾಗಿ ಕೇಳಿದರೆ ಈಗ ಕಾಂಟೂರ್‌ಬಂಡಿಂಗ್ ಹಾಕುತ್ತಿರುವುದು ಆ ಕಡೆಯಿಂದ ಈ ಕಡೆಗೆ ಹೋಗಿ ಒಂದು ಚೂರು ಅಲ್ಲಿ ನಿಲ್ಲದೆ ಕೊಚ್ಚಿಹೋಗುತ್ತದೆಂದು ಹೇಳುತ್ತಾನೆ. ಆದರೆ ಆರ್ಥಿಕ ಮಂತ್ರಿಗಳು ವ್ಯವಸಾಯದಿಂದ ಜೀವನ ಮಾಡಿಲ್ಲ. ನಾನು ಕೇಳುವುದು ಇಷ್ಟೇ. Have some morality in selecting the right people for the right job. ಈ ದೃಷ್ಟಿಯಿಂದ ಇವರು ಕೆಲಸಮಾಡಿದರೆ ಸರ್ಕಾರದ ದುಡ್ಡು ಹಾಳಾಗುವುದಕ್ಕೆ ಅವಕಾಶವಿಲ್ಲ. ಆ ರೀತಿ ಆಗಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adiourn to meet tomorrow at 12 NOON.

———

The House adjourned at Ten Minutes past Six of the Clock to meet again at Twelve of the Clock on Thursday, the 9th July 1964.

———

WD 3325—100—GPB—13-10-1964